ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 20 ಶನಿವಾರ 2025

₹4

ಸಂಪುಟ: 46 | ಸಂಚಿಕೆ: 154 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮೊದಲನೇ ವರ್ಷದ ಸವಿನೆನಪು



ಜನನ: 01-01-1966

ನಿಧನ: 20-09-2024

ಶ್ರೀಮತಿ ಲಕ್ಷ್ಮಮ್ಮ

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷ ಕಳೆದರೂ ಅನುದಿನವೂ
ನಿಮ್ಮ ನೆನಪಿನಲ್ಲಿರುವ ಹಾಗೂ ಸ್ಮರಿಸುತ್ತಿರುವ

ದುಃಖತಪ್ತರು:

ಪತಿ: ಚೆಲುವರಾಜು, ಹೆಣ್ಣು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು
ಹಾಗೂ ಕುಟುಂಬವರ್ಗದವರು, ಇಲವಾಲ, ಮೈಸೂರು ತಾಲ್ಲೂಕು.

ಮೈಸೂರು ಮಿತ್ರ

ಡಾ.ಬಿ.ಆರ್.ಅಂಬೇಡ್ಕರ್ ಭವನದ ಎರಡನೇ ಹಂತದ ಕಾಮಗಾರಿಗೆ ಇಂದು ಚಾಲನೆ



ಅಂಬೇಡ್ಕರ್ ಭವನದ ಎರಡನೇ ಹಂತದ ಕಾಮಗಾರಿ ಶಂಕುಸ್ಥಾಪನೆ ಕಾರ್ಯಕ್ರಮದ ಅಂಗವಾಗಿ ಶುಕ್ರವಾರ ಸಿದ್ಧತೆ ನಡೆಸಲಾಯಿತು.

ಮೈಸೂರು, ಸೆ.19(ಎಂಕೆ)– ಮೈಸೂರಿನ ದಿವಾನ್ಸ್ ರಸ್ತೆಯಲ್ಲಿ ನಿರ್ಮಾಣವಾಗುತ್ತಿರುವ ಡಾ.ಬಿ.ಆರ್.ಅಂಬೇಡ್ಕರ್ ಭವನದ ಎರಡನೇ ಹಂತದ ಕಾಮಗಾರಿಗೆ ನಾಳೆ (ಸೆ.20) ಶಂಕುಸ್ಥಾಪನೆ ನೆರವೇರಲಿದೆ.

ಅನುದಾನದ ಕೊರತೆಯಿಂದಾಗಿ ಕಳೆದ 12 ವರ್ಷದಿಂದಲೂ ನನೆಗುದಿಗೆ ಬಿದ್ದಿದ್ದ ಅಂಬೇಡ್ಕರ್ ಭವನ ನಿರ್ಮಾಣದ ಎರಡನೇ ಹಂತದ ಕಾಮಗಾರಿಗೆ ಕಡೆಗೂ ರಾಜ್ಯ ಸರ್ಕಾರ 23.83 ಕೋಟಿ ರೂ. ಅನುದಾನಕ್ಕೆ ಪರಿಷ್ಕೃತ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಭವನದ ಬಾಕಿ ಅಭಿವೃದ್ಧಿ ಕಾಮಗಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಚಾಲನೆ ನೀಡಲಿದ್ದಾರೆ.

2012–13ರಲ್ಲಿ ಪ್ರಾರಂಭವಾದ ಅಂಬೇಡ್ಕರ್ ಭವನ ನಿರ್ಮಾಣ ಕಾಮಗಾರಿಗೆ ಈಗಾಗಲೇ ಮೊದಲ ಹಂತದಲ್ಲಿ 20.66 ಕೋಟಿ ರೂ. ವೆಚ್ಚವಾಗಿದ್ದು, ಎರಡನೇ ಹಂತದಲ್ಲಿ ವಾಲ್ ಪ್ಯಾನೆಲಿಂಗ್, ಅಕೋಸ್ಟಿಕ್ ಮತ್ತು ಫಾಲ್ಸ್ ಸೀಲಿಂಗ್, ಆವರಣದಲ್ಲಿನ ರಸ್ತೆ ಅಭಿವೃದ್ಧಿ, ಯುಜಿಡಿ ಮತ್ತು ಮಳೆ ನೀರು ಕೊಯ್ಲು ವ್ಯವಸ್ಥೆ, ನೆಲಹಾಸು, ವೇದಿಕೆ, ಒಳಾಂಗಣ ವಿದ್ಯುದ್ದೀಕರಣ, ಹವಾನಿಯಂತ್ರಿತ ವ್ಯವಸ್ಥೆ, ಧ್ವನಿವರ್ಧಕ ವ್ಯವಸ್ಥೆ, 1,800 ಜನರಿಗೆ ಆಸನ ವ್ಯವಸ್ಥೆ, 2 ಲಿಫ್ಟ್ ಅಳವಡಿಕೆ ಹಾಗೂ ಶೌಚಾಲಯಗಳ ನಿರ್ಮಾಣ ಕಾಮಗಾರಿಗಳು ನಡೆಯಲಿವೆ. ಕಳೆದ ವರ್ಷ ಅಂದಾಜು 19.10 ಕೋಟಿ ರೂ.ಗಳ ಆಡಳಿತಾತ್ಮಕ ಅನುಮೋದನೆ ನೀಡಲಾಗಿತ್ತು. ಆದರೆ, ಕಾಮಗಾರಿಗಳನ್ನು ಪರಿಷ್ಕರಿಸಿ 23.83 ಕೋಟಿ ರೂ.ಗಳ ಪರಿಷ್ಕೃತ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಶಂಕುಸ್ಥಾಪನೆ ಕಾರ್ಯಕ್ರಮದ ನಂತರ ಎರಡನೇ ಹಂತದ ಕಾಮಗಾರಿ ಪ್ರಾರಂಭವಾಗಲಿದೆ ಎಂದು ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ)ದ ಆಯುಕ್ತ ಕೆ.ಆರ್.ರಕ್ಷಿತ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಶಿಲಾಫಲಕ ಅನಾವರಣ: ನಗರದ ಟೌನ್‌ಹಾಲ್ ಎದುರು ವಿನ್ಯಾಸಗೊಳಿಸಿರುವ ಸಂವಿಧಾನ ಪೀಠಿಕೆ ಶಿಲಾಫಲಕವನ್ನು ನಾಳೆ(ಸೆ.20) ಅನಾವರಣಗೊಳಿಸಲಾಗುವುದು. ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆ ನಿರ್ಮಾಣವಾದ ಬಳಿಕ ಖಾಲಿ ಇದ್ದ ಜಾಗದಲ್ಲಿ ಸುಮಾರು 15 ಲಕ್ಷ ರೂ. ವೆಚ್ಚದಲ್ಲಿ ಆಕರ್ಷಕ ಕೆತ್ತನೆಯೊಂದಿಗೆ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿರುವ ಸಂವಿಧಾನ ಪೀಠಿಕೆ ಶಿಲಾಫಲಕ ಇದಾಗಿದೆ.

ಆರೋಗ್ಯವಂತರೆಲ್ಲಾ ರಕ್ತದಾನ ಮಾಡುವುದು ಅವಶ್ಯ

ಶ್ರೀ ಜಯದೇವ ಹೃದ್ರೋಗ ಸಂಸ್ಥೆಯ ಡಾ.ರಶ್ಮಿ ಸಲಹೆ



ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಶುಕ್ರವಾರ ರಕ್ತದಾನ ಶಿಬಿರ ನಡೆಯಿತು.

ಮೈಸೂರು, ಸೆ. 19– ಅವಶ್ಯಕತೆ ಇರುವ ರೋಗಿಗಳಿಗೆ ರಕ್ತವನ್ನು ದಾನ ಮಾಡುವುದು ಅತ್ಯಂತ ಶ್ರೇಷ್ಠವಾದ ಕಾರ್ಯವಾಗಿದೆ ಎಂದು ಶ್ರೀ ಜಯದೇವ ಹೃದ್ರೋಗ ವಿಜ್ಞಾನಗಳ ಸಂಶೋಧನಾ ಸಂಸ್ಥೆಯ ವೈದ್ಯಕೀಯ ಸಂಸ್ಥೆಯ ಪೆಥಾಲಜಿ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ರಶ್ಮಿ.ಬಿ.ಕೆ. ಅಭಿಪ್ರಾಯಪಟ್ಟರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಇಂದು ಐ.ಕ್ಯೂ.ಎ.ಸಿ ಘಟಕ, ಭಾರತೀಯ ರೆಡ್ ಕ್ರಾಸ್ ಘಟಕ, ಎನ್.ಸಿ.ಸಿ ಘಟಕ, ರಾಷ್ಟ್ರೀಯ ಸೇವಾ ಯೋಜನೆ, ರೋವರ್ಸ್ ಅಂಡ್ ರೇಂಜರ್ಸ್ ಘಟಕ ಹಾಗೂ ನೇಚರ್ ಕ್ಲಬ್ ಘಟಕಗಳು ಜಂಟಿಯಾಗಿ ಶ್ರೀ ಜಯದೇವ ಹೃದ್ರೋಗ ವಿಜ್ಞಾನಗಳ ಸಂಶೋಧನಾ ಸಂಸ್ಥೆಯ ರಕ್ತನಿಧಿ ಕೇಂದ್ರದ ಸಹಯೋಗದೊಂದಿಗೆ ಆಯೋಜಿಸಲಾಗಿದ್ದ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. 2018ರಿಂದ ರಕ್ತನಿಧಿ ಕೇಂದ್ರವು ಕಾರ್ಯನಿರ್ವಹಿಸುತ್ತಿದ್ದು ದಾನಿಗಳಿಂದ ಪಡೆದ ರಕ್ತವನ್ನು ಸಂಸ್ಥೆಯು ಅವಶ್ಯಕತೆ ಇರುವ ರೋಗಿಗಳಿಗೆ ಮಾತ್ರವೇ ನೀಡಲಾಗುತ್ತಿದೆ. ಅನೇಕರಿಗೆ ರಕ್ತದಾನ ಮಾಡಲು ಇಚ್ಛೆಯಿದ್ದರೂ ಹಲವು ಅನುಮಾನಗಳು ಅವರನ್ನು ಕಾಡುತ್ತಿರುತ್ತವೆ. ಅಂತಹ ಯಾವುದೇ ಅನುಮಾನಗಳನ್ನು ಇಟ್ಟುಕೊಳ್ಳದೇ ಆರೋಗ್ಯವಂತ ವ್ಯಕ್ತಿಗಳೆಲ್ಲರೂ ನಿಸ್ಸಂಕೋಚವಾಗಿ ರಕ್ತದಾನ ಮಾಡಬಹುದಾಗಿದ್ದು ಬೋನ್ ಮ್ಯಾರೋದಿಂದ ಹೊಸ ರಕ್ತ ಉತ್ಪತ್ತಿಯಾಗುತ್ತದೆ. ಒಬ್ಬರು ನೀಡಿದ ರಕ್ತದಿಂದ 3 ಬೇರೆ ಬೇರೆ ರೀತಿಯ ರೋಗಿಗಳಿಗೆ ಜೀವದಾನ ಮಾಡಬಹುದಾಗಿದೆ ಎಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ.ಎಸ್. ಮರೀಗೌಡ ಉತ್ತಮ ಆರೋಗ್ಯ ಪ್ರತಿಯೊಬ್ಬರ ಹಕ್ಕಾಗಿದ್ದು ಎಲ್ಲರೂ ಅವಶ್ಯಕತೆಯಿರುವ ಬಡರೋಗಿಗಳಿಗೆ ರಕ್ತದಾನದಂತಹ ಶ್ರೇಷ್ಠವಾದ ಕಾರ್ಯವನ್ನು ಮಾಡುವ ಮೂಲಕ ರೋಗಿಗಳ ಬದುಕಿಗೆ ಆಶಾಕಿರಣವಾಗಬೇಕೆಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಗೌ॥ ಕೋಶಾಧ್ಯಕ್ಷ ಶ್ರೀಶೈಲ ರಾಮಣ್ಣವರ್ ಮಾತನಾಡಿ, ರಕ್ತದಾನ ಎನ್ನುವುದು ಕೇವಲ ಒಂದು ಕಾರ್ಯಕ್ರಮವಲ್ಲ ಮಾನವೀಯತೆ ಇರುವ ಪ್ರತಿಯೊಬ್ಬರು ಮತ್ತೊಬ್ಬರ ಜೀವ ಉಳಿಸುವಂತಹ ಶ್ರೇಷ್ಠವಾದ ಕೆಲಸ ಇದಾಗಿದೆ. ವಿದ್ಯಾರ್ಥಿ ದಿಸೆಯಲ್ಲಿಯೇ ರಕ್ತದಾನ ಮಾಡುವ ಹವ್ಯಾಸ ಆರಂಭವಾದರೆ ಅದು ಜೀವನ ಪೂರ್ತಿ ಮುಂದುವರೆದು ವಿದ್ಯಾರ್ಥಿಗಳನ್ನು ಉತ್ತಮ ನಾಗರಿಕರನ್ನಾಗಿಸುತ್ತದೆ ಎಂದು ತಿಳಿಸಿದರು.

ರೆಡ್ ಕ್ರಾಸ್ ಸಂಚಾಲಕರಾದ ಪ್ರೊ.ಶಶಿಧರ್.ಎಸ್ ಸ್ವಾಗತಿಸಿದ ಕಾರ್ಯಕ್ರಮವನ್ನು ಪ್ರೊ.ಚಂದನ್ ನಿರೂಪಿಸಿದರು. ವಿವಿಧ ಘಟಕಗಳ ಸಂಯೋಜಕರುಗಳಾದ ಡಾ.ಶ್ರೀಹರ್ಷ.ಬಿ.ಎಸ್, ಪ್ರೊ.ಸಿದ್ಧರಾಜು, ಪ್ರೊ.ನಂದೀಶ್.ಸಿ.ಎಂ ಹಾಗೂ ಅಧ್ಯಾಪಕ ಸಲಹೆಗಾರರಾದ ಪ್ರೊ.ಲಾವಣ್ಯ ಎಸ್ ಉಪಸ್ಥಿತರಿದ್ದ ಕಾರ್ಯಕ್ರಮವನ್ನು ಪ್ರೊ.ಅರವಿಂದ್.ಆರ್ ವಂದಿಸಿದರು. ವಿದ್ಯಾರ್ಥಿಗಳು ರಕ್ತದಾನ ಶಿಬಿರದಲ್ಲಿ ಉತ್ಸುಕರಾಗಿ ಭಾಗವಹಿಸಿ ತಮ್ಮ ರಕ್ತದ ಗುಂಪನ್ನು ತಿಳಿದುಕೊಂಡರು ಮತ್ತು ಕಾಲೇಜಿನ ಎಲ್ಲಾ ಘಟಕಗಳಿಂದ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕ ಮತ್ತು ಅಧ್ಯಾಪಕೇತರರ ಸುಮಾರು 50 ಯೂನಿಟ್‌ನಷ್ಟು ರಕ್ತವನ್ನು ಶ್ರೀಜಯದೇವ ರಕ್ತನಿಧಿ ಕೇಂದ್ರಕ್ಕೆ ದಾನ ಮಾಡಲಾಯಿತು.

ಜಾತಿಗಣತಿ ವೇಳೆ ಜಾತಿ ಕಾಲಂನಲ್ಲಿ 'ಗಾಣಿಗ' ಎಂದು ನಮೂದಿಸಲು ಮನವಿ

ಮೈಸೂರು, ಸೆ.19(ಜಿಎ)– ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ನಡೆಸುತ್ತಿರುವ ಜಾತಿ ಸಮೀಕ್ಷೆಯಲ್ಲಿ ಮೈಸೂರು ಜಿಲ್ಲೆಯ ಗಾಣಿಗ ಸಮುದಾಯ ದವರು ಜಾತಿ ಕಾಲಂನಲ್ಲಿ ಗಾಣಿಗ ಎಂದು ಬರೆಸುವಂತೆ ಮಾಜಿ ಮೇಯರ್ ಅನಂತು ಮನವಿ ಮಾಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಬಾರಿಯ ಸಮೀಕ್ಷೆಯಲ್ಲಿ ಸಮುದಾಯದ ಸಂಖ್ಯೆ ಕಡಿಮೆ ಪ್ರಮಾಣದಲ್ಲಿ ತೋರಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸಮುದಾಯದ ಬಂಧುಗಳು ಕುಂಬಾರರು ರಾಷ್ಟ್ರೀಯತೆ ಭಾರತೀಯ, ಧರ್ಮ ಹಿಂದೂ, ಜಾತಿ ಗಾಣಿಗ, ಉಪ ಜಾತಿ ಶಿವಜ್ಯೋತಿಪಣ ಗಾಣಿಗ, ಮಾತೃಭಾಷೆ ಕನ್ನಡ ಎಂದು ಬರೆಸಬೇಕೆಂದು ಕೋರಿದರು.

ಸುದ್ದಿಗೋಷ್ಠಿಯಲ್ಲಿ ಸಮುದಾಯದ ಮುಖಂಡರಾದ ಮಹದೇವ ಶೆಟ್ಟಿ, ಎಂ.ಮಾದಶೆಟ್ಟಿ, ಚಂದ್ರಶೇಖರ್, ಕೆ.ಆರ್.ಚನ್ನಕೇಶವಶೆಟ್ಟಿ ಉಪಸ್ಥಿತರಿದ್ದರು.

ನೌಕಾಪಡೆಗೆ ಆಯ್ಕೆಯಾದವರಿಗೆ ಸನ್ಮಾನ



ಮೈಸೂರಿನ ಬೆಳವಾಡಿಯಲ್ಲಿರುವ ಸೈನಿಕ ಅಕಾಡೆಮಿ, ಮೈಸೂರು ತರಬೇತಿ ಕೇಂದ್ರದಿಂದ ಭಾರತೀಯ ನೌಕಾಪಡೆಗೆ ಆಯ್ಕೆಯಾದ ನವೀನ ಕುಮಾರ್ (ಕೋಲಾರ), ವಿಕಾಸ್ ಹೆಚ್ ಪಿ (ಸಾಲಿಗ್ರಾಮ, ಮೈಸೂರು), ಶರತ್ ಭೋವಿ (ಉತ್ತರ ಕನ್ನಡ) ಮತ್ತು ಚಂದನ್ ಅಂಬಿಗ (ಉತ್ತರ ಕನ್ನಡ) ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಮಾಜಿ ಕಮಾಂಡೋ ಮತ್ತು ಸೈನಿಕ ಅಕಾಡೆಮಿಯ ಸಂಸ್ಥಾಪಕರು ಸಿ.ಎಂ. ಶ್ರೀಧರ, ಸಹ ಸಂಸ್ಥಾಪಕರಾದ ಅನಿತಾ ಶ್ರೀಧರ, ಮುಖ್ಯ ಶಿಕ್ಷಕ ಸಂತೋಷ, ಅಧ್ಯಾಪಕರಾದ ಸ್ವಾಮಿ ಗೌಡ, ಸುನೀತಾ, ನಮ್ರತಾ ಉಪಸ್ಥಿತರಿದ್ದರು.

ಜಾತಿಗಣತಿ ವೇಳೆ ಜಾತಿ ಕಾಲಂನಲ್ಲಿ 'ಕುಂಬಾರ' ಎಂದು ನಮೂದಿಸಲು ಮನವಿ

ಮೈಸೂರು,ಸೆ.19(ಜಿಎ)–ರಾಜ್ಯ ಸರ್ಕಾರ ನಡೆಸುತ್ತಿರುವ ಜಾತಿ ಸಮೀಕ್ಷೆ ವೇಳೆ ಜಾತಿ ಕಾಲಂನಲ್ಲಿ 'ಕುಂಬಾರ' ಎಂದು ಬರೆಸುವಂತೆ ಕರ್ನಾಟಕ ರಾಜ್ಯ ಸಮಸ್ತ ಕುಂಬಾರರ ಅಭಿವೃದ್ಧಿ ವೇದಿಕೆ ತಿಳಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ವೇದಿಕೆಯ ಪ್ರಧಾನ ಸಂಚಾಲಕ ಡಾ.ಎಂ.ಪಿ. ವರ್ಷ ಮಾತನಾಡಿ, ಈ ಹಿಂದಿನ ಸಮೀಕ್ಷೆ ವೇಳೆ ಕುಂಬಾರರ ಸಂಖ್ಯೆ ಸಮರ್ಪಕವಾಗಿರಲಿಲ್ಲ. ಹೀಗಾಗಿ ಈ ಬಾರಿ ಸಮುದಾಯದವರು ಎಚ್ಚರಿಕೆ ವಹಿಸಬೇಕು. ಇದರಿಂದಾಗಿ ನಿಖರ ಜನಸಂಖ್ಯೆ ಮಾಹಿತಿ ದೊರೆತು ಸವಲತ್ತು, ಸೌಲಭ್ಯ ಪಡೆಯಲು ಸಹಕಾರವಾಗುತ್ತದೆ ಎಂದರು. ರಾಜ್ಯದ ವಿವಿಧೆಡೆ ಕುಂಬಾರರನ್ನು ವಿವಿಧ ಹೆಸರಿನಿಂದ ಕರೆಯುತ್ತಿದ್ದರೂ, ಸಮೀಕ್ಷೆ ವೇಳೆ ಧರ್ಮ ಕಾಲಂನಲ್ಲಿ ಹಿಂದು, ಜಾತಿ ಕಾಲಂನಲ್ಲಿ ಕುಂಬಾರ, ಉಪ ಜಾತಿ ಕಾಲಂನಲ್ಲಿ ಇಲ್ಲ ಎಂದು, ಇನ್ನಿತರ ಸಮಾನಾರ್ಥಕ ಕಾಲಂನಲ್ಲಿ ಕುಂಬಾರಶೆಟ್ಟಿ, ಅಥವಾ ಯಾವ ಸಮಾನಾರ್ಥಕ ಹೆಸರು ಇದೆಯೋ ಅದನ್ನು, ಮೀಸಲಾತಿ ಸೌಲಭ್ಯ ಪಡೆದಿರುವ ಅಥವಾ ಇಲ್ಲದಿರುವ ಮಾಹಿತಿ ನೀಡಬೇಕು. ಇನ್ನಿತರ ವಿಷಯದ ನಮೂದು ಬಗ್ಗೆಯೂ ಎಚ್ಚರ ವಹಿಸಬೇಕೆಂದರು. ಸುದ್ದಿಗೋಷ್ಠಿಯಲ್ಲಿ ಹೆಚ್.ಎಸ್.ಪ್ರಕಾಶ್, ಕೆಆರ್.ಸೋಮಶೇಖರ್, ಕೆ.ಪಿ.ವೆಂಕಟೇಶ್, ಮಂಜುನಾಥ್ ಉಪಸ್ಥಿತರಿದ್ದರು.

ಡಾ. ರಾಜ್‌ಕುಮಾರ್ ವೃತ್ತ ನಾಮಫಲಕ ಮರುಸ್ಥಾಪನೆಗೆ ಆಗ್ರಹ

ಮೈಸೂರು, ಸೆ.19(ಎಂಕೆ)– ಮೈಸೂರಿನ ಡಾ.ರಾಜ್‌ಕುಮಾರ್ ವೃತ್ತ(ಫೌಂಟೇನ್ ಸರ್ಕಲ್)ದಲ್ಲಿದ್ದ ನಾಮಫಲಕವನ್ನು ತೆರವುಗೊಳಿಸಿರುವ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಿ, ಆಡಳಿತಾತ್ಮಕ ಶಿಸ್ತು ಕ್ರಮಕೈಗೊಳ್ಳುವಂತೆ ಕನ್ನಡ ಅನುಷ್ಠಾನ ಮಂಡಳಿ ಆಗ್ರಹಿಸಿದೆ.

ಈ ಕುರಿತು ನಗರಪಾಲಿಕೆ ಆಯುಕ್ತರಿಗೆ ಪತ್ರ ಬರೆದಿರುವ ಮಂಡಳಿಯ ಅಧ್ಯಕ್ಷ ಆರ್.ಎ.ಪ್ರಸಾದ್, ಬಸ್ ತಂಗುದಾಣ ನಿರ್ಮಿಸಲು ರಾತ್ರೋರಾತ್ರಿ ಉದ್ದೇಶಪೂರ್ವಕವಾಗಿ 'ಡಾ.ರಾಜ್‌ಕುಮಾರ್ ವೃತ್ತ' ನಾಮಫಲಕವನ್ನು ತೆರವುಗೊಳಿಸಲಾಗಿದೆ. ಈ ಮೂಲಕ ಕನ್ನಡಿಗರ ಭಾವನೆಗಳನ್ನು ಕೆರಳಿಸಲಾಗಿದೆ. ಆದ್ದರಿಂದ ನಾಮಫಲಕ ತೆರವುಗೊಳಿಸಿರುವ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕು. ಹಾಗೆಯೇ ಆಡಳಿತಾತ್ಮಕ ಜವಾಬ್ದಾರಿಯಿಂದ ಕೂಡಲೇ ಡಾ.ರಾಜ್‌ಕುಮಾರ್ ವೃತ್ತಕ್ಕೆ ನಾಮಫಲಕ ಮರುಸ್ಥಾಪಿಸಬೇಕು. ಇಲ್ಲದಿದ್ದರೆ, ಜನರ ಹೋರಾಟಕ್ಕೆ ಕರೆ ನೀಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ದಲಿತ ಮಹಿಳೆಯರಿಗೆ ಅವಮಾನ; ಯತ್ನಾಳ್‌ಗೆ ಮಾಜಿ ಮೇಯರ್ ಪುರುಷೋತ್ತಮ್ ಎಚ್ಚರಿಕೆ

ಮೈಸೂರು, ಸೆ.19(ಜಿಎ)– ಮುಸ್ಲಿಂ ಮಹಿಳೆಗೆ ಮಾತ್ರವಲ್ಲ, ಯಾವೊಬ್ಬ ದಲಿತ ಮಹಿಳೆಗೂ ದಸರಾ ಉದ್ಘಾಟಿಸುವ ಅರ್ಹತೆ ಇಲ್ಲ ಎಂಬ ಹೇಳಿಕೆ ನೀಡುವ ಮೂಲಕ ಬಿಜೆಪಿ ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ದಲಿತ ಮಹಿಳೆಯರನ್ನು ಅಪಮಾನಿಸಿದ್ದಾರೆ. ಅವರು ಬಹಿರಂಗ ಕ್ಷಮೆ ಯಾಚಿಸದಿದ್ದರೆ ಕಂಡಲ್ಲೆಲ್ಲ ಅವರ ಮೇಲೆ ಪಾದರಕ್ಷೆ ಎಸೆದು ಪ್ರತಿಭಟಿಸುವುದಾಗಿ ಮಾಜಿ ಮೇಯರ್ ಪುರುಷೋತ್ತಮ್ ಎಚ್ಚರಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯತ್ನಾಳ್ ಈ ದೇಶದ ಮೂಲನಿವಾಸಿಗಳ ಚರಿತ್ರೆಯನ್ನೇ ತಿಳಿದಿಲ್ಲ. ಶಾಸಕರಾದ ಮೇಲೆ ಎಲ್ಲ ಧರ್ಮ, ಜಾತಿಯವರನ್ನೂ ಸಮಾನವಾಗಿ ಕಾಣಬೇಕಾಗಿತ್ತು. ಆದರೆ ಈಗ ತಮ್ಮ ಮನಸ್ಥಿತಿ ಬಹಿರಂಗಗೊಳಿಸಿದ್ದಾರೆ. ಇದು ಬಹುಸಂಖ್ಯಾತರಿಗೆ ಮಾಡಿರುವ ದೊಡ್ಡ ಅಪಮಾನವಾಗಿದೆ ಎಂದು ಕಿಡಿಕಾರಿದರು.

ಯತ್ನಾಳ್ ವಿರುದ್ಧ ಶೀಘ್ರವೇ ಇಲ್ಲಿಯೂ ಜಾತಿನಿಂದನೆ ದೂರು ದಾಖಲಿಸಲಾಗುವುದು. ಆರ್‌ಎಸ್‌ಎಸ್, ಬಿಜೆಪಿಯವರು ನಿರಂತರವಾಗಿ ದಲಿತರ ಶೋಷಣೆ ಮಾಡುತ್ತಿದ್ದಾರೆ. ಅವರ ಮುಖವಾಡ ಒಂದೊಂದಾಗಿ ಕಳಚುತ್ತಿದೆ. ಇದನ್ನು ಇನ್ನೂ ಸಹಿಸಿಕೊಳ್ಳಲು ಸಾಧ್ಯವಿಲ್ಲ. ದ್ರೌಪದಿ ಮುರ್ಮು ದಲಿತ ಮಹಿಳೆಯಾಗಿದ್ದಾರೆಂಬ ಒಂದೇ ಕಾರಣಕ್ಕೆ ಹೊಸ ಸಂಸತ್ ಭವನ, ಅಯೋಧ್ಯಾ ರಾಮಮಂದಿರ ಉದ್ಘಾಟನೆಗೆ ಕರೆಯದೇ ಅಪಮಾನಿಸಿ, ಕೇವಲ ಶೋಕೇಸ್ ಬೊಂಬೆಯಾಗಿಸಿದ್ದಾರೆ. ನಮ್ಮನ್ನು ಹಿಂದೂ ಎಂದು ಒಪ್ಪದಿದ್ದ ಮೇಲೆ ಈ ಧರ್ಮ ಏಕೆ ಬೇಕು, ನಮಗೆ ಬೌದ್ಧ ಧರ್ಮವಿದೆ. ಹೀಗಾಗಿ ಈ ಬಾರಿಯ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಸಮೀಕ್ಷೆ ವೇಳೆ ದಲಿತರು ಧರ್ಮ ಎಂಬ ಕಾಲಂನಲ್ಲಿ ಬೌದ್ಧ ಎಂದು ಬರೆಸುವಂತೆ ಸಲಹೆ ನೀಡಲಾಗಿದೆ ಎಂದರು. ಬಾನು ಮುಷ್ತಾಕ್ ದಸರಾ ಉದ್ಘಾಟಿಸುವುದರ ವಿರುದ್ಧ ನ್ಯಾಯಾಲಯಕ್ಕೆ ಹೋದರು. ಏನು ತೀರ್ಪು ಬಂತು? ಇದು ಪ್ರಜಾಪ್ರಭುತ್ವ ವ್ಯವಸ್ಥೆಯಾಗಿದೆ. ಇಲ್ಲಿ ಯಾರನ್ನೂ ಧಿಕ್ಕರಿಸುವ ನೈತಿಕತೆ ಯಾರಿಗೂ ಇಲ್ಲ ಎಂದರು.

ಸೆ.24ರಂದು ಮಹಿಷ ದಸರಾ ಆಚರಿಸುತ್ತಿದ್ದು, ಚಾಮುಂಡಿಬೆಟ್ಟದಲ್ಲಿ ಮಹಿಷನ ಪ್ರತಿಮೆಗೆ ಪುಷ್ಪಾರ್ಚನೆ ಮಾಡಲು ಅನುಮತಿ ನೀಡುವಂತೆ ಪೊಲೀಸ್ ಆಯುಕ್ತರಿಗೆ ಮನವಿ ಮಾಡಲಾಗುವುದು ಎಂದು ತಿಳಿಸಿದರು.


ಸುದ್ದಿಗೋಷ್ಠಿಯಲ್ಲಿ ಸೋಮಯ್ಯ ಮಲೆಯೂರು, ಸಾಹಿತಿ ಸಿದ್ದಸ್ವಾಮಿ, ವಿಷಕಂಠು, ಪುಟ್ಟರಾಜು ಉಪಸ್ಥಿತರಿದ್ದರು.

ನಾಳೆ ಬೃಂದಾವನ ಆರೋಗ್ಯ ಮಾತೆ ಚರ್ಚ್ ವಾರ್ಷಿಕ ಹಬ್ಬ

ಮೈಸೂರು, ಸೆ.19– ಮೈಸೂರು–ಕೆಆರ್‌ಎಸ್ ರಸ್ತೆಯ ಹುಲಿಕೆರೆಯಲ್ಲಿರುವ ಬೃಂದಾವನ ಆರೋಗ್ಯಮಾತೆ ಚರ್ಚ್‌ನಲ್ಲಿ ಸೆ.21ರಂದು ವಾರ್ಷಿಕ ಹಬ್ಬ ಆಯೋಜಿಸಲಾಗಿದೆ. ಬೆಂಗಳೂರಿನ ಸೇಂಟ್ ಪೀಟರ್ಸ್ ಪಾಂಟಿಫಿಕಲ್ ಸೆಮಿನರಿಯ ಪ್ರಾಧ್ಯಾಪಕ ರೆವರೆಂಡ್ ಫಾದರ್ ಜೆ.ಶಾಂತ್‌ಕುಮಾರ್ ಅವರು ಅಂದು ಬೆಳಗ್ಗೆ 10.30ಕ್ಕೆ ಪವಿತ್ರ ಬಲಿಪೂಜೆ ನೆರವೇರಿಸಲಿದ್ದು, ಸಂಜೆ 6ಕ್ಕೆ ಮೆರವಣಿಗೆ ನಂತರ ಯೂಕರಿಸ್ಟಿಕ್ ಆರಾಧನೆ ನಡೆಯಲಿದೆ.

ಪಾರಿಷ್ ಪಾದ್ರಿ ರೆವರೆಂಡ್ ಫಾದರ್ ರೇಮಂಡ್, ಧಾರ್ಮಿಕ ಪಿತಾಮಹರು, ಸಹೋದರರು, ಸಹೋದರಿಯರು, ಪಾರಿಷ್ ಕೌನ್ಸಿಲ್ ಮತ್ತು ಪ್ಯಾರಿಷಿಯನ್ನರು ವಾರ್ಷಿಕ ಚರ್ಚ್ ಹಬ್ಬದಲ್ಲಿ ಭಾಗವಹಿಸಲಿದ್ದಾರೆ ಎಂದು ಚರ್ಚ್‌ನ ಪ್ರಕಟಣೆ ತಿಳಿಸಿದೆ.

ಎನ್.ಬೆಟ್ಟಯ್ಯ ನಿಧನ



ಮೈಸೂರು, ಸೆ.19– ಮೈಸೂರಿನ ಅಗ್ರಹಾರದ ನಿವಾಸಿಯಾಗಿದ್ದ ಎನ್.ಬೆಟ್ಟಯ್ಯ(96) ಅವರು ಶುಕ್ರವಾರ ಮಧ್ಯಾಹ್ನ ನಿಧನರಾದರು.

ಮೈಸೂರು–ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ಸಂಸ್ಥಾಪಕ ಸದಸ್ಯರಾಗಿದ್ದ ಇವರು, ಸಂಘದ ನಿರ್ದೇಶಕರಾಗಿ, ಹುಲ್ಲಿನ ಬೀದಿ ಹತ್ತೂ ಜನಗಳ ಈಶ್ವರ ಗರಡಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

ಇವರು ಮಕ್ಕಳಾದ ಉದ್ಯಮಿ ಬಿ.ರಾಮಚಂದ್ರ, ಉಮಾದೇವಿ, ರುಕ್ಮಿಣಿ, ಹೇಮಾವತಿ, ಅಳಿಯಂದಿರು, ಮೊಮ್ಮಕ್ಕಳು. ಮರಿಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಜಯನಗರದ ರುದ್ರಭೂಮಿಯಲ್ಲಿ ಶನಿವಾರ ಮಧ್ಯಾಹ್ನ 1 ಗಂಟೆ ನಂತರ ಅಂತ್ಯಸಂಸ್ಕಾರ ನಡೆಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

20.09.2025 ಶನಿವಾರ, ಮಳೆ ನಕ್ಷತ್ರ: ಉತ್ತರಾ 14.09.2025 ರಿಂದ 26.09.2025
ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ,
ತಿಥಿ: ಚತುರ್ದಶಿ, ನಕ್ಷತ್ರ: ಮಖ, ರಾಹುಕಾಲ: ಬೆಳಗ್ಗೆ 9 ರಿಂದ 10.30 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸಂಧಿವಾತ, ಶರದ್ ವಿರೇಚನ–ಪಂಚಕರ್ಮ ಚಿಕಿತ್ಸಾ ಶಿಬಿರ, ಬೊಜ್ಜು ನಿವಾರಣೆ, ಗ್ಯಾಸ್ಟ್ರೈಟಿಸ್ (ಆಮ್ಲ ಪಿತ್ತ), ಕುತ್ತಿಗೆ ನೋವು ಮತ್ತು ಭುಜದ ನೋವು ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಡಾ. ಯತೀಂದ್ರ ಸಿದ್ದರಾಮಯ್ಯ ಅಭಿಮಾನಿ ಬಳಗ :** ಮಾವುತರ ಮಡದಿಯರಿಗೆ ಬಾಗಿನ ನೀಡುವ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಡಾ. ಬಸವರಾಜು ಸಿ. ಜೆಟ್ಟಿಹುಂಡಿ, ರಂಗಸ್ವಾಮಿ, ವೈ.ಕೆ. ಮಂಜುನಾಥ್, ಕೆ. ಆನಂದ್, ಗೌತಮಿ ಆನಂದ್, ಹೆಜ್ಜಿಗೆ ಇಂಧನಬಾಬು, ಸ್ಥಳ: ಮೈಸೂರು ಅರಮನೆ ಆವರಣ, ಬೆಳಗ್ಗೆ 9ಕ್ಕೆ.

■ **ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ :** ಉಚಿತ ತಪಾಸಣೆ ಮತ್ತು ವಿಶೇಷ ಚಿಕಿತ್ಸಾ ಶಿಬಿರ, ಸ್ಥಳ: ಪಂಚಕರ್ಮ ಹೊರರೋಗಿ ವಿಭಾಗ ರೂಂ ನಂ–14, ಬೆಳಗ್ಗೆ 9 ರಿಂದ.

■ **ಡಿಎವಿ ಪಬ್ಲಿಕ್ ಶಾಲೆ :** 16ನೇ ವರ್ಷದ ದಸರಾ ಬೊಂಬೆ ಪ್ರದರ್ಶನ, ಮಕ್ಕಳ ಕೌಶಲ ಪ್ರದರ್ಶನ, ಸಾಂಸ್ಕೃತಿಕ ಮೇಳ, ಮುಖ್ಯ ಅತಿಥಿಗಳು : ಕಾವಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀಮತಿ ನಿರ್ಮಲ ಮಠಪತಿ, ಸ್ಥಳ: ಶಾಲೆಯ ಒಳಾಂಗಣ ಸಭಾಂಗಣ, ಬೆಳಗ್ಗೆ 9.30ಕ್ಕೆ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಯುವಕರ ಮಾನಸಿಕ ಆರೋಗ್ಯ ಜಾಗೃತಿ, ಗರ್ಭ ಸಂಸ್ಕಾರ, ಬಂಜೆತನಕ್ಕೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.

■ **ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ :** ಆನೆ ಬಂತೆ ಆನೆ ಮಕ್ಕಳ ರಂಗ ಶಿಬಿರ, ಸ್ಥಳ: ಹಾರ್ಡ್ವಿಕ್ ಶಾಲಾ ಆವರಣದಲ್ಲಿರುವ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10 ರಿಂದ.

■ **ಶ್ರೀ ಪಂಚಮುಖಿ ಆಂಜನೇಯ ಸ್ವಾಮಿ ದೇವಸ್ಥಾನ :** ಪಿತೃ ದೋಷ ಪರಿಹಾರ ಹಾಗೂ ಮಹಾಲಯ ಪಿತೃ ಪಕ್ಷದ ಅಂಗವಾಗಿ ರುದ್ರ ಶಾಂತಿ ಪುರುಷ ಸೂಕ್ತ ಶ್ರೀ ಸೂಕ್ತ ಹೋಮ, ಸ್ಥಳ: ದೇವಸ್ಥಾನ, ಇರ್ವಿನ್ ರಸ್ತೆ.

■ **ರಾಮಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು :** ಪದವೀಧರರ ದಿನಾಚರಣೆ, ಮುಖ್ಯ ಅತಿಥಿಗಳು : ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್‌ನ ಪ್ರೊ.ಗೌತಮ್ ಆರ್. ದೇಸಿರಾಜು, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು : ಉಪಾಧ್ಯಕ್ಷ ಬಿ. ಶಿವಲಿಂಗಪ್ಪ, ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಸ್ಥಳ: ಹೆಚ್. ಕೆಂಪೇಗೌಡ ಒಳಾಂಗಣ ಕ್ರೀಡಾ ಸಮುಚ್ಚಯ, ಬೆಳಗ್ಗೆ 10.45ಕ್ಕೆ.

■ **ರಾಜು ಕ್ಷತ್ರಿಯ ಪತ್ತಿನ ಸಹಕಾರ ಸಂಘ :** ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಸ್. ಶಿವಕುಮಾರ್, ಸ್ಥಳ: ಸಂಘದ ಕಚೇರಿ ಆವರಣ, ಬೆಳಗ್ಗೆ 11ಕ್ಕೆ.

■ **ಮಹಾರಾಜ ಕಾಲೇಜು :** ಕನ್ನಡ ಸಂಘ ಉದ್ಘಾಟನೆ, ಕವಿಗೋಷ್ಠಿ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಪ್ರೊ. ಹೆಚ್.ಸಿ. ದೇವರಾಜೇಗೌಡ, ಮುಖ್ಯ ಅತಿಥಿಗಳು : ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿ ಪ್ರಮೋದ್ ಬೆಳಗೋಡು, ಉಪಸ್ಥಿತರು : ಪಿ.ಆರ್. ಚಂದ್ರನಾಯಕ, ಆಡಳಿತಾಧಿಕಾರಿ ಡಾ. ಕೆ. ತಿಮ್ಮಯ್ಯ, ಡಾ. ಡಿ. ವಿಜಯಲಕ್ಷ್ಮಿ, ಡಾ.ಬಿ.ಪಿ. ಆಶಾಕುಮಾರಿ, ಸ್ಥಳ: ಹೊಸ ಕಟ್ಟಡ ಕೊಠಡಿ ನಂ. 21, ಕಾಲೇಜು ಆವರಣ, ಬೆಳಗ್ಗೆ 11ಕ್ಕೆ.

■ **ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ, ಮೈಸೂರು ಮಹಾನಗರ ಪಾಲಿಕೆ :** ಸಂವಿಧಾನ ಪೀಠಿಕೆ ಶಿಲಾಫಲಕ ಉದ್ಘಾಟನೆ, ಘನ ಉಪಸ್ಥಿತರು : ಮುಖ್ಯ ಮಂತ್ರಿ ಸಿದ್ದರಾಮಯ್ಯ, ಉಕ್ಕು ಮತ್ತು ಬೃಹತ್ ಕೈಗಾರಿಕಾ ಕೇಂದ್ರ ಸಚಿವ ಹೆಚ್.ಡಿ ಕುಮಾರಸ್ವಾಮಿ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ ಮಹದೇವಪ್ಪ, ಅಧ್ಯಕ್ಷತೆ : ಶಾಸಕ ಕೆ.ಹರೀಶ್ ಗೌಡ, ಉಪಸ್ಥಿತರು : ಸಚಿವ ಕೆ.ವೆಂಕಟೇಶ್, ಶಾಸಕರಾದ ಅನಿಲ್ ಕುಮಾರ್.ಸಿ., ಎ.ಬಿ. ರಮೇಶ್ ಬಂಡಿ ಸಿದ್ದೇಗೌಡ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ. ಪುಷ್ಪ ಅಮರನಾಥ್, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ, ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಶಾಸಕರಾದ ತನ್ವೀರ್ ಸೇಠ್, ಜಿ.ಟಿ. ದೇವೇಗೌಡ, ರವಿಶಂಕರ್ ಡಿ., ಟಿ.ಎಸ್.ಶ್ರೀವತ್ಸ, ದರ್ಶನ್ ಧ್ರುವನಾರಾಯಣ್, ಜಿ.ಡಿ.ಹರೀಶ್ ಗೌಡ, ವಿಧಾನ ಪರಿಷತ್ ಸದಸ್ಯರಾದ ಹೆಚ್. ವಿಶ್ವನಾಥ್, ಡಾ. ಡಿ. ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ. ಮಾದೇಗೌಡ, ಡಾ. ಯತಿಂದ್ರ ಎಸ್, ವಿವೇಕಾನಂದ ಎಸ್, ಮತ್ತು ಕೆ. ಶಿವಕುಮಾರ್, ಸ್ಥಳ: ಪುರಭವನ ಆವರಣ, ಬೆಳಗ್ಗೆ 11 ಗಂಟೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ತತ್ವ ದರ್ಪಣ– ಕೊರಡು ಕೊನರಿಸಿದ ಪಾಶ್ಚಾತ್ಯ ತತ್ವಜ್ಞಾನಿಗಳು, ಪ್ರಸ್ತುತಿ: ಪ್ರೊ.ವಿ.ಎನ್.ಶೇಷಗಿರಿರಾವ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಜಯಂತಿ ವಿ. ಭಟ್ ಹಾಗೂ ನಿತಿನ್ ರಾಜಾರಾಂ ಶಾಸ್ತ್ರೀ, ವ್ಯಾಖ್ಯಾನ–ಡಾ.ಎನ್.ಎಸ್. ತಾರಾನಾಥ್, 6.50 ರೈತರಿಗೆ ಸಲಹೆ, 7.15 ಮನೆಮನೆಯ ಹಣತೆ–ಪ್ರಾಯೋಜಿತ ಸರಣಿ ಕಾರ್ಯಕ್ರಮ, ಪ್ರಾಯೋಜಕರು –ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, 8.30 ಪಂಪನ ಪೆಂಪು–ಪಂಪ ಭಾರತದಿಂದಾಯ್ದ ನಾಟಕೀಯ ಪ್ರಸಂಗಗಳ ಬಾನುಲಿ ಸರಣಿ, ರಚನೆ ಹಾಗೂ ಪ್ರಸ್ತುತಿ–ಜಿ. ಶಾಂತಕುಮಾರ್, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಆರ್. ಕೆ. ರಾಘವನ್–ವೀಣಾ ವಾದನ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿಹಾಡು, 3.30 ಮಕ್ಕಳ ಮಂಟಪ, 4.00 ನಾಟಕ, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 6.50 ಕೃಷಿರಂಗ: ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ ರೈತ ದಸರಾ ಕುರಿತು ಸಂವಾದ, ಭಾಗವಹಿಸುತ್ತಾರೆ ಮೈಸೂರು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರಾದ ಕೆ.ಹೆಚ್. ರವಿ ಮತ್ತು ಮೈಸೂರು ಜಿಲ್ಲಾ ಪಶುಪಾಲನೆ ಹಾಗೂ ಪಶು ವೈದ್ಯಕೀಯ ಸೇವಾ ಇಲಾಖೆಯ ಉಪ ನಿರ್ದೇಶಕರಾದ ಡಾ. ನಾಗರಾಜ್, ಪ್ರಸುತಿ–ಎನ್. ಕೇಶವಮೂರ್ತಿ, 8.00 ಸವಿನೆನಪು, 8.30 ಹಿಂದಿ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಸಂದೀಪ್ ಅಪ್ಪೆ–ಸಿತಾರ್ ವಾದನ

■ **ಮೈಸೂರು ಬೊಂಬೆ ರಂಗಮಂದಿರ :** ಬೊಂಬೆ ಪ್ರದರ್ಶನ, ಉದ್ಘಾಟನೆ : ಗಮಕ ಮತ್ತು ಬೊಂಬೆಯಾಟ ಕಲಾವಿದ ಶಿವಬುದ್ಧಿ, ಮುಖ್ಯ ಅತಿಥಿಗಳು : ಬೊಂಬೆಯಾಟ ಕಲಾವಿದ ಸತ್ಯನಾರಾಯಣ, ಸ್ಥಳ: ಮೈಸೂರು ಪಪ್ಪೆಟ್ ಥಿಯೇಟರ್, ಜೂ ಎದುರು, ಸಂಜೆ 4 ರಿಂದ.

■ **ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ :** ದಸರಾ ಛಾಯಾಚಿತ್ರ ಪ್ರದರ್ಶನ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಅಧ್ಯಕ್ಷತೆ : ವಿಧಾನ ಪರಿಷತ್ ಸದಸ್ಯ ಕೆ. ಶಿವಕುಮಾರ್, ಮುಖ್ಯ ಅತಿಥಿಗಳು : ಶಾಸಕರಾದ ಜಿ.ಟಿ. ದೇವೇಗೌಡ, ತನ್ವೀರ್ ಸೇಠ್, ಕೆ. ಹರೀಶ್‌ಗೌಡ, ಶ್ರೀವತ್ಸ, ಡಾ. ಡಿ. ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಸ್ಥಳ: ಸುಚಿತ್ರ ಆರ್ಟ್ ಗ್ಯಾಲರಿ, ಕಲಾಮಂದಿರದ ಆವರಣ, ಸಂಜೆ 4ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ಹಿರಿಯ ವಿದ್ಯಾರ್ಥಿಗಳ ಒಕ್ಕೂಟ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ :** ರಾಹುಲ್ ಕುಂಬರಹಳ್ಳಿ ಅವರ ಕ್ಯಾತಯ್ಯನ ಕವನಗಳು ಕವನ ಸಂಕಲನ ಬಿಡುಗಡೆ ಸಮಾರಂಭ, ಪುಸ್ತಕ ಬಿಡುಗಡೆ : ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ಉದ್ಘಾಟನೆ : ಪ್ರೊ. ಪ್ರಸನ್ನಕುಮಾರ್ ಕೆರಗೋಡು, ಅಧ್ಯಕ್ಷತೆ : ಪ್ರಸಾರಾಂಗ ನಿರ್ದೇಶಕ ಪ್ರೊ. ಎಂ. ನಂಜಯ್ಯ ಹೊಂಗನೂರು, ಮುಖ್ಯ ಅತಿಥಿಗಳು :ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಪ್ರೊ. ಕೆ. ಸೌಭಾಗ್ಯವತಿ, ಡಾ. ಸಿ. ಚಂದ್ರಶೇಖರ್, ಸನ್ಮಾನಿತರು : ಶ್ರೀಮತಿ ಶೀಲಾ, ಯೋಗೇಶ್ ಆರ್. ಶಂಖಹಳ್ಳಿ, ಮಹದೇವಸ್ವಾಮಿ ಎಂ. ಚೋರನಹಳ್ಳಿ, ಹೆಚ್.ಆರ್. ಸಂತೋಷ್ ಕುಮಾರ್, ಮಹಾಂತಪ್ಪ ನವಲಕಲ್, ಡಾ. ಎಸ್.ಪಿ. ಮಂಜುನಾಥ್, ಸ್ಥಳ: ಕುವೆಂಪು ಸಭಾಂಗಣ, ಮೈಸೂರು ವಿವಿ, ಸಂಜೆ 4ಕ್ಕೆ

■ **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 898, ಕಥೆ ಹೇಳುವವರು: ಡಾ. ಸುಬ್ಬುಲಕ್ಷ್ಮಿ ಜಿ ಎ, ನಿವೃತ್ತ ಪ್ರಾಧ್ಯಾಪಕರು, ಎಂ ಇ ಎಸ್ ಕಿಶೋರ ಕೇಂದ್ರ, ಬೆಂಗಳೂರು, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ

■ **ಸುಯೋಗ್ ಆಸ್ಪತ್ರೆ :** ಆಧ್ಯಾತ್ಮಿಕ ಚಿಂತಕ, ಯೋಗಿ ಶ್ರೀ ಶ್ರೀನಿವಾಸ ಅರ್ಕ ಅವರಿಂದ ಆಧ್ಯಾತ್ಮಿಕ ಚಿಂತನ–ಮಂಥನ ಉಪನ್ಯಾಸ ಕಾರ್ಯಕ್ರಮ, ಉದ್ಘಾಟನೆ : ವಿಧಾನ ಪರಿಷತ್ ಸದಸ್ಯ ಕೆ. ಶಿವಕುಮಾರ್, ಅಧ್ಯಕ್ಷತೆ : ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ. ಎಸ್.ಪಿ. ಯೋಗಣ್ಣ, ಉಪಸ್ಥಿತರು : ಶ್ರೀಮತಿ ಸುಧಾ ಯೋಗಣ್ಣ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಸಂಜೆ 4.30ಕ್ಕೆ.

■ **ಸೇವಾ ಚಿಲುಮೆ ಚಾರಿಟಬಲ್ ಟ್ರಸ್ಟ್ :** ಮಾವುತರು, ಕಾವಾಡಿಗಳಿಗೆ ಜರ್ಕಿನ್ ವಿತರಣಾ ಕಾರ್ಯಕ್ರಮ, ಸ್ಥಳ: ಅರಮನೆ ಆವರಣ, ಸಂಜೆ 5ಕ್ಕೆ.

■ **ಶ್ರೀ ಕೃಷ್ಣ ಗಾನಸಭಾ :** ಪ್ರೊ. ತಾತಾಚಾರ್ ಜ್ಞಾಪಕಾರ್ಥ ಭರತನಾಟ್ಯ ಕಾರ್ಯಕ್ರಮ, ಡಾ. ನಾಗಲಕ್ಷ್ಮಿ ನಾಗರಾಜನ್ ಮತ್ತು ವೃಂದದವರಿಂದ, ಸ್ಥಳ: ಆಳ್ವಾರ್ ಕಲಾಭವನ, ಸಂಜೆ 6ಕ್ಕೆ.

■ **ಇನ್ಫೋಸಿಸ್ ಫೌಂಡೇಷನ್, ಬೆಂಗಳೂರು, ಭಾರತೀಯ ವಿದ್ಯಾ ಭವನ, ಬೆಂಗಳೂರು–ಮೈಸೂರು :** 151ನೇ ಸಾಂಸ್ಕೃತಿಕ ಕಾರ್ಯಕ್ರಮ, ಶ್ರದ್ಧಾ ನೃತ್ಯ ತಂಡದಿಂದ ಭರತನಾಟ್ಯ : ನೃತ್ಯ ವೈಭವ, ಶ್ರೀಮತಿ ಶಮಾ ಕೃಷ್ಣಾ ಮತ್ತು ಅವರ ಶಿಷ್ಯರಿಂದ ಭರತನಾಟ್ಯ ಕಾರ್ಯಕ್ರಮ, ಸ್ಥಳ: ಭಾರತೀಯ ವಿದ್ಯಾಭವನ, ವಿಜಯನಗರ 1ನೇ ಹಂತ, ಸಂಜೆ 6ಕ್ಕೆ.

■ **ಶ್ರೀ ತ್ಯಾಗರಾಜ ಸಂಗಿತ ಸಭಾ ಚಾರಿಟಬಲ್ ಟ್ರಸ್ಟ್ :** ವಿದುಷಿ ಡಾ. ಸುರಭಿ ಪುಸ್ತಕಂ ಅವರಿಂದ ಗಾಯನ, ವಿದುಷಿ ಸಿ.ವಿ. ಶ್ರುತಿ–ಪಿಟೀಲು, ವಿದ್ವಾನ್ ನಿಕ್ಷಿತ್ ಪುತ್ತೂರು–ಮೃದಂಗ, ಸ್ಥಳ: ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ, ಎಸ್‌ಬಿಎಂ ಕಾಲೋನಿ, ಶ್ರೀರಾಂಪುರ, ಸಂಜೆ 6 ರಿಂದ.

■ **ಸಮತೆಂತೋ ಮೈಸೂರು :** ಹಿರಿಯ ನಟಿ ಶ್ರೀಮತಿ ಇಂದಿರಾ ನಾಯರ್ ಅವರಿಂದ ಏಕವ್ಯಕ್ತಿ ರಂಗ ಪ್ರಯೋಗ 'ನೀರ್ಮಾದಳ ಹೂವಿನೊಂದಿಗೆ' ನಾಟಕ ಪ್ರದರ್ಶನ, ನಿರ್ದೇಶನ : ಡಾ. ಶ್ರೀಪಾದ ಭಟ್, ಸ್ಥಳ: ಗಾನಭಾರತೀ, ವೀಣೆ ಶೇಷಣ್ಣ ಭವನ, ಕುವೆಂಪುನಗರ, ಸಂಜೆ 6.30ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 20 ಶನಿವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 154 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಶಾಲೆಗಳಿಗೆ ಇಂದಿನಿಂದ ದಸರಾ ರಜೆ

ಬೆಂಗಳೂರು: ನಾಳೆ (ಸೆ.20)ಯಿಂದ ರಾಜ್ಯದ ಎಲ್ಲಾ ಶಾಲೆಗಳಿಗೆ ದಸರಾ ರಜೆ ಘೋಷಣೆ ಮಾಡಲಾಗಿದೆ. ಈ ಕುರಿತಂತೆ ರಾಜ್ಯ ಸರ್ಕಾರ ಆದೇಶ ಕೂಡ ಹೊರಡಿಸಿದೆ

ಪ್ರಸಕ್ತ ಶೈಕ್ಷಣಿಕ ವರ್ಷದ ಶಾಲಾ ವಿದ್ಯಾರ್ಥಿಗಳ ದಸರಾ ರಜೆ ನಾಳೆ (ಸೆ.20) ಆರಂಭ. ವಿಶ್ವವಿಖ್ಯಾತ ನಾಡ ಹಬ್ಬ ಮೈಸೂರು ದಸರಾ ಮಹೋತ್ಸವ ವನ್ನು ಮಕ್ಕಳು ಸಹ ಕಣ್ತುಂಬಿಕೊಳ್ಳಲಿ ಎಂದು ಶಿಕ್ಷಣ ಇಲಾಖೆ ನಾಳೆಯಿಂದ 18 ದಿನ ಸರ್ಕಾರಿ ಶಾಲೆಗಳಿಗೆ ಹಬ್ಬದ ರಜೆ ಘೋಷಿಸಿದೆ.

ಈ ಬಗ್ಗೆ ಶಿಕ್ಷಣ ಇಲಾಖೆ ಹೊರಡಿಸಿರುವ ಆದೇಶದಲ್ಲಿ ಸೆ. 20 ರಿಂದ ಅಕ್ಟೋಬರ್ 7ರವರೆಗೆ ಸರ್ಕಾರಿ ಶಾಲೆಗಳಿಗೆ ಒಟ್ಟು 18 ದಿನ ಹಬ್ಬದ ರಜೆ ಘೋಷಿಸಿದೆ. ಅಕ್ಟೋಬರ್ 2ರಂದು ನಡೆಯಲಿರುವ ಗಾಂಧಿ ಜಯಂತಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಕಾರ್ಯಕ್ರಮಗಳಿಗೆ ಕಡ್ಡಾಯವಾಗಿ ಹಾಜರಾಗುವಂತೆ ಸೂಚಿಸಲಾಗಿದೆ.

ಜಾತಿ ಜನಗಣತಿ: ಹೈಕೋರ್ಟ್‌ಗೆ ಅರ್ಜಿ

ಬೆಂಗಳೂರು: ಜಾತಿ ಗಣತಿ ವಿರೋಧಿಸಿ ಸಲ್ಲಿಕೆಯಾಗಿದ್ದ ರಿಟ್ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್ ಕೇಂದ್ರದ ಸೆನ್ಸಸ್ ಕಮಿಷನರ್, ಹಿಂದುಳಿದ ವರ್ಗಗಳ ಆಯೋಗ, ರಾಜ್ಯ ಹಾಗೂ ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದೆ.

ಮೀಟರ್ ರೀಡರ್‌ಗಳಿಂದಲೂ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಸಂಗ್ರಹಿಸುವ ಅಂಕಿ ಅಂಶಕ್ಕೆ ರಕ್ಷಣೆ ಇಲ್ಲವೆಂದು ವಾದ ಮಂಡಿಸಿದರು. ಈಗಾಗಲೇ 2 ಕೋಟಿ ಮನೆಗಳಿಂದ ಪ್ರಕ್ರಿಯೆ ಆರಂಭಿಸಲಾಗಿದೆ. ಮೇಲ್ವರ್ಗದ ರಿಟ್ ಅರ್ಜಿಗಳೇ ಹೆಚ್ಚಾಗಿವೆ. ಹೀಗಾಗಿ ತುರ್ತು ವಿಚಾರಣೆಗೆ ಅರ್ಜಿದಾರರ ಪರ ವಕೀಲರು ಮನವಿ ಮಾಡಿದರು.

ನಿಗದಿಯಂತೆ ಸೆ.22ರಿಂದಲೇ

ಜಾತಿ ಗಣತಿ

ಸರ್ಕಾರದಿಂದ ಅಧಿಕೃತ ಆದೇಶ; ಗೊಂದಲಕ್ಕೆ ತೆರೆ

ಬೆಂಗಳೂರು, ಸೆ.19–ನಿಗದಿಯಂತೆ ಜಾತಿ ಜನಗಣತಿ ನಡೆಯುವುದು ಖಚಿತವಾಗಿದ್ದು, ಸರ್ಕಾರ ಅಧಿಕೃತ ಆದೇಶ ಹೊರಡಿಸಿದೆ. ಸೆ.22 ರಿಂದ ಅ.7ರವರೆಗೆ ಸಮೀಕ್ಷೆ ನಡೆಸಲಾಗುವುದು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ರಾಜ್ಯದ ನಾಗರಿಕರ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗಳ ಕುರಿತು ಸಮೀಕ್ಷೆ ನಡೆಸಲಾಗುತ್ತಿದ್ದು, ಸಮೀಕ್ಷೆಗೆ ಸಿದ್ಧರಿರುವಂತೆ ರಾಜ್ಯದ ಜನತೆಗೆ ತಿಳಿಸಲಾಗಿದೆ. ಆದರೆ ಈಗ ಎದ್ದಿರುವ ಗೊಂದಲ ಬಗೆಹರಿಸುವ ಬಗ್ಗೆ ಆದೇಶದಲ್ಲಿ ಯಾವುದೇ ಸ್ಪಷ್ಟನೆ ನೀಡಿಲ್ಲ.

ಈಗಾಗಲೇ ಜಿಲ್ಲಾಧಿಕಾರಿಗಳು ಹಾಗೂ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ವಿಡಿಯೋ ಕಾನ್ಫರೆನ್ಸ್ ಮೂಲಕ ಜಿಲ್ಲಾ ಮತ್ತು ತಾಲೂಕು ಹಂತದಲ್ಲಿ ಸಮೀಕ್ಷಾದಾರರಿಗೆ ಅಗತ್ಯ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಹಾಗೂ ಸಾರ್ವಜನಿಕರನ್ನು ಸಮೀಕ್ಷಾ ಕಾರ್ಯದಲ್ಲಿ ಪೂರ್ಣವಾಗಿ ಪಾಲ್ಗೊಳ್ಳಲು ಅರಿವು ಮೂಡಿಸಬೇಕೆಂದು ಆದೇಶದಲ್ಲಿ ತಿಳಿಸಲಾಗಿದೆ. ಸರ್ಕಾರದ ಸಚಿವರಲ್ಲೇ ಜಾತಿ ಜನಗಣತಿಯ ಬಗ್ಗೆ ಭಿನ್ನಮತವಿದ್ದ ಕಾರಣ ಜಾತಿ ಜನಗಣತಿ ನಡೆಯುತ್ತದೆಯೋ ಇಲ್ಲವೋ ಎಂಬ ಗೊಂದಲ ಎದ್ದಿತ್ತು ಆದರೆ ಈಗ ಸರ್ಕಾರವೇ ಅಧಿಕೃತ ಆದೇಶ ಪ್ರಕಟಿಸುವ ಮೂಲಕ ಎಲ್ಲಾ ಗೊಂದಲಗಳಿಗೆ ತೆರೆ ಎಳೆದಿದೆ. ಕರ್ನಾಟಕದ 2 ಕೋಟಿ ಮನೆಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಅಂದರೆ ಜಾತಿ ಗಣತಿಗೆ ಸಿದ್ಧತೆ ಈಗಾಗಲೇ ಆರಂಭವಾಗಿದ್ದು, ಅಧಿಕೃತ ಆರಂಭಕ್ಕೆ



ಇನ್ನೆರಡು ದಿನ ಬಾಕಿ ಉಳಿದಿದೆ. ರಾಜ್ಯದ ಎಲ್ಲಾ ಮನೆಯ ಬಾಗಿಲಿನ ಬಳಿ ಈಗಾಗಲೇ ಸ್ಟಿಕ್ಕರ್‌ಗಳು ಕಾಣಸಿಗುತ್ತಿವೆ. ಬಾಡಿಗೆ ಮನೆ ಇರಲಿ, ಸ್ವಂತ ಮನೆ ಇರಲಿ, ಅಪಾರ್ಟ್‌ಮೆಂಟ್ ಫ್ಲ್ಯಾಟ್‌ಗಳೇ ಇರಲಿ ಎಲ್ಲಾ ಕಡೆ ರಾಜ್ಯದ ಹಿಂದುಳಿದ ವರ್ಗಗಳ ಆಯೋಗವು ಕೊಟ್ಟಿರುವ ಸ್ಟಿಕ್ಕರ್‌ಗಳನ್ನು ವಿದ್ಯುತ್ ಇಲಾಖೆಯ ಸಿಬ್ಬಂದಿ ಗಳ ಮೂಲಕ ಮನೆಮನೆಗೆ ಅಂಟಿಸಲಾಗಿದೆ. ಇದು ಹಿಂದುಳಿದ ವರ್ಗಗಳ ಆಯೋಗವು ಕೈಗೊಂಡಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಮೊದಲ ಹೆಜ್ಜೆಯಾಗಿದ್ದು, ಅಧಿಕೃತವಾಗಿ ಜಾತಿ ಗಣತಿ ಸರ್ವೇಯು ಸೆ.22 ರಿಂದ ಆರಂಭಗೊಂಡು ಅ.7ರವರೆಗೆ ದಸರಾ ರಜಾ ಅವಧಿಯಲ್ಲಿ ನಡೆಯಲಿದೆ. ಜಾತಿ ಗಣತಿ ಸಮೀಕ್ಷೆಯನ್ನು ಸೆ.22ರಿಂದ 90 ದಿನದೊಳಗೆ ಪೂರ್ಣಗೊಳಿಸುವ ಗುರಿ ಹೊಂದಲಾಗಿದ್ದು, 150 ಮನೆಗಳಿಗೆ ಒಬ್ಬರು ಶಿಕ್ಷಕರನ್ನು ಗಣತಿದಾರರಾಗಿ ನೇಮಿಸಲಾಗಿದೆ. ಆಯೋಗವು ಸಿದ್ಧಪಡಿಸಿದ ಪ್ರಶ್ನಾವಳಿಗಳನ್ನು ಬಳಸಿ, ಕುಟುಂಬದ ಪ್ರತಿಯೊಬ್ಬ ಸದಸ್ಯನ ವಿವರವನ್ನು ಸಂಗ್ರಹಿಸಲಾಗುತ್ತದೆ. ಈ ವೇಳೆಯಲ್ಲಿ ಹೆಸರು, ವಯಸ್ಸು, ■ 6ನೇ ಪುಟಕ್ಕೆ

ಜಾತಿಗಣತಿ ಸಮೀಕ್ಷೆ ಮುಂದೂಡಲ್ಲ

ಬೆಂಗಳೂರು, ಸೆ.19(ಕೆಎಂಶಿ)– ಜಾತಿ ಗಣತಿ ಸಮೀಕ್ಷೆಯನ್ನು ಮುಂದೂಡುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.



ಈಗಾಗಲೇ ನಿಗದಿ ಆಗಿರುವಂತೆ ಸೆಪ್ಟೆಂಬರ್ 22 ರಿಂದ ಮನೆ–ಮನೆ ಸಮೀಕ್ಷೆ ಕಾರ್ಯ ನಡೆಯಲಿದೆ ಎಂದರು.

ವಾರ್ತಾಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ, ಸಮೀಕ್ಷೆ ಕಾರ್ಯ ಮುಂದೂಡುವುದಿಲ್ಲ ಎಂದು ತಿಳಿಸಿದರಾದರೂ, ಹಿಂದುಳಿದ ವರ್ಗಗಳ ಆಯೋಗ ತೆಗೆದುಕೊಳ್ಳುವ ತೀರ್ಮಾನಕ್ಕೆ ನಾವು ಬದ್ಧರಾಗಿರುತ್ತೇವೆ. ಹಿಂದುಳಿದ ವರ್ಗಗಳ ಆಯೋಗ ಶಾಸನಬದ್ಧ ಸಂಸ್ಥೆಯಾಗಿದ್ದು, ಅವರಿಗೆ ಯಾವುದೇ ನಿರ್ದೇಶನಗಳನ್ನು ನೀಡಲು ಸಾಧ್ಯವಿಲ್ಲ. ಸಮೀಕ್ಷೆ ಬಗ್ಗೆ ಅಭಿಪ್ರಾಯಗಳನ್ನು ಆಯೋಗಕ್ಕೆ ವಿವರಿಸಲಾಗಿದ್ದು, ಅಂತಿಮ ನಿರ್ಧಾರವನ್ನು ಆಯೋಗವೇ ಕೈಗೊಳ್ಳಲಿದೆ ಎಂದರು. ಆರ್ಥಿಕ, ಸಾಮಾಜಿಕ ಸಮೀಕ್ಷೆಗೆ ಸಚಿವ ಸಂಪುಟದಲ್ಲಿ ವಿರೋಧ ವ್ಯಕ್ತವಾಗಿರುವ ಬಗ್ಗೆ ಪತ್ರಕರ್ತರ ಪ್ರಶ್ನೆಗೆ ಉತ್ತರಿಸುತ್ತಾ, ಬಿಜೆಪಿಯವರು ಈ ವಿಚಾರದಲ್ಲಿ ರಾಜಕೀಯ ಮಾಡುತ್ತಿದ್ದು, ಕಾಂಗ್ರೆಸ್ ಸರ್ಕಾರ ಹಿಂದೂ ವಿರೋಧಿಯಾಗಿದೆ ಎಂದು ಆರೋಪಿಸುತ್ತಿದ್ದಾರೆ. ಇದನ್ನು ಎಲ್ಲ ಸಚಿವರೂ ಒಕ್ಕೊರಲಿನಿಂದ ಖಂಡಿಸಬೇಕು ಎಂದು ಎಲ್ಲ ಸಚಿವರಿಗೂ ಸೂಚಿಸಲಾಗಿದೆ ಎಂದರು.

ಅರಮನೆಯಲ್ಲಿ ಖಾಸಗಿ ದರ್ಬಾರ್‌ಗೆ ಭರದ ಸಿದ್ಧತೆ

ಸಿಂಹಾಸನವೇರಿ ಧಾರ್ಮಿಕ ವಿಧಿ–ವಿಧಾನ ನೆರವೇರಿಸಲಿರುವ ರಾಜವಂಶಸ್ಥ ಯದುವೀರ್



ಮೈಸೂರು, ಸೆ.19 (ಎಂಟಿವೈ)– ನವರಾತ್ರಿ ಆರಂಭಕ್ಕೆ ಕೇವಲ ಎರಡು ದಿನ ಮಾತ್ರವಿದ್ದು, ಅರಮನೆಯಲ್ಲಿ ರಾಜವಂಶಸ್ಥರು ನಡೆಸುವ ವಿವಿಧ ಧಾರ್ಮಿಕ ಕಾರ್ಯಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿದ್ದು, ಖಾಸಗಿ ದರ್ಬಾರ್ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯದಲ್ಲಿ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಭಾಗಿಯಾಗಲಿದ್ದಾರೆ.

ಸೆ.22ರಂದು ಈ ಸಾಲಿನ ದಸರಾ ಮಹೋತ್ಸವ ಉದ್ಘಾಟನೆಗೊಳ್ಳಲಿದ್ದು, ಅಂದಿನಿಂದ ಅರಮನೆಯಲ್ಲಿ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ರತ್ನ ಖಚಿತ ಸಿಂಹಾಸನವೇರಿ ಖಾಸಗಿ ದರ್ಬಾರ್ ನಡೆಸಲಿದ್ದಾರೆ. ಈಗಾಗಲೇ ಅರಮನೆಯ ಸ್ಟ್ರಾಂಗ್ ರೂಮ್‌ನಿಂದ ಸಿಂಹಾಸನದ ಬಿಡಿಭಾಗಗಳನ್ನು ತಂದು ದರ್ಬಾರ್ ಹಾಲ್ ಹಾಗೂ ಬೆಳ್ಳಿ ಭದ್ರಾಸನದ ಬಿಡಿಭಾಗಗಳನ್ನು ಕನ್ನಡಿತೊಟ್ಟಿಯಲ್ಲಿ ಜೋಡಣೆ ಮಾಡಲಾಗಿದೆ. ರಾಜವಂಶಸ್ಥರು ನವರಾತ್ರಿ ವೇಳೆ ನಡೆಸುವ ಧಾರ್ಮಿಕ ಕಾರ್ಯದ ಅಂತಿಮ ಸಿದ್ಧತಾ ಕಾರ್ಯ ಬಿರುಸುಗೊಂಡಿದೆ.

ದಸರಾ ಉದ್ಘಾಟನೆಯಂದು ಮುಂಜಾನೆ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಎಣ್ಣೆ ಶಾಸ್ತ್ರ ನಡೆಯಲಿದ್ದು, ಬೆಳಗ್ಗೆ 5.30ರಿಂದ 5.45ರೊಳಗೆ ದರ್ಬಾರ್ ಹಾಲ್‌ನಲ್ಲಿ ಜೋಡಣೆ ಮಾಡಿರುವ ಸಿಂಹಾಸನಕ್ಕೆ 'ಸಿಂಹ'(ಸಿಂಹದ ತಲೆ) ಜೋಡಣೆ ಮಾಡಲಾಗುತ್ತದೆ. ಅಂದು 9.55ರಿಂದ 10.15ರೊಳಗೆ ಚಾಮುಂಡಿ ತೊಟ್ಟಿಯಲ್ಲಿ ಯದುವೀರ್ ಅವರಿಗೂ ವಾಣಿ ವಿಲಾಸ ದೇವರ ಮನೆಯಲ್ಲಿ ತ್ರಿಷಿಕಾ ಕುಮಾರಿ ಒಡೆಯರ್ ಅವರಿಗೆ ಕಂಕಣ ಧಾರಣೆ ಮಾಡಲಾಗುತ್ತದೆ.

ಖಾಸಗಿ ದರ್ಬಾರ್ ಧಾರ್ಮಿಕ ಕಾರ್ಯದ ಅಂಗವಾಗಿ ಅಂದು ಬೆಳಗ್ಗೆ 11.45ಕ್ಕೆ ಅರಮನೆ ಆವರಣದ ಕೋಡಿ ಸೋಮೇಶ್ವರ ಹಾಗೂ ಕೋಡಿ ಭೈರವೇಶ್ವರಸ್ವಾಮಿ ದೇವಾಲಯದ ಬಳಿಯಿಂದ ಪಟ್ಟದ ಆನೆ, ಪಟ್ಟದ ಕುದುರೆ, ಪಟ್ಟದ ಹಸು, ಒಂಟೆಯೊಂದಿಗೆ ಕಳಸ ಹೊತ್ತ ಮಹಿಳೆಯರು, ಮಂಗಳವಾದ್ಯದವರನ್ನು ಸವಾರ್ ತೊಟ್ಟಿಗೆ ಕರೆತರಲಾಗುತ್ತದೆ. ನಂತರ ಸಿಂಹಾಸನಾರೋಹಣಕ್ಕೆ ಸಂಬಂಧಿಸಿದ ಕೈಂಕರ್ಯಗಳು ಆರಂಭವಾಗಲಿವೆ. ವಿವಿಧ ಹೋಮ, ಪೂಜೆ ನೆರವೇರಿದ ಬಳಿಕ ಮಧ್ಯಾಹ್ನ 12.42ರಿಂದ ■ 6ನೇ ಪುಟಕ್ಕೆ

ಬಾನು ಮುಷ್ತಾಕ್ ದಸರಾ ಉದ್ಘಾಟನೆ ಆಕ್ಷೇಪಿಸಿದ ಅರ್ಜಿ ಸುಪ್ರೀಂಕೋರ್ಟ್‌ನಲ್ಲೂ ವಜಾ

ಬೆಂಗಳೂರು, ಸೆ. 19(ಕೆಎಂಶಿ)– ನಾಡಹಬ್ಬ ಮೈಸೂರು ದಸರಾ ಉದ್ಘಾಟನೆಗೆ ಮುಖ್ಯ ಅತಿಥಿಯಾಗಿ ಬೂಕರ್ ಪ್ರಶಸ್ತಿ ಪುರಸ್ಕೃತೆ ಬಾನು ಮುಷ್ತಾಕ್ ಆಯ್ಕೆ ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಇಂದು ವಜಾಗೊಳಿಸಿದೆ.



ನ್ಯಾಯಮೂರ್ತಿ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ನ್ಯಾಯಪೀಠ ವಿಚಾರಣೆ ನಡೆಸಿ ಅರ್ಜಿಯನ್ನು ವಜಾ ಮಾಡಿದೆ. ಅರ್ಜಿದಾರರಾದ ಬೆಂಗಳೂರಿನ ಹೆಚ್.ಎಸ್.ಗೌರವ್ ಪರ ವಾದ ಮಂಡಿಸಿದ ಹಿರಿಯ ವಕೀಲ ಪಿ.ಬಿ. ಸುರೇಶ್, ಹಿಂದೂಯೇತರ ವ್ಯಕ್ತಿಗೆ ಪೂಜೆ ಮಾಡಲು ಅವಕಾಶ ನೀಡಲಾಗುವುದಿಲ್ಲ, ದೇವಸ್ಥಾನದ ಒಳಗೆ ಪೂಜೆ ನಡೆಸುವುದನ್ನು ಜಾತ್ಯತೀತ ಕ್ರಿಯೆ ಎಂಬುದಾಗಿ ಪರಿಗಣಿಸಲು ಸಾಧ್ಯವಿಲ್ಲ. ಇದು ರಾಜಕೀಯ ನಿರ್ಧಾರವಾಗಿದೆ.

ಮಂದಿರದೊಳಗೆ ಪೂಜೆ ನಡೆಸುವುದು ಧಾರ್ಮಿಕ ಕ್ರಿಯೆ. ಅದು ಧರ್ಮ ನಿರಪೇಕ್ಷಿತ ಕಾರ್ಯವಲ್ಲ. ಆಚರಣೆಯ ಒಂದು ಭಾಗ, ಈ ಕುರಿತು ಹಲವು ತೀರ್ಪುಗಳಿವೆ. ನಮ್ಮ ಧರ್ಮಕ್ಕೆ ವಿರುದ್ಧವಾದ ಹೇಳಿಕೆಗಳನ್ನು ಬಾನು ಮುಷ್ತಾಕ್ ನೀಡಿದ್ದಾರೆ. ಸರ್ಕಾರ ಇಂತಹ ವ್ಯಕ್ತಿಗಳನ್ನು ಪೂಜೆಗೆ ಆಹ್ವಾನಿಸಲಾಗದು ಎಂದರು.

ಇದಕ್ಕೆ ಆಕ್ಷೇಪಿಸಿದ ನ್ಯಾಯಪೀಠ, ದೇಶದ ಸಂವಿಧಾನದ ಪ್ರಸ್ತಾವನೆ ಏನು ಹೇಳುತ್ತದೆ, ಇದು ಸರ್ಕಾರಿ ಕಾರ್ಯಕ್ರಮ, ಯಾರ ■ 6ನೇ ಪುಟಕ್ಕೆ

ಹಿಂದೂ ಧರ್ಮದಲ್ಲಿ ಒಡಕು ಮೂಡಿಸುತ್ತಿರುವ ಸಿದ್ದರಾಮಯ್ಯ ವಿರುದ್ಧ ಮಠಾಧೀಶರು ಧ್ವನಿ ಎತ್ತಬೇಕು

ಮಾಜಿ ಸಂಸದ ಪ್ರತಾಪ್ ಸಿಂಹ ಆಗ್ರಹ

- ಜಾತಿಗಣತಿಯನ್ನು ಸಿದ್ದರಾಮಯ್ಯ ಕಾಯಿನ್ ಮಾಡಿಕೊಂಡಿದ್ದಾರೆ
- ಕ್ರಿಶ್ಚಿಯನ್‌ರ ಸಂಖ್ಯೆ ಹೆಚ್ಚಿದೆ ಎಂದು ಬಿಂಬಿಸಲು ಷಡ್ಯಂತ್ರ ನಡೆದಿದೆ
- ಕುಲಶಾಸ್ತ್ರ ಅಧ್ಯಯನ ಮಾಡದೆ ಕುರುಬರನ್ನು ಎಸ್‌ಟಿಗೆ ಸೇರಿಸಲಾಗಲ್ಲ
- ರಾಹುಲ್ ಗಾಂಧಿ ಮಾತನ್ನು ಜನರು ಸೀರಿಯಸ್ ಆಗಿ ತೆಗೆದುಕೊಳ್ಳಲ್ಲ



ಮೈಸೂರು, ಸೆ.19(ಬಿಎಲ್ ಯು)– ಹಿಂದೂ ಧರ್ಮದಲ್ಲಿ ಒಡಕು ಮೂಡಿಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಮಠಾಧೀಶರು ಗಟ್ಟಿ ಧ್ವನಿ ಎತ್ತಬೇಕು ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಆಗ್ರಹಿಸಿದ್ದಾರೆ.

ಮೈಸೂರಿನಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ರಾಜಕೀಯ ತಂತ್ರಗಾರಿಕೆ ಮಾಡುವಲ್ಲಿ ಸಿದ್ದರಾಮಯ್ಯ ನಿಸ್ಸೀಮರು. ತಮ್ಮ ಕುರ್ಚಿ ಭದ್ರ ಮಾಡಿಕೊಳ್ಳಲು ಜಾತಿ ಸಮೀಕ್ಷೆ ಮಾಡಿಸುವ ಮೂಲಕ ಜಾಣ್ಮೆಯ ಹೆಜ್ಜೆ ಇಟ್ಟಿದ್ದಾರೆ ಎಂದು ಟೀಕಿಸಿದರು.

ಕೇಂದ್ರ ಸರ್ಕಾರ ಜನಗಣತಿ ಜೊತೆ ಜಾತಿ ಗಣತಿ ಮಾಡುತ್ತಿದೆ. ಪ್ರತಿಯೊಂದು ಕುಟುಂಬದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ನಡೆಸುತ್ತಿದೆ. ಎಲ್ಲಾ ರೀತಿಯ ಅಂಕಿ ಅಂಶಗಳನ್ನು ಕಲೆ ಹಾಕಲು ನಿರ್ಧಾರ ಮಾಡಿದೆ. ಇದು ಕೇಂದ್ರ ಸರ್ಕಾರದ ಯೋಜನೆಗಳಿಗೆ ಅನುಕೂಲ ಆಗುತ್ತದೆ. ಆದರೆ ಇದನ್ನು ಜಾತಿ ಗಣತಿ ಎಂದು ಸಿದ್ದರಾಮಯ್ಯ ಕಾಯಿನ್ ಮಾಡಿದರು. ಆ ಮೂಲಕ ಹಿಂದೂಗಳನ್ನು ಒಡೆಯುವ ಕೆಲಸ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಸಮೀಕ್ಷೆಯಲ್ಲಿ ಕ್ರಿಶ್ಚಿಯನ್‌ರ ಮೂಲ ಜಾತಿ ಉಲ್ಲೇಖಿಸುತ್ತಿದ್ದಾರೆ. ಈ ಮೂಲಕ ಕ್ರಿಶ್ಚಿಯನ್ ಸಮುದಾಯದವರು ಹೆಚ್ಚಾಗಿದ್ದಾರೆ ಎಂದು ಬಿಂಬಿಸುವ ಪ್ರಯತ್ನ ಮಾಡುತ್ತಿದ್ದಾರೆ. ನಿನ್ನೆ ನಡೆದ ಸಂಪುಟ ಸಭೆಯಲ್ಲಿ ■ 6ನೇ ಪುಟಕ್ಕೆ

ದಸರಾ ನಂತರ ಇನ್ನು 400 ನಿವೇಶನ ಹರಾಜಿಗೆ ಎಂಡಿಎ ಸಿದ್ಧತೆ

- ಹಿಂದಿನ ಹರಾಜಲ್ಲಿ ಬಿಡ್ಡರ್‌ಗಳು ಶೇ. 25ರಷ್ಟು ಹಣ ಪಾವತಿಸದ ಕಾರಣ 6 ನಿವೇಶನಗಳ ಬಿಡ್ ರದ್ದು
- ಆ ಪೈಕಿ 20x30 ನಿವೇಶನಕ್ಕೆ 2 ಕೋಟಿ ಕೂಗಿದ್ದ ಬಿಡ್ಡರ್ ಹಣ ಪಾವತಿಸಲು ವಿಫಲ; ಇಬ್ಬರು ಬಿಡ್ಡರ್‌ಗಳು ನಿಧನ



ಮೈಸೂರು, ಸೆ.19(ಆರ್‌ಕೆ)– ಜುಲೈ–ಆಗಸ್ಟ್ 2025ರಲ್ಲಿ ನಡೆದ ಮೊದಲ ಇ–ಹರಾಜಿಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾದ ಹಿನ್ನೆಲೆಯಲ್ಲಿ, ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ದಸರಾ ಬಳಿಕ ಇನ್ನೂ 400 ನಿವೇಶನಗಳ ಹರಾಜು ಪ್ರಕ್ರಿಯೆಗೆ ತಯಾರಿ ನಡೆಸುತ್ತಿದೆ.

ಈ ಕುರಿತಂತೆ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಎಂಡಿಎ ಆಯುಕ್ತ ಕೆ.ಆರ್. ರಕ್ಷಿತ್, ಮೊದಲ ಇ–ಹರಾಜು ಪ್ರಕ್ರಿಯೆಗೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ನಿರೀಕ್ಷೆಗೂ ಮೀರಿ ಬಿಡ್ದಾರರು ಇ–ಹರಾಜಿನಲ್ಲಿ ಪಾಲ್ಗೊಂಡು ನಿವೇಶನ ಖರೀದಿಗೆ ಉತ್ಸುಕರಾಗಿದ್ದಾರೆ. ಎಂಡಿಎ ನಿವೇಶನಗಳಿಗೆ ಹೆಚ್ಚಿನ ಬೇಡಿಕೆ ಇದ್ದು, ಪ್ರಾಧಿಕಾರದ ಆರ್ಥಿಕ ಸಂಪನ್ಮೂಲವೃದ್ಧಿಯೂ ಇದರಿಂದ ಆಗಲಿದೆ ಎಂದರು. ■ 6ನೇ ಪುಟಕ್ಕೆ

ಮೈಸೂರು ದಸರಾ ಮಹೋತ್ಸವದಲ್ಲಿ ಈ ಬಾರಿ ಹೈ ಸೆಕ್ಯೂರಿಟಿ

ಸಿಸಿಟಿವಿ, ಡ್ರೋನ್ ಕ್ಯಾಮರಾ ಮೂಲಕ ಜನರ ಚಲನವಲನಗಳ ಮೇಲೆ ಹದ್ದಿನಕಣ್ಣು

ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರಿಂದ ಮಾಹಿತಿ

- ಎರಡು ಹಂತದಲ್ಲಿ ಪೊಲೀಸ್ ಬಂದೋಬಸ್ತ್
- ಸೂಕ್ಷ್ಮ ಸ್ಥಳಗಳಲ್ಲಿ ದಿನದ 24 ಗಂಟೆಯೂ ಪೊಲೀಸರ ಗಸ್ತು
- 6,384 ಸಿವಿಲ್, ಟ್ರಾಫಿಕ್ ಅಧಿಕಾರಿಗಳ ನಿಯೋಜನೆ


ಮೈಸೂರು, ಸೆ.19(ಬಿಎಲ್‌ಯು)– ಈ ಬಾರಿ 11 ದಿನಗಳ ಕಾಲ ನಡೆಯುವ ವಿಶ್ವ ವಿಖ್ಯಾತ ಮೈಸೂರು ದಸರಾ ಉತ್ಸವಕ್ಕೆ ದೇಶ–ವಿದೇಶದಿಂದ ಲಕ್ಷಾಂತರ ಜನರು ಆಗಮಿಸುತ್ತಾರೆ. ನೂಕು ನುಗ್ಗಲು, ಕಾಲ್ತುಳಿತ ಸೇರಿದಂತೆ ಯಾವುದೇ ಅನಾಹುತ–ಅಪರಾಧ ಕೃತ್ಯಗಳು ನಡೆಯದಂತೆ ಹೈ ಸೆಕ್ಯೂರಿಟಿ ಮಾಡಲಾಗಿದೆ. ಮೈಸೂರು ಅರಮನೆ ಸುತ್ತಮುತ್ತಲಿನ ಪ್ರದೇಶ ಸೇರಿದಂತೆ ನಗರದ ಯಾವುದೇ ಭಾಗದಲ್ಲೂ ಟ್ರಾಫಿಕ್ ಜಾಮ್ ಆಗದಂತೆ ಸುಗಮ ಸಂಚಾರ ವ್ಯವಸ್ಥೆಗೆ ಹಲವು ಕ್ರಮ ಕೈಗೊಳ್ಳಲಾಗುತ್ತಿದೆ.

ನಗರದ ಲಿ ರುಚಿ ದಿ ಪ್ರಿನ್ಸ್ ಹೋಟೆಲ್‌ನಲ್ಲಿ ಇಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರು ದಸರಾದಲ್ಲಿ ಕೈಗೊಂಡಿರುವ ಬಿಗಿ ಪೊಲೀಸ್ ಬಂದೋಬಸ್ತ್ ಬಗ್ಗೆ ಸಮಗ್ರ ವಿವರಣೆ ನೀಡಿದರು. ಸೆಪ್ಟೆಂಬರ್ 22 ರಿಂದ ಅಕ್ಟೋಬರ್ 2 ರವರೆಗೆ ದಸರಾ ಉತ್ಸವದ ಹಲವು ಕಾರ್ಯಕ್ರಮ ಮೈಸೂರಿನ ವಿವಿಧೆಡೆ ನಡೆಯಲಿವೆ. ಈ ವೇಳೆ ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಂತೆ, ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಅವಶ್ಯಕ ಕ್ರಮ ಕೈಗೊಂಡಿದ್ದೇವೆ ಎಂದು ತಿಳಿಸಿದರು. ಸೆಪ್ಟೆಂಬರ್ 22 ರಿಂದ 29 ರವರೆಗೆ ಮೊದಲ ಹಂತದಲ್ಲಿ ಹಾಗೂ ಸೆಪ್ಟೆಂಬರ್ 30 ರಿಂದ ಅಕ್ಟೋಬರ್ 2 ರವರೆಗೆ ಎರಡನೇ ಹಂತದಲ್ಲಿ ಬಂದೋಬಸ್ತ್ ■ 6ನೇ ಪುಟಕ್ಕೆ



ಮೈಸೂರಿನ ಲಿ ರುಚಿ ದಿ ಪ್ರಿನ್ಸ್ ಹೋಟೆಲ್‌ನಲ್ಲಿ ಶುಕ್ರವಾರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಡಿಸಿಪಿಗಳಾದ ಬಿಂದುಮಣಿ ಹಾಗೂ ಸುಂದರ್ ರಾಜ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಸಿಸಿಟಿವಿ, ಡ್ರೋನ್ ಕಣ್ಗಾವಲು




ದಸರಾ ವೇಳೆ ಇಡೀ ಮೈಸೂರಿನಲ್ಲಿ ಜನರ ಚಲನವಲನಗಳ ಬಗ್ಗೆ ಹದ್ದಿನ ಕಣ್ಣಿಡಲು ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಲಾಗುವುದು ಎಂದು ಸೀಮಾ ಲಾಟ್ಕರ್ ಹೇಳಿದರು.

ದಸರಾ ಉದ್ಘಾಟನೆಗೊಳ್ಳುವ ಚಾಮುಂಡಿ ಬೆಟ್ಟ, ಅರಮನೆ, ಬನ್ನಿಮಂಟಪ ಸೇರಿದಂತೆ ಪ್ರಮುಖ ಸ್ಥಳಗಳಲ್ಲಿ 200 ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಲಾಗುವುದು. ಅಲ್ಲದೆ ನಗರದಲ್ಲಿನ ಖಾಸಗಿ ಕಚೇರಿ ಮತ್ತು ಮನೆಗಳಲ್ಲಿರುವ 34,616 ಸಿಸಿಟಿವಿ ಕ್ಯಾಮರಾಗಳನ್ನು ಪೊಲೀಸ್ ಇಲಾಖೆಯ ಆ್ಯಪ್‌ಗೆ ಸಂಪರ್ಕ ಕಲ್ಪಿಸಿ ಅದರ ಮೂಲಕ ಸುತ್ತ ಮುತ್ತಲಿನ ವಾತಾವರಣದ ಬಗ್ಗೆ ಕಣ್ಗಾವಲಿಡಲಾಗುವುದು ಎಂದರು.

ಈ ಬಾರಿಯ ದಸರಾದಲ್ಲಿ ಡ್ರೋನ್ ಕ್ಯಾಮರಾಗಳನ್ನು ಹೆಚ್ಚಾಗಿ ಬಳಕೆ ಮಾಡಲಾಗುವುದು. ಈ ಮೂಲಕ ಯಾವುದೇ ಅಹಿತಕರ ಘಟನೆಗೆ ಅವಕಾಶ ನೀಡದಂತೆ ಪ್ರತಿ ಕ್ಷಣ ಪರಿಸ್ಥಿತಿಯನ್ನು ಅವಲೋಕಿಸಲಾಗುವುದು ಎಂದು ಸೀಮಾ ಲಾಟ್ಕರ್ ತಿಳಿಸಿದರು.

ಪೊಲೀಸ್ ಸಹಾಯ ಕೇಂದ್ರಗಳು

ಸೆಪ್ಟೆಂಬರ್ 22 ರಿಂದ ಅಕ್ಟೋಬರ್ 2 ರವರೆಗೆ ನಡೆಯುವ ದಸರಾ ಮಹೋತ್ಸವದಲ್ಲಿ ಸಾರ್ವಜನಿಕರು ಹಾಗೂ ಪ್ರವಾಸಿಗರಿಗೆ ಪ್ರವಾಸಿ ತಾಣ ಹಾಗೂ ದಸರಾ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಲು ಎರಡು ಹಂತದಲ್ಲಿ ಪೊಲೀಸ್ ಹೆಲ್ಪ್ ಡೆಸ್ಕ್ (ಪೊಲೀಸ್ ಸಹಾಯ ಕೇಂದ್ರ) ಗಳನ್ನು ಈಗಾಗಲೇ ತೆರೆಯಲಾಗಿದೆ ಎಂದು ಸೀಮಾ ಲಾಟ್ಕರ್ ತಿಳಿಸಿದರು.



ಸೆಪ್ಟೆಂಬರ್ 22 ರಿಂದ ಅಕ್ಟೋಬರ್ 1 ರವರೆಗೆ ಪೊಲೀಸ್ ಸಹಾಯ ಕೇಂದ್ರಗಳು ಜಗಜೀವನ ರಾಮ್ ವೃತ್ತ, ರೈಲ್ವೆ ನಿಲ್ದಾಣ, ಕೆ.ಆರ್.ವೃತ್ತ, ಅರಮನೆಯ ಮಹಾ ಗೇಟ್, ಸೈಂಟ್ ಫಿಲೋಮಿನಾ ಚರ್ಚ್, ಗ್ರಾಮಾಂತರ ಬಸ್ ನಿಲ್ದಾಣ ಗಾಂಧಿ ವೃತ್ತ, ಮೈಸೂರು ಮೃಗಾ ಲಯ, ದಸರಾ ವಸ್ತು ಪ್ರದರ್ಶನದ ಪ್ರವೇಶ ದ್ವಾರ, ಮಣಿಪಾಲ್ ಆಸ್ಪತ್ರೆ ಜಂಕ್ಷನ್, ದೇವೇಗೌಡ ವೃತ್ತ, ಹುಣಸೂರು ರಸ್ತೆಯ ಹೂಟಗಳ್ಳಿ ಜಂಕ್ಷನ್ ನಲ್ಲಿ ಕಾರ್ಯ ನಿರ್ವಹಿಸುತ್ತದೆ ಎಂದು ಹೇಳಿದರು.

ಅಕ್ಟೋಬರ್ 2 ರಂದು ಬನ್ನಿಮಂಟಪ ಗೇಟ್ ನಂಬರ್ 8, ಸೈಂಟ್ ಫಿಲೋಮಿನಾ ಕಾಲೇಜ್ ಹಿಂಭಾಗ, ಟಿಪ್ಪು ಸರ್ಕಲ್, ಜಗಜೀವನ ರಾಮ್ ವೃತ್ತ, ರೈಲ್ವೆ ನಿಲ್ದಾಣ, ಅರಮನೆ, ಅರಮನೆ ವರಾಹ ಗೇಟ್, ಗ್ರಾಮಾಂತರ ಬಸ್ ನಿಲ್ದಾಣ ಗಾಂಧಿ ವೃತ್ತ, ಮೈಸೂರು ಮೃಗಾಲಯ ಹಾಗೂ ದಸರಾ ವಸ್ತು ಪ್ರದರ್ಶನದ ಮುಖ್ಯ ದ್ವಾರದಲ್ಲಿ ಪೊಲೀಸ್ ಸಹಾಯ ಕೇಂದ್ರಗಳು ಜನರ ಸಹಾಯಕ ಆಗಮಿಸಲಿವೆ ಎಂದರು.

ಪೊಲೀಸ್ ಸಹಾಯಕ ಕೇಂದ್ರಕ್ಕೆ ನಿಯೋಜನೆಗೊಂಡಿರುವ ಪೊಲೀಸ್ ಸಿಬ್ಬಂದಿ ಜನರಿಗೆ ಅಗತ್ಯ ಮಾಹಿತಿ ನೀಡುತ್ತಾರೆ. ಏಕ ಮುಖ ಸಂಚಾರ ವ್ಯವಸ್ಥೆ, ವಾಹನ ನಿಲುಗಡೆ ಬಗ್ಗೆ ವಿವರಣೆ ನೀಡುವರು. ಸಾರ್ವಜನಿಕರಿಂದ ಗುರುತರವಾದ ದೂರುಗಳು ಬಂದಲ್ಲಿ ಅವರಿಗೆ ಸಂಬಂಧಪಟ್ಟ ಠಾಣೆಗೆ ಹೋಗಿ ದೂರು ಸಲ್ಲಿಸುವಂತೆ ಮಾರ್ಗದರ್ಶನ ಮಾಡುತ್ತಾರೆ. ಅಲ್ಲದೆ ಸಾರ್ವಜನಿಕರು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಕಿರು ಹೊತ್ತಿಗೆ ನೀಡುವರು ಎಂದು ಸೀಮಾ ಲಾಟ್ಕರ್ ತಿಳಿಸಿದರು.

ಸಾರ್ವಜನಿಕರು ತಮ್ಮ ಸುರಕ್ಷತೆ ಮತ್ತು ಭದ್ರತೆಗೆ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಮಾಹಿತಿವುಳ್ಳ ಕಿರು ಹೊತ್ತಿಗೆ ನೀಡಲಾಗುವುದು ಎಂದು ತಿಳಿಸಿದ ಸೀಮಾ ಲಾಟ್ಕರ್ ಅವರು, ಯಶಸ್ವಿ ದಸರಾಗೆ ಪೊಲೀಸರು ಹೇಗೆ ಕರ್ತವ್ಯ ನಿರ್ವಹಣೆ ಮಾಡಬೇಕು? ಹಾಗೂ ಸಾರ್ವಜನಿಕರೊಂದಿಗೆ ಹೇಗೆ ಸೌಜನ್ಯದಿಂದ ವರ್ತಿಸಬೇಕು? ಎಂಬ ಕುರಿತ ಮಾಹಿತಿವುಳ್ಳ ಕಿರು ಹೊತ್ತಿಗೆ ನೀಡಲಾಗುವುದು ಎಂದು ಹೇಳಿದರು.

ನಕ್ಕರೆ ಅದೇ ಸ್ವರ್ಗ

ಜಡ್ಜ್ : ನಿಮ್ಮ ಪತಿ ಹೇಗೆ ಸತ್ರು?
ಮಹಿಳೆ : ವಿಷ ಕುಡಿದು ಸತ್ರು ಸ್ವಾಮಿ.
ಜಡ್ಜ್ : ಮತ್ತೆ ನಿಮ್ಮ ಪತಿಯ ಮೈ ಮೇಲೆ ಗಾಯ ಹೇಗಾಯಿತು?
ಮಹಿಳೆ : ಅವರು ವಿಷ ಕುಡಿಯಲು ಒಪ್ಪಲಿಲ್ಲ ಸ್ವಾಮಿ...

ಮೈಸೂರು ಮಿತ್ರ

ಶನಿವಾರ, 20 ಸೆಪ್ಟೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ಸಮಸ್ಯೆಗಳನ್ನು ಬಚ್ಚಿಟ್ಟರೆ ಸಮಾಧಾನ ಸಿಗುವುದಿಲ್ಲ.
ಹೇಳಿ ಬಿಟ್ಟರೆ ಮರ್ಯಾದೆ ಸಿಗುವುದಿಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಂಗಿನ ಅರಮನೆಗಿಂತ ಗುಡಿಸಲೇ ಮೇಲು

ನಿಮ್ಮ ಪತ್ರಗಳು

■ ಮೈಸೂರು ಪಾಲಿಕೆ ಪ್ರಶ್ನಾತೀತವೇ?



ಮಾನ್ಯರೆ,

ಇದು ಮೈಸೂರು ಮಹಾನಗರ ಪಾಲಿಕೆಯ ಭಾರಿ ವಾಹನ! ಈ ವಾಹನವು 19.09.2025 ರ ಶುಕ್ರವಾರ ಮಧ್ಯಾಹ್ನ ಜಯನಗರದ ಬಳಿ ನಿಂತಿತ್ತು. ಈ ಬೃಹತ್ ವಾಹನದ ಮುಂಭಾಗದಲ್ಲಾಗಲೀ ಹಿಂಭಾಗದಲ್ಲಾಗಲೀ ಸಂಖ್ಯಾ ಫಲಕವಿಲ್ಲ.

ಈ ವಾಹನವು ಸಂಚಾರ ನಿಯಮವನ್ನು ಉಲ್ಲಂಘಿಸಿದರೆ ಪೊಲೀಸರು ದಂಡ ವಿಧಿಸುವುದು ಹೇಗೆ? ಈ ವಾಹನದ ಚಾಲಕ, ಅಪಘಾತ ಎಸಗಿ ಪರಾರಿಯಾದರೆ ಆತನನ್ನು ಪೊಲೀಸರು ಹಿಡಿಯುವುದು ಹೇಗೆ? ಅಫಘಾತದಿಂದ ರಕ್ತಗಾಯ,ಪ್ರಾಣಹಾನಿ ಸಂಭವಿಸಿದರೆ ಪತ್ತೆ ಮಾಡುವುದು ಹೇಗೆ?

ಮೈಸೂರು ಮಹಾನಗರ ಪಾಲಿಕೆಯ ಶೇ.75 ರಷ್ಟು ವಾಹನಗಳಿಗೆ ನಂಬರ್ ಪ್ಲೇಟ್ ಇಲ್ಲ.ಮೈಸೂರು ಮಹಾನಗರ ಪಾಲಿಕೆಯು ಪ್ರಶ್ನಾತೀತವೇ?

ಪಾಲಿಕೆಯ ವಾಹನಗಳಿಗೆ ಮೋಟಾರು ವಾಹನ ಕಾಯಿದೆ ಅನ್ವಯಿಸುವುದಿಲ್ಲವೇ? ಮೈಸೂರಿನ ನೂರಾರು ಜಾಗಗಳಲ್ಲಿ ಸಿಸಿ ಟಿವಿ ಹಾಗೂ ಕೃತಕ ಬುದ್ಧಿಮತ್ತೆಯ ಕ್ಯಾಮರಾಗಳಿವೆ. ಕೇವಲ ಹೆಲ್ಮೆಟ್ ಧರಿಸದ ದ್ವಿಚಕ್ರ ವಾಹನ ಸವಾರರು ಮತ್ತು ಸೀಟ್ ಬೆಲ್ಟ್ ಧರಿಸದ ವಾಹನ ಚಾಲಕರ ವಾಹನಗಳನ್ನು ಮಾತ್ರ ಗುರುತಿಸುವಂತೆ ಈ ಸಿಸಿ ಟಿವಿ ಮತ್ತು ಎ ಐ ಕ್ಯಾಮರಾಗಳನ್ನು ರೂಪಿಸಲಾಗಿದೆಯೇ ಎಂಬ ಅನುಮಾನ ಜನಸಾಮಾನ್ಯರಲ್ಲಿ ಮೂಡಿದೆ! ಸಂಖ್ಯಾಫಲಕ ಇಲ್ಲದೆ ನಗರದಾದ್ಯಂತ ಮೋಟಾರು ವಾಹನ ಕಾಯಿದೆಯ ನಿಯಮಗಳನ್ನು ಉಲ್ಲಂಘಿಸಿ ರಾಜಾರೋಷವಾಗಿ ಸಂಚರಿಸುತ್ತಿರುವ ನಗರ ಪಾಲಿಕೆಯ ವಾಹನಗಳನ್ನು ಪೊಲೀಸರು ಕೂಡಲೇ ಜಪ್ತಿ ಮಾಡಿ ಪಾಲಿಕೆಯ ಆಯುಕ್ತರ ವಿರುದ್ಧ ಪ್ರಕರಣ ದಾಖಲಿಸಿ ದಂಡ ವಸೂಲಿ ಮಾಡಿ ಕರ್ತವ್ಯ ಶ್ರೇಷ್ಠತೆ ಮೆರೆಯಲಿ.

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು

■ ಅತಿಥಿ ಉಪನ್ಯಾಸಕರ ನೇಮಕಾತಿ ಬಿಕ್ಕಟ್ಟು ಪರಿಹರಿಸಿ

ಮಾನ್ಯರೆ,

ಕರ್ನಾಟಕದಲ್ಲಿ ಸುಮಾರು 430 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸುಮಾರು 11 ಸಾವಿರಕ್ಕಿಂತ ಹೆಚ್ಚು ಅತಿಥಿ ಉಪನ್ಯಾಸಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸರ್ಕಾರ ನೀಡುವ ಅಲ್ಪ ವೇತನಕ್ಕೆ ಯಾವುದೇ ಸೇವಾ ಭದ್ರತೆ ಇಲ್ಲದೆ ಈ ಉಪನ್ಯಾಸಕರು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪಾಠ ಪ್ರವಚನಗಳನ್ನು ಮಾಡುತ್ತಿದ್ದಾರೆ. ಈ ಕಾಲೇಜುಗಳಿಗೆ ಪ್ರವೇಶ ಬಯಸಿ ಬರುವ ವಿದ್ಯಾರ್ಥಿಗಳು ಬಹುತೇಕ ಬಡ ಹಾಗೂ ಮಧ್ಯಮ ವರ್ಗದವರು. ಅತಿಥಿ ಉಪನ್ಯಾಸಕರೂ ಹಲವಾರು ವರ್ಷಗಳಿಂದ ಬಹಳ ಕಡಿಮೆ ವೇತನಕ್ಕೆ ದುಡಿಯುತ್ತ ಸರ್ಕಾರಕ್ಕೆ ಕೋಟ್ಯಾನ ಕೋಟಿ ಹಣವನ್ನು ಉಳಿಸಿರುತ್ತಾರೆ. ಸರ್ಕಾರ ಮಾತ್ರ ಯಾವುದೇ ಸೇವಾ ಭದ್ರತೆಯಾಗಲಿ, ವಿಲೀನತೆ ಆಗಲಿ ಅಥವಾ ಕಾಯಮಾತಿಯಾಗಲಿ ಮಾಡದೆ ಈ ಉಪನ್ಯಾಸಕರನ್ನು ಶೋಷಣೆ ಮಾಡುತ್ತಿದೆ. ಬೇರೆ ಖಾಸಗಿ ಕಂಪನಿಗಳಲ್ಲಿ ನೌಕರರಿಗೆ ಕಿರುಕುಳ, ಶೋಷಣೆ ಆದರೆ ಸರ್ಕಾರ ಮಧ್ಯಪ್ರವೇಶ ಮಾಡುತ್ತದೆ. ಆದರೆ, ತನ್ನ ಇಲಾಖೆಯಲ್ಲಿಯೇ ಸರ್ಕಾರವು ಈ ಬಡಪಾಯಿ ಅತಿಥಿ ಉಪನ್ಯಾಸಕರನ್ನು ಸರಿಯಾಗಿ ನಡೆಸಿಕೊಳ್ಳದೆ ಬೋಧಕರಿಗೆ ಸಿಗಬೇಕಾದ ಕನಿಷ್ಠ ಸೌಲಭ್ಯಗಳನ್ನು ನೀಡದೇ ದುಡಿಸಿಕೊಳ್ಳುತ್ತಿದೆ.

ಇತ್ತೀಚೆಗೆ ಅತಿಥಿ ಉಪನ್ಯಾಸಕರ ನೇಮಕಾತಿಗೆ ಸಂಬಂಧಪಟ್ಟಂತೆ ಯುಜಿಸಿ ಅರ್ಹತೆ ಮತ್ತು ಅನರ್ಹತೆಗೆ ಸಂಬಂಧಪಟ್ಟಂತೆ ನ್ಯಾಯಾಲಯವು ತೀರ್ಪು ಪ್ರಕಟಿಸಿದೆ. ಇದರಿಂದ ಸರ್ಕಾರಕ್ಕೆ ಗೊಂದಲ ಏರ್ಪಟ್ಟು ಕೈಚೆಲ್ಲಿ ಕುಳಿತಿದೆ. ಅತಿಥಿ ಉಪನ್ಯಾಸಕರ ಖಾಯಮಾತಿಗೆ ಕಾನೂನು ತೊಡಕುಗಳಿವೆ ಎಂದು ಹೇಳುವ ಸರ್ಕಾರ ತನಗೆ ಬೇಕೆಂದಾಗ ಕಾನೂನುಗಳನ್ನು ಮಾರ್ಪಡಿಸಿದರು ಮಾರ್ಪಡಿಸಿಕೊಳ್ಳುತ್ತದೆ. ಆದರೆ ಬಡಪಾಯಿ ಉಪನ್ಯಾಸಕರ ನೇಮಕಾತಿಗೆ ಸಂಬಂಧಪಟ್ಟಂತೆ ಅಸಡ್ಡೆ ಮಾಡುವುದು ಎಷ್ಟು ಸರಿ. ಆದುದರಿಂದ ಸಾಮಾಜಿಕ ನ್ಯಾಯಕ್ಕೆ ಹೆಸರಾದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಧ್ಯಪ್ರವೇಶ ಮಾಡಿ ಸಮಸ್ಯೆ ಬಗೆಹರಿಸಬೇಕಿದೆ. ತಾವೇ ವಿರೋಧ ಪಕ್ಷದಲ್ಲಿದ್ದಾಗ ಸಲಹೆಗಳನ್ನು ನೀಡಿದ್ದೀರಿ. ಅವುಗಳನ್ನು ತಾವೇ ಅಧಿಕಾರದಲ್ಲಿದ್ದಾಗ ಜಾರಿಗೆ ತರುವ ಮುಖಾಂತರ ಈ ಉಪನ್ಯಾಸಕರ ಬಾಳಿಗೆ ದಾರಿ ದೀಪವಾಗಬೇಕೆಂದು ಈ ಮೂಲಕ ತಮ್ಮಲ್ಲಿ ಮನವಿ.

–ಎಂ ಸಿ ಸುರೇಶ್, ಮಾವತ್ತೂರು, ಕೆ.ಆರ್. ನಗರ ತಾ.

■ ಹಳೆ ವಾಹನ ಸ್ಕ್ರಾಪಿಂಗ್ ಮಾದರಿ ನಡೆ

ಮಾನ್ಯರೆ,

ಇತ್ತೀಚೆಗೆ ರಾಜ್ಯ ಸರ್ಕಾರವು 15 ವರ್ಷಕ್ಕಿಂತ ಹಳೆಯ ಸರ್ಕಾರಿ ವಾಹನಗಳನ್ನು ಗುಜರಿಗೆ ಹಾಕುವ ಆದೇಶ ಹೊರಡಿಸಿ ಇಲಾಖೆಗಳು, ನಿಗಮಗಳು, ನಗರಸಭೆಗಳು ಮತ್ತು ಮಂಡಳಿಗಳ ವ್ಯಾಪ್ತಿಯಲ್ಲಿರುವ ಸಾವಿರಾರು ವಾಹನಗಳನ್ನು ಹಂತ ಹಂತವಾಗಿ ನಾಶಪಡಿಸುವ ನಿರ್ಧಾರ ಸ್ವಾಗತಾರ್ಹ. ಹಳೆಯ ವಾಹನಗಳು ಕೇವಲ ನಿರ್ವಹಣಾ ವೆಚ್ಚ ಹೆಚ್ಚಿಸುವುದಷ್ಟೇ ಅಲ್ಲದೆ, ಗಂಭೀರ ವಾಯುಮಾಲಿನ್ಯ ಸಮಸ್ಯೆ ಉಂಟುಮಾಡುತ್ತವೆ. ವಾಹನ ಮಾಲಿನ್ಯದಿಂದ ಉಸಿರಾಟದ ತೊಂದರೆ, ಹೃದಯ ಸಂಬಂಧಿ ಕಾಯಿಲೆ ಮತ್ತು ಹವಾಮಾನ ಬದಲಾವಣೆಯಂತಹ ಸಮಸ್ಯೆಗಳಿಗೆ ಎಡೆಮಾಡಿಕೊಟ್ಟಿದೆ ಎಂದು ವರದಿಯಾಗಿದೆ. ಸರ್ಕಾರ ತನ್ನದೇ ವಾಹನಗಳನ್ನು ಮೊದಲು ತ್ಯಜಿಸುವ ಮೂಲಕ ಜನರಿಗೆ ಮಾದರಿಯಾಗುತ್ತಿರುವುದು ನಿಜಕ್ಕೂ ಒಳ್ಳೆಯ ಸಂದೇಶ. ಆದರೆ, ಈ ಕ್ರಮವನ್ನು ಕೇವಲ 'ಹಳೆ ವಾಹನ ನಾಶ' ಎನ್ನುವ ಮಟ್ಟದಲ್ಲಿ ಮಾತ್ರ ನೋಡಬಾರದು. ಸರ್ಕಾರವು ಹೊಸ ವಾಹನಗಳನ್ನು ಖರೀದಿಸುವ ಸಂದರ್ಭದಲ್ಲಿ ಪರಿಸರ ಸ್ನೇಹಿ ಪರ್ಯಾಯ ಗಳಾದ ಎಲೆಕ್ಟ್ರಿಕ್ ವಾಹನಗಳಿಗೆ ಹೆಚ್ಚು ಆದ್ಯತೆ ನೀಡಬೇಕು. ಇಲ್ಲದಿದ್ದರೆ ಹಳೆಯ ಡೀಸೆಲ್ ಮತ್ತು ಪೆಟ್ರೋಲ್ ವಾಹನಗಳನ್ನು ತೆಗೆದುಹಾಕಿ ಮತ್ತೆ ಅದೇ ಮಾದರಿಯ ಇಂಧನ ಬಳಕೆ ವಾಹನಗಳನ್ನು ತರುತ್ತಿದ್ದರೆ ಪರಿಸರದ ಮೇಲೆ ಮತ್ತೆ ಗಂಭೀರ ಪರಿಣಾಮ ಬೀರಿದಂತಾಗುತ್ತದೆ. ಸ್ಕ್ರಾಪಿಂಗ್ ಘಟಕಗಳಲ್ಲಿ ಸರಿಯಾದ ನಿಯಮಾ ನುಸಾರ ವಾಹನಗಳ ವಿಲೇವಾರಿ ನಡೆಯಬೇಕು,ಕ್ರಮವು ಪರಿಸರ ಸಂರಕ್ಷಣೆ, ಆಡಳಿತದ ಜವಾಬ್ದಾರಿ ಮತ್ತು ಶುದ್ಧ ಆಡಳಿತದ ಸಂಕೇತವಾಗಬೇಕು. ಸರ್ಕಾರವು ನಾಗರಿಕರಿಗೆ ನೀಡುತ್ತಿರುವ ಈ ಮಾದರಿಯ ನಡೆ ದೀರ್ಘಕಾಲೀನವಾಗಿ ಹಸಿರು ಕರ್ನಾಟಕದ ಕನಸನ್ನು ಸಾಕಾರಗೊಳಿಸುವಲ್ಲಿ ಅನುಕೂಲವಾಗುತ್ತದೆ.


–ಡಾ. ಎಚ್.ಕೆ.ವಿಜಯಕುಮಾರ್, ಮೈಸೂರು.



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

ರಾಮಾಯಣ ಕಲಿಯುಗಕ್ಕೆ ಕನ್ನಡಿಯೂ...



“ ಭಾರತೀಯ ಪರಂಪರೆಯನ್ನು ಎತ್ತಿ ಮೇರು ಶಿಖರವಾಗಿಸಿರುವ ಹಾಗೂ ಹಿಂದೂ ಧರ್ಮದ ಪವಿತ್ರ ಗ್ರಂಥಗಳು ಎಂದು ಮಾನ್ಯತೆ ಪಡೆದ ರಾಮಾಯಣ ಮತ್ತು ಮಹಾಭಾರತ ಕೃತಿಗಳು ಅಂದಿಗೂ, ಇಂದಿಗೂ ಹೊಸ ಹೊಸ ರೀತಿಯಲ್ಲಿ ಕೃತಿಗಳನ್ನು ವಿಮರ್ಶಿಸುವ, ವಿಭಿನ್ನವಾಗಿ ನೋಡುವ ಅವಕಾಶವನ್ನು ಕಲ್ಪಿಸಿಕೊಟ್ಟಿದೆ ಹಾಗೂ ಕಲಿಕೆಯ ಹೂ ಮನಸ್ಸನ್ನು ನಿರ್ಮಿಸಿ ಸಂದೇಶಗಳು ಅಡಗಿಸಿ ಕೊಂಡ ಇಂದಿಗೂ ಎಂದೆಂದಿಗೂ ಜೀವಂತ ಕಾವ್ಯದ, ಜೀವಂತ ಪಾತ್ರಗಳನ್ನು ಸೃಷ್ಟಿಸಲಾಗಿದೆ. ಅವುಗಳು ನೀತಿ ಬೋಧಿಸುವುದನ್ನು, ಪಾಠ ಮಾಡುವುದನ್ನು ನಿಲ್ಲಿಸಿಲ್ಲ.

ಕಣ್ಣು ತೆರೆದು ನೋಡಿದರೆ ಕಾಣುವುದೆಲ್ಲವೂ ಕಲಿಕೆಯ ಮಹಾಗುರುವಿನಂತೆ ಗೋಚರವಾಗುತ್ತವೆ. ಕಲಿಯುವ ಮನಸ್ಸಿನಲ್ಲಿ ವಿವೇಚನೆಯ ಸಾಕಾರ ಸ್ವೀಕಾರಗೊಳ್ಳುವುದರಲ್ಲಿ ಸಂಶಯವಿಲ್ಲ. ಕಲಿಕೆಗೆ ವಯಸ್ಸಿನ ಮಿತಿ ಇಲ್ಲ ಮನಸ್ಸಿನ ಅಗತ್ಯವಿದೆ ಅಷ್ಟೆ. ಅದಕ್ಕಾಗಿಯೇ ಬಲ್ಲವರು ಬಹಳ ಮಟ್ಟಿಗೆ ಹೇಳುವುದು ಮನಸ್ಸಿದ್ದರೆ ಮಾರ್ಗವೆಂದು. ಈ ದೃಷ್ಟಿಯಿಂದ ತೆರೆ ಮುಚ್ಚಿದ ಪರದೆಯ ಸರಿಸಿ ಕಲಿಯಲು ಅನುವಾದಾಗ ಕಲಿಕೆಯ ಧಾರಣೆಗಳು ಧೋರಣೆಯಾಗಿ ಅವತರಿಸುತ್ತವೆ. ಈ ಹಿನ್ನೆಲೆಯಲ್ಲಿ ಭಾರತೀಯ ಪರಂಪರೆಯನ್ನು ಎತ್ತಿ ಮೇರು ಶಿಖರವಾಗಿಸಿರುವ ಹಾಗೂ ಹಿಂದೂ ಧರ್ಮದ ಪವಿತ್ರ ಗ್ರಂಥಗಳು ಎಂದು ಮಾನ್ಯತೆ ಪಡೆದ 'ರಾಮಾಯಣ' ಮತ್ತು 'ಮಹಾಭಾರತ' ಕೃತಿಗಳು ಅಂದಿಗೂ, ಇಂದಿಗೂ ಹೊಸ ಹೊಸ ರೀತಿಯಲ್ಲಿ ಕೃತಿಗಳನ್ನು ವಿಮರ್ಶಿಸುವ, ವಿಭಿನ್ನವಾಗಿ ನೋಡುವ ಅವಕಾಶವನ್ನು ಕಲ್ಪಿಸಿಕೊಟ್ಟಿದೆ ಹಾಗೂ ಕಲಿಕೆಯ ಹೂ ಮನಸ್ಸನ್ನು ನಿರ್ಮಿಸಿ ಸಂದೇಶಗಳು ಅಡಗಿಸಿ ಕೊಂಡ ಇಂದಿಗೂ ಎಂದೆಂದಿಗೂ ಜೀವಂತ ಕಾವ್ಯದ, ಜೀವಂತ ಪಾತ್ರಗಳನ್ನು ಸೃಷ್ಟಿಸಲಾಗಿದೆ. ಅವುಗಳು ನೀತಿ ಬೋಧಿಸುವುದನ್ನು, ಪಾಠ ಮಾಡುವುದನ್ನು ನಿಲ್ಲಿಸಿಲ್ಲ. ಕನ್ನಡದ ಪ್ರಸಿದ್ಧ ಕವಿಯಾದ ಕುಮಾರವ್ಯಾಸನು ಹೇಳಿರುವ **ತಿಣಿಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ**– ಭೂಮಿಯನ್ನು ಹೊತ್ತಿರುವ ಆದಿಶೇಷನು ರಾಮಾಯಣ ಬರೆದ ಕವಿಗಳ ಮತ್ತು ಅವರ ಕಾವ್ಯದ ಭಾರವನ್ನು ಹೊರಲಾರದೆ ತಿಣುಕಿದನು– ತತ್ತರಿಸಿದನು ಎನ್ನುವ ಈ ಮಾತು ಭಾರತದಲ್ಲಿ ರಾಮಾಯಣವನ್ನು, ಮಹಾಭಾರತವನ್ನು ಆಧಾರವಾಗಿಟ್ಟುಕೊಂಡು ಬರೆದ ಕವಿಗಳ ಸಂಖ್ಯೆ ಹೆಚ್ಚಿದೆ ಎಂಬುದನ್ನು ತಿಳಿಸುತ್ತದೆ. ಮೂಲ ಕೃತಿಯನ್ನು ಆಧಾರವಾಗಿಟ್ಟುಕೊಂಡು ಅನೇಕ, ಕವಿಗಳು ತಮಗೆ ಬೇಕಾದಂತೆ ಮಾರ್ಪಾಡುಗೊಳಿಸಿ ಕೃತಿ ರಚನೆ ಮಾಡಿರುತ್ತಾರೆ. ರಾಮಾಯಣವಾಗಲೀ, ಮಹಾಭಾರತವಾಗಲೀ ಬೇರೆ ಬೇರೆ ದೃಷ್ಟಿಯಲ್ಲಿ ನೋಡುವಷ್ಟು ವಸ್ತು ಸಂಗ್ರಹಣೆಯನ್ನು ಒಳಗೊಂಡಿದೆ ಎಂದರೆ ಅದು ಅತಿಶಯೋಕ್ತಿಯಲ್ಲ.

ವಾಲ್ಮೀಕಿ ರಚಿತ ರಾಮಾಯಣ

ರಾಮಾಯಣವನ್ನು ನೋಡುವ ದೃಷ್ಟಿಕೋನವನ್ನು ಬದಲಿಸಿಕೊಂಡಾಗ ಆ ಕೃತಿಯಿಂದ ತಿಳಿದುಕೊಳ್ಳಬೇಕಾದ ಮೌಲ್ಯಗಳು ಹೆಚ್ಚು ಅರ್ಥಬದ್ಧವಾಗಿದೆ ಎಂಬುದು ತಿಳಿಯುತ್ತದೆ. ಈಗಿರುವಲ್ಲಿ ರಾಮಾಯಣ ಮಹಾಕಾವ್ಯದಲ್ಲಿ ಜೀವಂತ ಪಾತ್ರಗಳಾಗಿ ಗುರುತಿಸಿಕೊಂಡಿರುವ ದೈವತ್ವದ ವ್ಯಕ್ತಿಗಳು ಉಳಿದು ಹೋಗಬಹುದಾದ ಸಂದೇಶವನ್ನು ನೀಡಿರುವುದನ್ನು ಈ ಮುಂದಿನಂತೆ ತಿಳಿಸಲಾಗಿದೆ.

ಶ್ರೀರಾಮ : ತಂದೆಯ ಮಾತನ್ನು ಪರಿಪಾಲಿಸುವ ಸಲುವಾಗಿ ತನಗೆ ಒದಗಿ ಬಂದ ರಾಜನ ಸ್ಥಾನವನ್ನು ಬದಿಗೊತ್ತಿ ವನವಾಸಕ್ಕೆ ತೆರಳುವ ಶ್ರೀರಾಮಚಂದ್ರನ ಪಾತ್ರ ಸದಾಕಾಲ ನೆನಪಿನಲ್ಲಿಟ್ಟುಕೊಳ್ಳಬಹುದಾದ ಪಾತ್ರವಾಗಿದೆ. ಆಧುನಿಕತೆಯ ಭರಾಟೆಯಲ್ಲಿ ಬೇಕು ಬೇಡಗಳ ಗೊಂದಲದಲ್ಲಿ ಸಿಲುಕಿರುವ ಇಂದಿನ ಯುವ ಜನತೆ ತಮ್ಮ ತಂದೆ ತಾಯಿಗಳು ನಾನಾ ರೀರಿಯ ತ್ಯಾಗವನ್ನು ಮಾಡಿ ಅವರ ಪಾಲನೆ ಪೋಷಣೆ ಮಾಡಿದ್ದರೂ ಕೂಡ ನಮಗಾಗಿ ಏನು ಆಸ್ತಿ ಮಾಡಿಟ್ಟಿರುವಿರಿ? ನಮಗೇನು ನೀಡಿದ್ದೀರಿ ಎಂದು ಪ್ರಶ್ನಿಸುವಂತಹ ಮಕ್ಕಳಿಗೆ ಶ್ರೀರಾಮನ ವ್ಯಕ್ತಿತ್ವದ ಪರಿಚಯ ಮಾಡಿಕೊಡಲೇಬೇಕಾದ ಅನಿವಾರ್ಯತೆ ಇದೆ.

ಮುಂದುವರೆದು ವನವಾಸವನ್ನು ಮುಗಿಸಿಕೊಂಡು ಬಂದ ನಂತರವೂ ರಾಜ್ಯಭಾರ ಮಾಡುವಾಗ ಗೂಢಾಚಾರರಿಂದ ಸೀತೆಯ ಬಗ್ಗೆ ಅಪವಾದ ಬಂದಾಗ ಜನಾಭಿಪ್ರಾಯ, ಅವರ ಸೇವೆಯೇ ಮುಖ್ಯವೆಂದು ಭಾವಿಸಿದ ಶ್ರೀ ರಾಮ ತಾನು ಇಷ್ಟ ಪಟ್ಟ ಮಡದಿಯನ್ನು ಕಾಡಿಗಟ್ಟುವ ಮೂಲಕ ಜನಸೇವೆ ಜನಾರ್ಧನನ ಸೇವೆ ಎಂಬ ಮಾತನ್ನು ಪರಿಪಾಲಿಸಿದವನಾಗಿ ಕಂಡುಬರುತ್ತಾನೆ. ತಮಗೆ ಅಧಿಕಾರ ಕಲ್ಪಿಸಿ ಜನರಿಗೆ ಏನಾದರೆ ತಮಗೇನೆಂದು ತಮಗಾಗಿಯೇ ಲಾಭ ಮಾಡಿಕೊಳ್ಳುವ ಪ್ರಯತ್ನದಲ್ಲಿ ಇಡೀ ಬದುಕನ್ನು ಮೀಸಲಾಗಿಡುವ ಜನಪ್ರತಿನಿಧಿಗಳಿಗೆ ನಿಜಕ್ಕೂ ಶ್ರೀರಾಮನ ವ್ಯಕ್ತಿತ್ವವನ್ನು ಅರ್ಥಮಾಡಿಕೊಂಡಿದ್ದಲ್ಲಿ ಮಾದರಿ ಜನಪ್ರತಿನಿಧಿಗಳು ನಿಲ್ಲಬಲ್ಲರು.

ಬದುಕಿನಲ್ಲಿ ಏನೇ ಬಂದರೂ ಎಲ್ಲವನ್ನೂ ಸಮಾನವಾಗಿ ಸ್ವೀಕರಿಸುವ ಈ ತರಹದ ವ್ಯಕ್ತಿತ್ವದಿಂದಲೇ ಮರ್ಯಾದಾ ಪುರುಷನಂತೆ, ಇಂದಿಗೂ ಜನಮಾನಸದಲ್ಲಿ ಅಮರನಾಗಿ ಶ್ರೀರಾಮ ನೆಲೆ ನಿಂತಿದ್ದಾನೆ. ಆದರ್ಶ ಗುಣಗಳ ಪರಿಪಾಲಕನಾಗಿ ಗೋಚರವಾಗುವ ಶ್ರೀರಾಮ ಎಲ್ಲರಿಗೂ ಎಲ್ಲ ಕಾಲದಲ್ಲಿಯೂ ಮಾದರಿ ವ್ಯಕ್ತಿಯಾಗಿ ನಿಲ್ಲುತ್ತಾನೆ. ಶ್ರೀ ರಾಮನಂತಹ ಗಂಡ ತಮಗೆ ಸಿಗಬೇಕೆಂದು ಮಹಿಳೆಯರು, ರಾಮ ರಾಜ್ಯದ ಕನಸು ನನಸಾಗಬೇಕೆಂದು ಬಯಸುವ ಪ್ರಜೆಗಳು ಶ್ರೀರಾಮನ ಅಸ್ತಿತ್ವವನ್ನು ಸದಾಕಾಲ ಚಾಲ್ತಿಯಲ್ಲಿಡಲು ಕಾರಣೀಭೂತರಾಗಿದ್ದಾರೆ.

ಸೀತೆ: ಆದರ್ಶ ಪತ್ನಿ ಹೇಗಿರಬೇಕೆಂಬುದಕ್ಕೆ ಜೀವಂತ ನಿದರ್ಶನವಾಗಿನಿಲ್ಲಬಲ್ಲ ಪಾತ್ರ ಎಂದರೆ ಅದು ಸೀತಾದೇವಿಯ ಪಾತ್ರ. ಬದುಕಿನುದ್ದಕ್ಕೂ ನೋವು, ಸಂಕಟ, ಅಪಮಾನಗಳನ್ನೇ ಎದುರಿಸಿದರೂ ಎಲ್ಲವನ್ನೂ ನುಂಗಿಕೊಂಡು ಪತಿಯ ನೆರಳಿನಂತೆ ಸಾಗುವ ಆದರ್ಶ ನಾರಿಯಾಗಿ ಸೀತೆ ಕಂಡುಬರುತ್ತಾಳೆ.

ಇಡೀ ರಾಮಾಯಣವನ್ನು ಅವಲೋಕಿಸಿದಾಗ ಎಷ್ಟೋ ಸಂದರ್ಭಗಳಲ್ಲಿ ಪ್ರಶ್ನೆ ಕೇಳುವ ಪರಿಸ್ಥಿತಿ ಎದುರಾದರೂ ಪ್ರಶ್ನಿಸದೇ ಪಾಲಿಗೆ ಬಂದುದ್ದನ್ನು ಅಷ್ಟೇ ಸಾವಧಾನದಿಂದ ಸ್ವೀಕರಿಸುತ್ತಾ ಇಡೀ ರಾಜ್ಯದ ಜನರಿಗೆ ಆದರ್ಶಪುರುಷನೆಂದು ಕರೆಸಿಕೊಂಡಿದ್ದ ಶ್ರೀರಾಮನಿಂದಲೇ ನೋವುಂಟಾದರೂ ಸಹಿಸಿಕೊಂಡು ಸಾಗುವ ಸೀತಾದೇವಿ ನಿಜವಾದ ಅರ್ಥದಲ್ಲಿ ಸಹನೆಯ ಸಾಕಾರಮೂರ್ತಿಯಾಗಿ ತಾಳ್ಮೆಯಿಂದ ಇದ್ದಲ್ಲಿ ಎಂತಹ ಸಂದರ್ಭ ಎದುರಾದರೂ ಅದನ್ನು ಜಯಿಸಿ ಬಾಳಬಹುದೆಂಬುದಕ್ಕೆ ಮಾದರಿಯಾಗಿ ನಿಲ್ಲಬಲ್ಲಳು.

ಜನಕ ಮಹಾರಾಜನ ಮಗಳಾಗಿ ದಶರಥ ಮಹಾರಾಜನ ಸೊಸೆಯಾಗಿ ಶ್ರೀರಾಮಚಂದ್ರನ ಆದರ್ಶಪತ್ನಿಯಾದರೂ ಕಾಡುಮೇಡು ಅಲೆಯುವ ಕಾಟ ತಪ್ಪಲಿಲ್ಲ, ಮಹಾರಾಣಿಯಾಗಿ ಮೆರೆಯಬೇಕಾದವಳು ತನ್ನ ಗಂಡನಿಗಾಗಿ ಸಕಲವನ್ನು ತೊರೆದು ಅವರಿಗಿಲ್ಲದ ಸುಖ ತನಗೂ ಬೇಡವೆಂದು ನಿರ್ಧರಿಸಿ ಶ್ರೀರಾಮನೊಂದಿಗೆ ವನವಾಸಕ್ಕೆ ತೆರಳುವ ಸೀತೆಯ ಗಟ್ಟಿತನಕ್ಕೆ ಯಾರಾದರೂ ಸರಿಯೇ ತಲೆಬಾಗಲೇಬೇಕು. ಪ್ರಸ್ತುತ ಸನ್ನಿವೇಶಕ್ಕೆ ಸೀತಾದೇವಿಯಲ್ಲಿದ್ದ ಸಹನೆ, ಸ್ವಾಮಿನಿಷ್ಠೆ, ತ್ಯಾಗ, ಸ್ಥಿತಪ್ರಜ್ಞತೆಯ ಗುಣಗಳು ಅನುಕರಣೀಯವಾದವುಗಳಲ್ಲವೇ?

ಲಕ್ಷ್ಮಣ: ಇದ್ದರೆ ಲಕ್ಷ್ಮಣನಂತೆ ಇರುವ ತಮ್ಮ ಇರಬೇಕು ಎಂದು ಪ್ರತಿಯೊಬ್ಬರು ಪರಿತಪಿಸುವಂತೆ ಬಾಳಿಬದುಕಿದ ಪಾತ್ರವಾಗಿ ಲಕ್ಷ್ಮಣನ ಪಾತ್ರ ಚಿತ್ರಿತವಾಗಿದೆ. ಅಣ್ಣನ ಆಜ್ಞೆಯನ್ನು ಪರಿಪಾಲಿಸುವವನಾಗಿ, ಅಣ್ಣ–ಅತ್ತಿಗೆ ವನವಾಸಕ್ಕೆಂದು ಹೊರಟು ನಿಂತಾಗ ಅಣ್ಣನಿಲ್ಲದ ರಾಜ್ಯದಲ್ಲಿ ತಾನು ಅರೆಕ್ಷಣವೂ ಉಳಿಯಲಾರೆನೆಂದು ಅಣ್ಣನೊಡನೆ ತಾನು ವನವಾಸಕ್ಕೆ ತೆರಳುವ ಅಚಲ ನಿರ್ಧಾರವನ್ನು ಲಕ್ಷ್ಮಣನ ಹೊರತಾಗಿ ಮತ್ಯಾರು ಮಾಡಲು ಅಸಾಧ್ಯ.

ಪ್ರಸ್ತುತ ದಿನಗಳಲ್ಲಿ ಆಸ್ತಿಗಾಗಿ ಬಡಿದಾಡುವ, ಒಂದೇ ಮನೆಯಲ್ಲಿದ್ದರೂ ತಮ್ಮಿಬ್ಬರ ಸಂಬಂಧ ಬೇರೆ ಬೇರೆ ಎಂಬಂತೆ ವರ್ತಿಸುವ ಅಣ್ಣ ತಮ್ಮಂದಿರಿಗೆ ಲಕ್ಷ್ಮಣನ ಜೀವನ ಪಾರದರ್ಶಕವಾಗುವಂತಿದೆ. ಸಂಯಮ, ತ್ಯಾಗ, ನಿಸ್ವಾರ್ಥತತೆಯ ಮೂರ್ತಿಯಂತೆ ಕಂಗೊಳಿಸುವ ಲಕ್ಷ್ಮಣ ನಿಜಕ್ಕೂ ಎಲ್ಲರಿಗೂ ಅನುಕರಣೀಯವಾದವನು. ಅಂದರೆ ಹುಟ್ಟುತ್ತಾ ಅಣ್ಣ ತಮ್ಮಂದಿರು ಬೆಳೆಯುತ್ತಾ ದಾಯಾದಿಗಳು ಎಂಬ ಗಾದೆ ಮಾತಿಗೆ ಅಪವಾದವೆಂಬಂತೆ ಬದುಕಿ ಬಾಳಿ ಆದರ್ಶದ ದೀಪವಾದವರು ರಾಮ–ಲಕ್ಷ್ಮಣರು.

ಹನುಮಂತ: ಆತ್ಮವಿಶ್ವಾಸದೊಂದಿಗೆ ಭರವಸೆಯನ್ನು ಹುಟ್ಟಿಸಬಲ್ಲ, ತನ್ನಲ್ಲಿದ್ದ ಅಪಾರ ಶಕ್ತಿಯನ್ನು ತಾನೇ ಗುರುತಿಸದೇ ಇದ್ದಂತಿದ್ದ ಹನುಮ ಮುಂದೆ ಇಡೀ ರಾಮಾಯಣದ ತುಂಬಾ ತನ್ನತನವನ್ನು ಉಳಿಸಿಕೊಳ್ಳುವ ಪಾತ್ರವಾಗಿ ಚಿತ್ರಿತವಾಗಿದ್ದಾನೆ. ಶ್ರೀರಾಮಚಂದ್ರನ ನಿಷ್ಠೆಯ ಭಂಟನಂತೆ ಪ್ರಭುವಿನ ಪರಿಪಾಲಕನಂತೆ ರಾವಣನ ಗರ್ವಭಂಗ ಮಾಡಿದ ಹೆಗ್ಗಳಿಕೆ ಹನುಮಂತನದು.

ಹನುಮಂತನಂತೆ ನಮ್ಮಲ್ಲಿಯೂ ಅಪಾರವಾದ ಶಕ್ತಿ ಅಡಕವಾಗಿದೆ. ಆದರೆ ಇಲ್ಲಸಲ್ಲದ ಸೋಮಾರಿತನ ಆ ಶಕ್ತಿಯನ್ನು ಮರೆಮಾಡಿದೆ. ಪ್ರತಿಯೊಬ್ಬರಲ್ಲೂ ಅಗಾಧವಾದ ಶಕ್ತಿ, ಸಾಮರ್ಥ್ಯ ಅಡಕವಾಗಿರುತ್ತದೆ, ಅದನ್ನು ತೋರ್ಪಡಿಸುವ ಸಂದರ್ಭ, ಸನ್ನಿವೇಶಗಳನ್ನು ನಾವೇ ಸೃಷ್ಟಿಸಿಕೊಳ್ಳಬೇಕು ಎಂಬುದಕ್ಕೆ ಸ್ಪಷ್ಟ ನಿದರ್ಶನವಾಗಿ ಹನುಮಂತ ಕಾಣಿಸಿಕೊಳ್ಳಬಲ್ಲ, ಕಾಡಬಲ್ಲ,ಆ ಶಕ್ತಿಯನ್ನು ತುಂಬಬಲ್ಲವನಾಗಿರುತ್ತಾನೆ.

ರಾವಣ : ನೂರು ಒಳ್ಳೆಯದು ಮಾಡಿ ಒಂದು ಕೆಟ್ಟದು ನಡೆದು ಹೋದರೆ ಜನರ ಕೆಂಗಣ್ಣಿಗೆ ಗುರಿಯಾಗುವುದು ಒಂದರ ತಪ್ಪು. ಈ ಬಗೆಯಲ್ಲಿ ಅಪಾರವಾದ ಪ್ರತಿಭೆಗಳು ನಮ್ಮಲ್ಲಿ ಅಡಕವಾಗಿ ದ್ದಾಗಲೂ ಅದರತ್ತ ಗಮನ ಹರಿಸದೇ ಬೇಡದ ವಿಚಾರಗಳ ಕಡೆಗೆ ಗಮನವಿತ್ತಾಗ ಒದಗಬಹುದಾದ ದುರಂತವನ್ನು ಚಿತ್ರಿಸುವ ಪಾತ್ರ ರಾವಣನದು.

ಅಪಾರ ಶಕ್ತಿ ತನ್ನಲ್ಲಿದ್ದರೂ, ಉತ್ತಮಿಕೆಯ ಗುಣಗಳು ತನಲ್ಲಿ ಗೋಚರಿಸಿದರೂ ಅವುಗಳನ್ನು ಕಡೆಗಣಿಸಿ ತನ್ನದಲ್ಲದ ವಿಚಾರದ ಕಡೆಗೆ ಗಮನ ನೀಡಿ ಅದರಲ್ಲಿ ವಿಷಯ ವಾಸ್ತಕನಾಗಿ ತನ್ನ ಸುಂದರವಾದ ಜೀವನವನ್ನು ಬಲಿಕೊಟ್ಟ ರಾವಣನ ಪಾತ್ರವನ್ನು ಅರಿಯುವ ಮೂಲಕ ನಮ್ಮದಲ್ಲದ ವಸ್ತು ಅಥವಾ ವ್ಯಕ್ತಿಗಳ ಕಡೆಗೆ ದೃಷ್ಟಿ ಹಾಯಿಸಬಾರದೆಂಬ ಸಾರ್ವಕಾಲಿಕ ಸತ್ಯವನ್ನು ಪ್ರಚುರಪಡಿಸಿದಂತಿದೆ.

ನಮ್ಮಲ್ಲಿರುವ ಅಪಾರವಾದ ಪ್ರತಿಭೆಯನ್ನು ಸದ್ಬಳಕೆ ಮಾಡಿಕೊಂಡಾಗ ಅದರಿಂದ ದೊರೆಯುವ ಪ್ರಯೋಜನಗಳು ಅಪಾರವಾ ದುದು. ಅದೇ ಪ್ರತಿಬಯನ್ನು ದುರುಪಯೋಗ ಪಡಿಸಿಕೊಂಡಾಗ ಆಗುವ ಅನಾಹುತಗಳು, ಒದಗಲಿರುವ ತೊಂದರೆಗಳು, ಪರಿತಪಿಸುವ ಸಂಕಟಗಳ ಪ್ರತಿರೂಪವಾಗಿ ರಾವಣ ಗೋಚರಿಸಬಲ್ಲನು.

ಹೀಗೆ ರಾಮಾಯಣದಲ್ಲಿ ಬರುವ ಪ್ರತಿಯೊಂದು ಪಾತ್ರದಿಂದಲೂ ಒಂದಲ್ಲ ಒಂದು ಆದರ್ಶ ವಿಚಾರಗಳನ್ನು ಕಲಿತುಕೊಳ್ಳುವ, ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಆ ಮೂಲಕ ಸರಿ ತಪ್ಪುಗಳ ವಿವೇಚನೆ ಮಾಡಿ ಸರಿಯಾದ ಮಾರ್ಗದಲ್ಲಿ ಸಾಗಬಲ್ಲಂತಹ ಅನೇಕ ಮೌಲ್ಯಗಳನ್ನು ತಿಳಿಸಬಲ್ಲ ವಿಚಾರಗಳು ಸಾಕಷ್ಟಿವೆ. ಅದನ್ನು ಅರಿಯುವ ಪ್ರಯತ್ನ ಮಾಡಬೇಕು. ಆದರೆ ಕೆಲವರು ಮೂಲ ಕೃತಿಯನ್ನು ಓದದೆ ಅವರಿವರು ಹೇಳಿದ್ದನ್ನೇ ಕೇಳಿ ಅಥವಾ ಕೆಲವು ಕವಿಗಳು ಬದಲಾವಣೆ ಮಾಡಿಕೊಂಡು ಬರೆದಿರುವುದನ್ನೇ ಓದಿ, ಮತ್ತೆ ಕೆಲವರು ಸಿನಿಮಾ ಅಥವಾ ಇನ್ನಿತರ ಧಾರಾವಾಹಿಗಳಲ್ಲಿ ಮಾರ್ಪಾಡುಗೊಳಿಸಿರುವುದನ್ನೇ ಸತ್ಯವೆಂದು ಭ್ರಮಿಸಿ ಇಲ್ಲಸಲದ ಆರೋಪಗಳನ್ನು ಮಾಡುತ್ತಿದ್ದಾರೆ.

ನನಗೆ ರಾಮಾಯಣ ಪ್ರಸ್ತುತ ಕಾಲಕ್ಕೂ ನಮ್ಮ ಮಕ್ಕಳಿಗೆ ಓದಿ ತಿಳಿಸಲೇಬೇಕಾದ ಉತ್ತಮ ಕೃತಿ ಎಂದೆನಿಸುತ್ತದೆ. ಕಾಮಾಲೆ ಕಣ್ಣುಳ್ಳವರಿಗೆ ಕಾಣುವುದೆಲ್ಲ ಹಳದಿ ಎಂಬಂತೆ ಎಲ್ಲದರಲ್ಲಿಯೂ ತಪ್ಪನ್ನು ಹುಡುಕಿ ಕೆದಕುವ, ಕೆಲವೊಮ್ಮೆ ತಮ್ಮ ಸುಳ್ಳುಗಳನ್ನೇ ಸಾವಿರಾರು ಬಾರಿ ಸತ್ಯ, ಸತ್ಯ ಎಂದು ಬಾಯಿ ಬಡಿಯುವಂತಹ ಮನೋಭಾವ ಉಳ್ಳವರಿಗೆ, ತಮ್ಮ ಅಸ್ತಿತ್ವವನ್ನು ಮರೆತು ಬೇರೆಯವರ ಬದುಕಿನಲ್ಲಿ ತಮ್ಮ ಅಸ್ತಿತ್ವವನ್ನು ಗುರುತಿಸಿ ಕೊಂಡು ಬೇಳೆ ಬೇಯಿಸಿಕೊಳ್ಳ ಬಯಸುವವರಿಗೆ ಏನೇ ಹೇಳಿದರೂ ವ್ಯರ್ಥವೇ!

ಕೆಲವೊಮ್ಮೆ ಮಾತಿಗಿಂತ ಮೌನ, ಕೋಪಕ್ಕಿಂತ ಸಹನೆ ಅಪಾರ ಪರಿಣಾಮ ಬೀರಬಲ್ಲದು. ಇಂತಹ ಆದರ್ಶಯುತ ಉದಾತ್ತ ಮೌಲ್ಯಗಳನ್ನು ಬಿತ್ತುವ ಬೆಳೆಸುವ ಶಕ್ತಿ 'ರಾಮಾಯಣ', 'ಮಹಾಭಾರತ'ಕ್ಕಿದೆ. ಆದರ್ಶಜೀವನದ ಅನುಭವದ ವಿಚಾರಗಳನ್ನು ಮುಂದಿನ ಜನಾಂಗಕ್ಕೂ ನೀಡಬಲ್ಲ, ಅಪಾರವಾದ ಮೌಲ್ಯಗಳನ್ನು ಒದಗಿಸಿ ಕೊಡಬಲ್ಲ ಕೆಲಸವನ್ನು ರಾಮಾಯಣ ಮಾಡಬಲ್ಲದು. ನೋಡುವ ದೃಷ್ಟಿಕೋನ, ಅರ್ಥಮಾಡಿಕೊಳ್ಳುವ ಮನೋಭಾವ ಬದಲಿಸಿಕೊಂಡರೆ ಪ್ರತಿಯೊಂದರಲ್ಲೂ, ಪ್ರತಿಯೊಬ್ಬರಲ್ಲಿಯೂ ಸಕಾರಾತ್ಮಕತೆಯನ್ನು ಪಡೆಯಲು ಸಾಧ್ಯವಿದೆ.

ರಾಜ್ಯ ಬಿಜೆಪಿ ನಾಯಕರಿಗೆ ಬಿ.ಎಲ್.ಸಂತೋಷ್ ನಾಯಕತ್ವ ಪಾಠ

ಬೆಂಗಳೂರು, ಸೆ.19: ಬಿಜೆಪಿ ಚಿಂತನಾ ಸಭೆಯ ಸಮಾರೋಪ ಭಾಷಣದಲ್ಲಿ ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ರಾಜ್ಯ ಬಿಜೆಪಿ ನಾಯಕರಿಗೆ ಶಿಸ್ತಿನ ಪಾಠ ಮಾಡಿದ್ದಾರೆ. ಹಾಗೇ ನಾಯಕತ್ವ ಗುಣದ ಬಗ್ಗೆಯೂ ಹೇಳಿದ್ದಾರೆ. ಪಕ್ಷದಲ್ಲಿ ಆಂತರಿಕ ಸ್ಪರ್ಧೆ ಇರಬೇಕು. ಅದು ಅಶಿಸ್ತಿನ ಹಂತಕ್ಕೆ ಹೋಗಬಾರದು. ಹಿಂದೆ ಎಲ್ಲಾ ಹಂತದಲ್ಲೂ ತಪ್ಪಾಗಿದೆ ಹೌದು. ಅದನ್ನು ಸರಿಪಡಿಸಿಕೊಂಡು ಹೋಗಬೇಕು. ಆರೋಪ ಬೇಡ. ಪಕ್ಷದಲ್ಲಿ ನಾಯಕರು ಮಾತನಾಡುವಾಗ ಪರಸ್ಪರ ನೇರವಾಗಿಯೇ ಮಾತಾಡಿ. ಮಧ್ಯವರ್ತಿಗಳನ್ನು ಇಟ್ಟುಕೊಂಡು ಮಾತನಾಡಬೇಕಿಲ್ಲ ಎಂದು ಪಕ್ಷದ ನಾಯಕರಿಗೆ ಶಿಸ್ತಿನ ಪಾಠವನ್ನೂ ಹೇಳಿದರು.

ಎಲ್ಲಾ ಸರ್ವೆಗಳಲ್ಲೂ ಕಾಂಗ್ರೆಸ್‌ಗೆ ಕಡಿಮೆ ಸ್ಥಾನಗಳು ಬಂದಿವೆ. ನಾವು ಯಾವುದೇ ಹೋರಾಟ ಕೈಗೆತ್ತಿಕೊಂಡರೂ ಕಾಂಗ್ರೆಸ್ ಮತ್ತೊಂದು ವಿಷಯ ಹುಡುಕಿ ವಿಷಯಾಂತರ ಮಾಡಿಬಿಡುತ್ತದೆ. ಧರ್ಮಸ್ಥಳ ವಿಚಾರದಲ್ಲಿ ಏನೂ ಇಲ್ಲ



ಅಂತಾದಾಗ ಚಾಮುಂಡಿ ಬೆಟ್ಟ ವಿಚಾರ ತಂದರು. ನಾಯಕರು ಕಾರ್ಯಕರ್ತರ ಕೈಗೆ ಸಿಕ್ಕುವಂತಿರಬೇಕು. ಪಕ್ಷದಲ್ಲಿ ಒಟ್ಟಾಗಿ ಹೋಗುವ ಕೆಲಸ ಆಗಬೇಕು. ಸ್ಪಷ್ಟತೆ ಇಲ್ಲದೇ ಯಾವುದೇ ಅನಗತ್ಯ ಹೇಳಿಕೆಗಳನ್ನು ನೀಡಬೇಡಿ ಎಂದು ಕಿವಿಮಾತು ಹೇಳಿದರು.

ಕಾರ್ಯಕರ್ತರ ಅಭಿಲಾಷೆ ಅರಿತು ಮುಂಚೂಣಿ ನಾಯಕರು ನಡೆದುಕೊಳ್ಳಬೇಕು. ನಾಯಕರ ಮಧ್ಯೆ ಒಗ್ಗಟ್ಟು, ಸಮನ್ವಯ ಕೊರತೆ ಇದೆ ಎಂದು ಕಾರ್ಯಕರ್ತರಿಗೆ ಅನ್ನಿಸಿದರೆ ಅದು ಇದೆ ಅಂತಲೇ ಅರ್ಥ, ಅದನ್ನು ಸರಿಪಡಿಸಿಕೊಳ್ಳಿ. ರಾಜ್ಯ ಸರ್ಕಾರ ಜನಪ್ರಿಯತೆ ಕಳೆದುಕೊಂಡಿರುವ ಸದವಕಾಶ ಬಳಸಿಕೊಳ್ಳಿ. ತಳಮಟ್ಟದಿಂದ ಸರ್ಕಾರದ ವಿರುದ್ಧ ಜನಾಭಿಪ್ರಾಯ ರೂಪಿಸಿ ಮುಂಬರುವ ಸ್ಥಳೀಯ ಸಂಸ್ಥೆ, ವಿಧಾನಸಭೆ ಚುನಾವಣೆಗೆ ವ್ಯವಸ್ಥಿತ ತಯಾರಿ ಇರಲಿ ಎಂದು ಸಲಹೆ ನೀಡಿದರು.

ಕಾಂಗ್ರೆಸ್ ತಪ್ಪಿನಿಂದ ಗೆಲ್ಲುವಂತಾಗಬಾರದು: ಮೊದಲು ನಿಮ್ಮನ್ನು ನೀವು ಆತ್ಮಾವಲೋಕನ ಮಾಡಿಕೊಳ್ಳಿ. ನಂತರ ಬೇರೆಯವರಿಗೆ ಸಲಹೆ ಕೊಡುವ ಕೆಲಸ ಮಾಡಿ. 6 ತಿಂಗಳಿನಿಂದ ನೀವೇನು ಮಾತನಾಡಿದ್ದೀರಿ ಎಂಬುದನ್ನು ರಿವ್ಯೂ ಮಾಡಿಕೊಳ್ಳಿ. ಆಗ ನೀವೇನು ತಪ್ಪು ಮಾಡಿದ್ದೀರಿ ಎಂದು ನಿಮಗೆ ಗೊತ್ತಾಗುತ್ತದೆ. ಈಗ ರಾಜ್ಯದಲ್ಲಿ ಸರ್ವೆ ಮಾಡಿದರೆ ಕಾಂಗ್ರೆಸ್ 60 ಸ್ಥಾನದಲ್ಲಿ ಬರಬಹುದು. ಹಾಗಂತ ಗೆದ್ದುಬಿಡುತ್ತೀರಿ ಎಂದಲ್ಲ, ಕಾಂಗ್ರೆಸ್ ತಪ್ಪಿನಿಂದ ಗೆಲ್ಲುವಂತಾಗಬಾರದು. ಗೆಲುವಿಗೆ ನಿಮ್ಮ ಸಾಮರ್ಥ್ಯ ಏನು ಎಂಬುದು ಮುಖ್ಯ. ಚಿಂತನಾ ಸಭೆಯನ್ನು ಅಶೋಕ್ ಮತ್ತು ವಿಜಯೇಂದ್ರ ಯಶಸ್ವಿಯಾಗಿ ನಡೆಸಿದ್ದಾರೆ. ಇದನ್ನು ಮುಂದುವರಿಸಿಕೊಂಡು ಹೋಗುವಂತೆ ಇಬ್ಬರಿಗೂ ಸಲಹೆ ನೀಡುತ್ತೇನೆ ಎಂದರು.

ಬಿಜೆಪಿ ಶಾಸಕ ಶ್ರೀವತ್ಸ, ಪರಿಷತ್ ವಿಪಕ್ಷ ನಾಯಕ ಛಲವಾದಿ ವಿರುದ್ಧ ಎಫ್‌ಐಆರ್

ಬೆಂಗಳೂರು: ಕುರುಬರ ಎಸ್ಟಿ ಮೀಸಲಾತಿಯ ಬಗ್ಗೆ ಮಾತನಾಡಿದ್ದ ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಮತ್ತು ಮೈಸೂರಿನ ಕೆ.ಆರ್ ಕ್ಷೇತ್ರದ ಶಾಸಕ ಶ್ರೀವತ್ಸ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಬೆಂಗಳೂರಿನ ವಿಧಾನಸೌಧ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ ಪರಿಶಿಷ್ಟಪಂಗಡ ಮತ್ತು ವಾಲ್ಮೀಕಿ ಸಮುದಾಯದವರು ಕುರುಬ ಸಮುದಾಯದ ಬಗ್ಗೆ ದಂಗೆ ಏಳಬೇಕು ಎಂದು ಎಂಎಲ್‌ಸಿ ಹಾಗೂ ಶಾಸಕರು ಹೇಳಿಕೆ ಕೊಟ್ಟಿದ್ದರು. ಈ ಸಂಬಂಧ ಕುರುಬ ಸಮುದಾಯದ ಮುಖಂಡ ಸಿದ್ದಣ್ಣ ತೇಜಿ, ಡಿಜಿ & ಐಜಿಪಿಗೆ ದೂರು ನೀಡಿದ್ದರು.

ಅ.1ರಿಂದ 9 ಮುಜರಾಯಿ ದೇಗುಲಗಳ ಸೇವಾಶುಲ್ಕ ಏರಿಕೆ

ಬೆಂಗಳೂರು: ಕರ್ನಾಟಕದ ಮುಜರಾಯಿ ಇಲಾಖೆ ವ್ಯಾಪ್ತಿಯ ಕೆಲ ದೇವಾಲಯಗಳ ಸೇವಾಶುಲ್ಕ ಸದ್ದಿಲ್ಲದೇ ಏರಿಕೆಯಾಗಿದ್ದು, ಇನ್ಮೇಲೆ ದೇವರ ಸೇವೆ ಭಕ್ತಾದಿಗಳ ಜೇಬು ಸುಡಲಿದೆ.

ಬೆಂಗಳೂರು ನಗರ: ಯೋಗ ನರಸಿಂಹ ಸ್ವಾಮಿ ದೇವಾಲಯ, ಮಲ್ಲೇಶ್ವರಂ, ನಂದಿ ತೀರ್ಥ ದೇವಾಲಯ, ಮಲ್ಲೇಶ್ವರಂ, ಮಹಾ ಗಣಪತಿ ದೇವಾಲಯ, ಮಲ್ಲೇಶ್ವರಂ.

ಚಿಕ್ಕಬಳ್ಳಾಪುರ: ವಿಧುರಾಶ್ವಥ ನಾರಾಯಣ ಸ್ವಾಮಿ ದೇವಾಲಯ, ವೆಂಕಟರಮಣ ದೇವಾಲಯ, ತಲಕಾಯ ಬೆಟ್ಟ.


ದಕ್ಷಿಣ ಕನ್ನಡ: ಮಹಾಲಿಂಗೇಶ್ವರ ದೇವಾಲಯ, ಪುತ್ತೂರು, ಕುಕ್ಕೆ ಸುಬ್ರಹ್ಮಣ್ಯ ದೇವಾಲಯ, ಸೌತಡ್ಕ ಮಹಾಗಣಪತಿ ದೇವಾಲಯ, ಸೂರ್ಯನಾರಾಯಣ ಸ್ವಾಮಿ ದೇವಾಲಯ, ಮರೋಳಿ.

ಇನ್ನೂ ನಾಗಾರಾಧನೆ, ದೈವರಾಧನೆಗೆ ಹೆಸರಾದ ಕುಕ್ಕೆ ಸುಬ್ರಹ್ಮಣ್ಯದಲ್ಲಿ 2010ರಲ್ಲಿ ಸೇವಾಶುಲ್ಕ ಏರಿಕೆ ಮಾಡಲಾಗಿತ್ತು. 15 ವರ್ಷಗಳ ನಂತರ ಇದೀಗ ಸೇವಾಶುಲ್ಕ ಏರಿಕೆ ಮಾಡಲಾಗಿದೆ. ಕುಕ್ಕೆಯಲ್ಲಿ ಆಶ್ಲೇಷ ಪೂಜೆ ಸೇವೆಗೆ ಈ ಹಿಂದೆ ಇದ್ದ ದರ 400 ರೂಪಾಯಿ, ಪರಿಷ್ಕೃತ ದರ 500 ರೂ.ಗೆ ಏರಿಕೆಯಾಗಿದೆ. ನಾಗಪ್ರತಿಷ್ಠೆಗೆ ಈ ಹಿಂದೆ ಇದ್ದ ದರ 400 ರೂಪಾಯಿ. ಆದರೆ ಧಾರ್ಮಿಕ ದತ್ತಿ ಇಲಾಖೆ ಪರಿಷ್ಕೃತ ದರ 500 ರೂಪಾಯಿ ಹೆಚ್ಚಿಸಿದೆ. ಹೀಗೆ ಉಳಿದ ಸೇವೆಗಳಲ್ಲೂ ಭಾರೀ ಹೆಚ್ಚಳ ಮಾಡಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮರದ ಅಂಬಾರಿ ಹೊತ್ತು ನಿರಾಳವಾಗಿ ಗುರಿ ತಲುಪಿದ ಸುಗ್ರೀವ

ಮಳೆಯ ನಡುವೆಯೇ ನಿಂತು ದಸರಾ ಗಜಪಡೆ ಕಣ್ತುಂಬಿಕೊಂಡ ಜನ



ಮೈಸೂರು ದಸರಾ ಜಂಬೂಸವಾರಿ ಮೆರವಣಿಗೆಗೆ ಆಗಮಿಸಿರುವ ಗಜಪಡೆಯ ಸದಸ್ಯ 'ಸುಗ್ರೀವ'ನಿಗೆ ಮೊದಲ ಬಾರಿಗೆ ಶುಕ್ರವಾರ 'ಮರದ ಅಂಬಾರಿ' ಸಹಿತ ಭಾರ ಹೊರಿಸಿ ತಾಲೀಮು ನಡೆಸಲಾಯಿತು.

ಮೈಸೂರು, ಸೆ.19(ಎಸ್‌ಬಿಡಿ)– ದಸರಾ ಗಜಪಡೆಯ 'ಸುಗ್ರೀವ' ಮೊದಲ ಬಾರಿ 'ಮರದ ಅಂಬಾರಿ' ಹೊತ್ತು ನಿರಾತಂಕವಾಗಿ ಗುರಿ ತಲುಪಿದ.

ಮೈಸೂರು ದಸರಾ ಮಹೋತ್ಸವದ ಜಂಬೂಸವಾರಿ ಮೆರವಣಿಗೆಯಲ್ಲಿ ಪಾಲ್ಗೊಳ್ಳಲು ಮೂರನೇ ಬಾರಿ ಆಗಮಿಸಿರುವ 43 ವರ್ಷದ 'ಸುಗ್ರೀವ'ನಿಗೆ 280 ಕೆಜಿ 'ಮರದ ಅಂಬಾರಿ' ಸೇರಿದಂತೆ ಸುಮಾರು 600 ಕೆಜಿ ಭಾರ ಹೊರಿಸಿ ಶುಕ್ರವಾರ ತಾಲೀಮು ನಡೆಸಲಾಯಿತು. ಮೊದಲ ಬಾರಿಗೆ ಇಷ್ಟು ಭಾರವನ್ನು ಬೆನ್ನಿಗೇರಿಸಿದರೂ ಕೊಂಚವೂ ವಿಚಲಿತಗೊಳ್ಳದೆ ಅನುಭವಿಯಂತೆ ಗಾಂಭೀರ್ಯದ ನಡಿಗೆ ಮೂಲಕ ತಾಲೀಮು ಪೂರ್ಣಗೊಳಿಸಿ, ತನ್ನ ಮೇಲಿನ ಭರವಸೆಯನ್ನು ಮತ್ತಷ್ಟು ಗಟ್ಟಿಗೊಳಿಸಿಕೊಂಡ.

ರಾಜವಂಶಸ್ಥರ ನಿವಾಸದ ಬಳಿ ಅಂಬಾರಿ ಕಟ್ಟುವ ಸ್ಟ್ಯಾಂಡ್‌ನಲ್ಲಿ 'ಸುಗ್ರೀವ'ನನ್ನು ನಿಲ್ಲಿಸಿ, ಸಂಜೆ 4.30ರ ಹೊತ್ತಿಗೆ ಮರದ ಅಂಬಾರಿಯನ್ನು ಕಟ್ಟಲಾಯಿತು. ನಂತರ ಕುಮ್ಕಿ ಆನೆಗಳಾದ ಕಾವೇರಿ ಹಾಗೂ ಹೇಮಾವತಿಯೊಂದಿಗೆ ನಡಿಗೆ ಆರಂಭಿಸಿದ. ಅಭಿಮನ್ಯು, ಮಹೇಂದ್ರ, ಸುಗ್ರೀವ, ಗೋಪಿ, ಭೀಮ, ಶ್ರೀಕಂಠ, ರೂಪ, ಧನಂಜಯ, ಲಕ್ಷ್ಮೀ, ಪ್ರಶಾಂತ, ಕಂಜನ್ ಹಾಗೂ ಏಕಲವ್ಯ ಶಿಸ್ತುಬದ್ಧವಾಗಿ ಹಿಂಬಾಲಿಸಿದರು.

> ಅಭಿಮನ್ಯು, ಮಹೇಂದ್ರನ ನಂತರ ಸುಗ್ರೀವನಿಗೆ ಮರದ ಅಂಬಾರಿ ಜೊತೆ ಭಾರ ಹೊರಿಸಿ, ತಾಲೀಮು ನಡೆಸಲಾಗಿದೆ. ಸುಗ್ರೀವನಿಗೆ ಮೊದಲ ಬಾರಿ ಮರದ ಅಂಬಾರಿ ಕಟ್ಟಿರುವುದರಿಂದ ನೂರೈವತ್ತು ಕೆಜಿ ಭಾರ ಕಡಿಮೆ ಹಾಕಲಾಗಿದೆ. ಇನ್ನು ಧನಂಜಯ ಹಾಗೂ ಪ್ರಶಾಂತನಿಗೆ ಈ ಅಂತಿಮ ಹಂತದ ತಾಲೀಮು ನಡೆಸಲಾಗುವುದು. ಭವಿಷ್ಯದ ಅಂಬಾರಿ ಆನೆಗಳೆಂದು ಭಾವಿಸಿರುವ ಇವೆಲ್ಲವೂ ಉತ್ತಮ ರೀತಿಯಲ್ಲಿ ಸ್ಪಂದಿಸುತ್ತಿವೆ.
> –ಡಾ.ಐ.ಬಿ.ಪ್ರಭುಗೌಡ, ಡಿಸಿಎಫ್

ಮಳೆಯಲ್ಲೇ ತಾಲೀಮು: ತಾಲೀಮು ಆರಂಭದೊಂದಿಗೆ ಮಳೆಯೂ ಶುರುವಾಯಿತು. ಮಳೆಯ ನಡುವೆಯೇ ಸುಗ್ರೀವ ನೇತೃತ್ವದ ಜಂಬೂಸವಾರಿ ಸರಾಗವಾಗಿ ಸಾಗಿತು. ಅರಮನೆ ಆವರಣದಲ್ಲಿ ಒಂದು ಸುತ್ತು ಹಾಕಿ, ಉತ್ತರ ದ್ವಾರದ ಮೂಲಕ ಸಂಜೆ 4.45ರ ವೇಳೆಗೆ ಹೊರಬಂದು ರಾಜಮಾರ್ಗದಲ್ಲಿ ಮರದ ಅಂಬಾರಿ ಮೆರವಣಿಗೆ ಮುಂದುವರೆಯಿತು. ಮರದ ಅಂಬಾರಿ ಹೊತ್ತಿದ್ದ ಸುಗ್ರೀವ, ಸುಮಾರು ಒಂದೂವರೆ ಗಂಟೆಯಲ್ಲಿ ಬನ್ನಿಮಂಟಪ ತಲುಪಿದ. ಮರದ ಅಂಬಾರಿ ಹೊತ್ತು ಪೂರ್ಣ ತಾಲೀಮು ಪೂರೈಸಿ, ಸೈ ಎನಿಸಿಕೊಂಡ. ತನ್ನ ಮಾವುತನ ಆಜ್ಞೆಗಳನ್ನು ಅಚ್ಚುಕಟ್ಟಾಗಿ ಪಾಲಿಸಿ, ಭವ್ಯ ಮೆರವಣಿಗೆಯಲ್ಲಿ ಚಿನ್ನದ ಅಂಬಾರಿ ಹೊತ್ತು ಚಾಮುಂಡೇಶ್ವರಿ ಮೆರೆಸಲು ತಾನೂ ಶಕ್ತ ಎಂಬುದನ್ನು ಸಾಬೀತುಪಡಿಸಿದ.

ಇಕ್ಕೆಲಗಳಲ್ಲಿ ಜನಜಾತ್ರೆ: ನಗರದ ರಾಜಮಾರ್ಗದಲ್ಲಿ ಗಜಪಡೆ ತಾಲೀಮು ವೀಕ್ಷಿಸಲು ನಿತ್ಯ ಸಾವಿರಾರು ಮಂದಿ ನೆರೆಯುತ್ತಿದ್ದಾರೆ. ಅರಮನೆ ಆವರಣದಿಂದ ಬನ್ನಿಮಂಟಪದವರೆಗೂ ಇಕ್ಕೆಲಗಳಲ್ಲಿ ಜನಜಾತ್ರೆಯೇ ಕಂಡು ಬರುತ್ತದೆ. ಹಾಗೆಯೇ ಮರದ ಅಂಬಾರಿ ಹೊತ್ತ ಸುಗ್ರೀವನ ನೇತೃತ್ವದಲ್ಲಿ ಸಾಗಿದ ಗಜಪಡೆಯನ್ನೂ ಸಾವಿರಾರು ಮಂದಿ ಕಣ್ತುಂಬಿಕೊಂಡರು. ಸುಮಾರು ಹೊತ್ತು ಕಾದು ನಿಂತಿದ್ದ ಜನ, ಮಳೆಯನ್ನೂ ಲೆಕ್ಕಿಸದೆ ಗಜಪಡೆಯನ್ನು ನೋಡಿ, ಆನಂದಪಟ್ಟರು. ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲು ತಮ್ಮ ಮೊಬೈಲ್‌ಗಳಲ್ಲಿ ಗಜಪಡೆ ತಾಲೀಮಿನ ಸುಂದರ ದೃಶ್ಯವನ್ನು ಸೆರೆ ಹಿಡಿದುಕೊಂಡರು. ಮಾರ್ಗದುದ್ದಕ್ಕೂ ಸೂಕ್ತ ಬಂದೋಬಸ್ತ್ ಮಾಡಲಾಗಿತ್ತು.

ಮೂರನೇ ಆನೆ: ಲೈನ್ ತಾಲೀಮು ಹಾಗೂ ಭಾರ ಹೊರಿಸುವ ತಾಲೀಮು ನಂತರ ಅಂತಿಮ ಹಂತದಲ್ಲಿ ಮರದ ಅಂಬಾರಿ ಸಹಿತ ಭಾರ ಹೊರಿಸುವ ತಾಲೀಮು ಸೆ.15ರಿಂದ ಆರಂಭಿಸಲಾಗಿದೆ. ಚಿನ್ನದ ಅಂಬಾರಿ ಹೊರಲಿರುವ ಅಭಿಮನ್ಯುಗೆ ಮೊದಲ ದಿನ ಮರದ ಅಂಬಾರಿ ಕಟ್ಟಿ, ಸುಮಾರು 700 ಕೆಜಿ ಭಾರ ಹೊರಿಸಿ ತಾಲೀಮು ನಡೆಸಲಾಯಿತು. ಸೆ.17ರಂದು ಮಹೇಂದ್ರ ಮರದ ಅಂಬಾರಿ ಹೊತ್ತು ಯಶಸ್ವಿಯಾಗಿ ಗುರಿ ತಲುಪಿದ. ಇಂದು ಮೂರನೇ ಆನೆಯಾಗಿ ಸುಗ್ರೀವ ಈ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿಬಾಯಿಸಿದ. ಮೊದಲ ಬಾರಿ ಮರದ ಅಂಬಾರಿ ಕಟ್ಟಿದ್ದರಿಂದ ನೂರು ಕೆಜಿಯಷ್ಟು ಭಾರ ಕಡಿಮೆ ಹಾಕಲಾಗಿತ್ತು. ಇನ್ನು ಧನಂಜಯ ಹಾಗೂ ಪ್ರಶಾಂತನಿಗೆ ಮರದ ಅಂಬಾರಿ ಕಟ್ಟಿ ತಾಲೀಮು ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ.

ಎರಡನೇ ಸಿಡಿಮದ್ದು ತಾಲೀಮಿನಲ್ಲಿ ಮಿಸುಕಾಡದ ಗಜಪಡೆ; ಸಿಡಿಮಿಡಿಗೊಂಡ ಅಶ್ವಪಡೆ!



ದಸರಾ ವಸ್ತುಪ್ರದರ್ಶನದ ಪಾರ್ಕಿಂಗ್ ಸ್ಥಳದಲ್ಲಿ ದಸರಾ ಗಜಪಡೆಗೆ ಎರಡನೆ ಹಂತದ ಸಿಡಿಮದ್ದು ತಾಲೀಮು ನಡೆಸಲಾಯಿತು.

ಮೈಸೂರು, ಸೆ.19(ಎಂಟಿವೈ)– ದಸರಾ ಗಜಪಡೆ ಹಾಗೂ ಅಶ್ವಪಡೆಗೆ ಶುಕ್ರವಾರ ಎರಡನೇ ಬಾರಿಗೆ ಸಿಡಿಮದ್ದು ಸಿಡಿಸುವ ತಾಲೀಮನ್ನು ಯಶಸ್ವಿಯಾಗಿ ನಡೆಸಲಾಯಿತು.

ದಸರಾ ವಸ್ತು ಪ್ರದರ್ಶನ ಆವರಣದ ಪಾರ್ಕಿಂಗ್ ಸ್ಥಳದಲ್ಲಿ ಇಂದು ಬೆಳಗ್ಗೆ 9.30ಕ್ಕೆ ನಡೆದ ಸಿಡಿಮದ್ದು ತಾಲೀಮಿನಲ್ಲಿ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ಗಜಪಡೆಯ 14 ಆನೆ, ಅಶ್ವಪಡೆಯ 35 ಕುದುರೆಗಳು ಪಾಲ್ಗೊಂಡಿದ್ದವು.

ಎಂದಿನಂತೆ 7 ಫಿರಂಗಿ ಬಳಸಿ, ತಲಾ ಮೂರು ಸುತ್ತಿನಂತೆ 21 ಬಾರಿ ಸಿಡಿಮದ್ದು ಸಿಡಿಸಲಾಯಿತು. ಸಿಎಆರ್ ಡಿಸಿಪಿ ಸಿದ್ದನಗೌಡ ಪಾಟೀಲ್, ಎಸಿಪಿ ಕುಮಾರಸ್ವಾಮಿ ನೇತೃತ್ವದಲ್ಲಿ ಫಿರಂಗಿ ದಳದ 35 ಸಿಬ್ಬಂದಿ ಪಾಲ್ಗೊಂಡಿದ್ದರು.

ಮಿಸುಕಾಡದ ಗಜಪಡೆ, ಬೆದರಿದ ಐದಾರು ಕುದುರೆ: ಮೊದಲ ಬಾರಿಯ ಸಿಡಿಮದ್ದು ತಾಲೀಮಿನಲ್ಲಿ ಹೊಸ ಆನೆಗಳಾದ ಶ್ರೀಕಂಠ, ಹೇಮಾವತಿ ಬೆದರಿ, ಹಿಮ್ಮುಖವಾಗಿ ತಿರುಗಿ ನಿಂತು ಆತಂಕ ಮೂಡಿಸಿದ್ದವು. ಆದರೆ, ಇಂದಿನ ಎರಡನೇ ಬಾರಿಯ ತಾಲೀಮಿನಲ್ಲಿ ಹೊಸ ಆನೆಗಳಾದ ಶ್ರೀಕಂಠ, ಹೇಮಾವತಿ ಸೇರಿದಂತೆ ಎಲ್ಲಾ ಆನೆಗಳು ಮಿಸುಕಾಡದೇ ನಿಂತಿದ್ದವು. ಸಿಡಿಮದ್ದು ತಾಲೀಮಿನ ಪಾಲ್ಗೊಂಡಿದ್ದ 35 ಕುದುರೆಗಳಲ್ಲಿ ಐದಾರು ಬೆದರಿದವು. ಅದರಲ್ಲೂ ಎರಡು ಕುದುರೆ ಬೆಚ್ಚಿ ಪಾರ್ಕಿಂಗ್ ಸ್ಥಳದ ಕಾಂಪೌಂಡ್ ಕಡೆ ತೆರಳಿ ಸಿಡುಕಾಡಿದವು. ಈ ವೇಳೆ ಅವುಗಳ ಮೇಲಿದ್ದ ಮೌಂಟೆಡ್ ಸಿಬ್ಬಂದಿ ಕೆಳಗಿಳಿದು, ಅದನ್ನು ಸಂತೈಸುವ ಪ್ರಯತ್ನ ಮಾಡಿದರು. 21ನೇ ಸಿಡಿಮದ್ದು ಸಿಡಿದ ಕೆಲ ಸಮಯದ ನಂತರ ಆ ಕುದುರೆಗಳು ನಿಯಂತ್ರಣಕ್ಕೆ ಬಂದವು.

ತಾಲೀಮಿನ ವೇಳೆ ಅರಣ್ಯ ಇಲಾಖೆಯ ಮೈಸೂರು ವೃತ್ತದ ಸಿಎಫ್ ರವಿಶಂಕರ್, ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ, ಸಿಎಆರ್ ಡಿಸಿಪಿ ಸಿದ್ದನಗೌಡ ಪಾಟೀಲ್, ಎಸಿಪಿ ಕುಮಾರಸ್ವಾಮಿ, ಆರ್‌ಎಫ್‌ಓ ನದೀಮ್, ಪಶುವೈದ್ಯ ಡಾ.ಆದರ್ಶ್, ಸಹಾಯಕರಾದ ರಂಗರಾಜು, ಅಕ್ರಂ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

> **ಎರಡನೇ ತಾಲೀಮು ಯಶಸ್ವಿ**
> ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ದಸರಾ ಗಜಪಡೆಗೆ ಎರಡನೆ ಹಂತದ ಸಿಡಿಮದ್ದು ತಾಲೀಮು ಯಶಸ್ವಿಯಾಗಿ ನೆರವೇರಿದೆ. ಮುಂದಿನ ಕೆಲ ದಿನಗಳಲ್ಲಿ ಅಂತಿಮ ಹಂತದ ಸಿಡಿಮದ್ದು ತಾಲೀಮು ನಡೆಸಲಾಗುವುದು.
> - ರವಿಶಂಕರ್, ಸಿಎಫ್, ಮೈಸೂರು ವೃತ್ತ

> **ಎಲ್ಲಾ ಆನೆಗಳು ದೃಢವಾಗಿವೆ**
> ಮೊದಲ ತಾಲೀಮಿನಲ್ಲಿ ಬೆದರಿದ್ದ ಹೊಸ ಆನೆಗಳಾದ ಶ್ರೀಕಂಠ ಹಾಗೂ ಹೇಮಾವತಿ ಈ ಬಾರಿ ಸಿಡಿಮದ್ದು ಶಬ್ದಕ್ಕೆ ಅಂಜದೆ ಯಶಸ್ವಿಯಾಗಿ ತಾಲೀಮಿನಲ್ಲಿ ಭಾಗವಹಿಸಿವೆ. ಎಲ್ಲಾ 14 ಆನೆಗಳು ಸಿಡಿಮದ್ದಿನ ಶಬ್ದಕ್ಕೆ ಹೊಂದಿಕೊಂಡಂತಿವೆ.
> - ಡಾ.ಐ.ಬಿ.ಪ್ರಭುಗೌಡ, ಡಿಸಿಎಫ್, ಮೈಸೂರು ವನ್ಯಜೀವಿ ವಿಭಾಗ

> ಫಿರಂಗಿ ದಳದ ಸಿಬ್ಬಂದಿ ಎರಡನೇ ಹಂತದ ಸಿಡಿಮದ್ದು ತಾಲೀಮನ್ನು ಯಶಸ್ವಿಯಾಗಿ ನೆರವೇರಿಸಿದ್ದಾರೆ. ಎಂದಿನಂತೆ ತಾಲೀಮಿನಲ್ಲಿ ಪಾಲ್ಗೊಂಡಿದ್ದ ಗಜಪಡೆ ಮತ್ತು ಅಶ್ವಪಡೆಯು ಸಿಡಿಮದ್ದು ಶಬ್ದಕ್ಕೆ ಒಗ್ಗಿಕೊಂಡು, ಭರವಸೆ ಮೂಡಿಸಿವೆ.
> - ಸಿದ್ದನಗೌಡ ಪಾಟೀಲ್, ಡಿಸಿಪಿ, ಸಿಎಆರ್

ಅರಣ್ಯ ಇಲಾಖೆ ಸೇರಲು ತೇಜಸ್ವಿ ಸಾಹಿತ್ಯ ಪ್ರೇರಣೆ!

● ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕಿ ಪಿ.ಅನುಷಾ ವಾಸ್ತವ ನುಡಿ ● ನಮ್ಮ ಭವಿಷ್ಯಕ್ಕೆ ನಾವೇ ಜವಾಬ್ದಾರರು; ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕಿದೆ; ವಿದ್ಯಾರ್ಥಿಗಳೊಂದಿಗೆ ಸಂವಾದ

ಮೈಸೂರು, ಸೆ.19– ಅರಣ್ಯ ಇಲಾಖೆಗೆ ಸೇರಲು ಸಾಹಿತಿ ಪೂರ್ಣಚಂದ್ರ ತೇಜಸ್ವಿ ಅವರ ಕಾಡಿನ ಕತೆಗಳು ಪ್ರೇರಣೆಯಾದವು ಎಂದು ಮೈಸೂರು ಮೃಗಾಲಯದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪಿ.ಅನುಷಾ ತಿಳಿಸಿದರು.

ನಗರದ ಲಕ್ಷ್ಮೀಪುರಂ ಸರ್ಕಾರಿ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜು ಆವರಣದಲ್ಲಿನ ಜ್ಞಾನಬುತ್ತಿ ಸಂಸ್ಥೆಯ ವತಿಯಿಂದ ಏರ್ಪಡಿಸಿರುವ ಐಎಎಸ್ ಮತ್ತು ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳ ಉಚಿತ ತರಬೇತಿ ಶಿಬಿರದ ಕಾರ್ಯಾಗಾರದಲ್ಲಿ ಪಾಲ್ಗೊಂಡು ಅವರು, ಶಿಬಿರಾರ್ಥಿಗಳೊಂದಿಗೆ ಸಂವಾದ ನಡೆಸಿದರು.

ದ್ವಿತೀಯ ಪಿಯುಸಿಯಲ್ಲಿ ಪಿಸಿಎಂಬಿ ಅಧ್ಯಯನ ಮಾಡಿದ ಬಹುತೇಕರು ಮೆಡಿಕಲ್ ಹಾಗೂ ಇಂಜಿನಿಯರಿಂಗ್ ಆಯ್ಕೆ ಮಾಡಿಕೊಳ್ಳುತ್ತಾರೆ. ನಮ್ಮ ತಂದೆಗೆ ಬಿ.ಎಸ್ಸಿ ಅಗ್ರಿಕಲ್ಚರ್ ಮಾಡಿಸಬೇಕೆಂಬ ಆಸೆ ಇತ್ತು. ಆದರೆ ನನಗೆ ಇದೆಲ್ಲದಕ್ಕಿಂತ ಭಿನ್ನ ದಾರಿಯಲ್ಲಿ ಮುಂದುವರೆಯುವ ಆಶಯವಿತ್ತು. ಪೂರ್ಣಚಂದ್ರ ತೇಜಸ್ವಿ ಅವರ ಬರಹಗಳಲ್ಲಿ ಬರುವ ಕಾಡಿನ ಕತೆಗಳು ನನ್ನನ್ನು ಹೆಚ್ಚು ಕಾಡಿದವು. ನಾನು ಅರಣ್ಯಾಧಿಕಾರಿಯೇ ಆಗಬೇಕು ಎಂದು ನಿಶ್ಚಯಿಸಿ, ಬಿ.ಎಸ್ಸಿ ಫಾರೆಸ್ಟ್ ಕೋರ್ಸ್ ಆಯ್ಕೆ ಮಾಡಿಕೊಂಡೆ. ಇದಕ್ಕೆ ಮನೆಯವರು ಹಾಗೂ ಸ್ನೇಹಿತರು ಆಕ್ಷೇಪ ವ್ಯಕ್ತಪಡಿಸಿದರು. ಹಲವರು ಹೆಣ್ಣುಮಕ್ಕಳು ಈ ಕೋರ್ಸ್ ಮಾಡಿದರೆ ನಾಲ್ಕು ವರ್ಷ ವ್ಯರ್ಥ ಎಂದರು. ನಾನು ಧೃತಿಗೆಡದೆ ಅಂತರಂಗದ ಮಾತಿನಂತೆ ಅರಣ್ಯಾಧಿಕಾರಿಯಾದೆ. ಈಗ ಮೈಸೂರು ಮೃಗಾಲಯದಲ್ಲಿ ಸಮರ್ಥವಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ನನ್ನಂತೆ ಅನೇಕ ಹೆಣ್ಣು ಮಕ್ಕಳು ಎಲ್ಲಾ ಕ್ಷೇತ್ರಗಳಲ್ಲೂ ಪುರುಷರಿಗೆ ಸರಿಸಮವಾಗಿ ದುಡಿಯುತ್ತಿದ್ದಾರೆ ಎಂದರು.

ನಮ್ಮ ಭವಿಷ್ಯಕ್ಕೆ ನಾವೇ ಜವಾಬ್ದಾರರು. ಅಚ್ಚುಕಟ್ಟಾಗಿ ಮತ್ತು ವ್ಯವಸ್ಥಿತವಾಗಿ ಭವಿಷ್ಯ ರೂಪಿಸಿಕೊಳ್ಳುವ ಹೊಣೆಗಾರಿಕೆ ನಮ್ಮ ಮೇಲೆಯೇ ಇದೆ. ನಂಬಿಕೆ ಮತ್ತು ಭರವಸೆ ಇದ್ದರೆ ಮಾತ್ರ ಇದು ಸಾಧ್ಯ. ಸಾಧನೆಗಳು ಪ್ರಥಮ ಹೆಜ್ಜೆಯಿಂದಲೇ ಆರಂಭವಾಗುತ್ತದೆ. ಆದರೆ ನಿರಂತರ ಪ್ರಯಾಣದ ನಂತರ ಕನಸು ನನಸಾಗುತ್ತದೆ. ಉದ್ಯೋಗಕ್ಕೆ ಹಲವಾರು ಕ್ಷೇತ್ರಗಳಿದ್ದರೂ ನಿಮ್ಮ ಆಸಕ್ತಿ ಮತ್ತು ಅಭಿರುಚಿಗೆ ತಕ್ಕಂತ ಉದ್ಯೋಗ ಆಯ್ಕೆ ಮಾಡಿಕೊಂಡರೆ ವೃತ್ತಿ ಜೀವನದಲ್ಲಿ ಕೀರ್ತಿ, ಯಶಸ್ಸು ಹಾಗೂ ಸಂತೃಪ್ತಿ ಕಾಣಲು ಸಾಧ್ಯ ಎಂದು ಕಿವಿಮಾತು ಹೇಳಿದರು.

ಯುಪಿಎಸ್ಸಿಗೆ ತಯಾರಾಗಲು ಅಪಾರ ಸಂಪನ್ಮೂಲ ಸಾಮಗ್ರಿಗಳಿವೆ. ಆದರೆ ಎಲ್ಲವನ್ನೂ ಓದಿ, ಅರಗಿಸಿಕೊಳ್ಳಲು ಸಾಧ್ಯವಿಲ್ಲ. ಬದಲಾಗಿ ವಿಷಯಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಬೇಕು. ನೀವೇ ಪ್ರಶ್ನೆಗಳನ್ನು ಹಾಕಿಕೊಂಡು ಅದಕ್ಕೆ ಉತ್ತರಿಸುವ ಅಭ್ಯಾಸ ರೂಢಿಸಿಕೊಳ್ಳಬೇಕು. ಅಣಕು ಸಂದರ್ಶನ ಎದುರಿಸಬೇಕು. ಫ್ಲೋ ಚಾರ್ಟ್, ಗ್ರಾಫ್ ಚಿತ್ರಗಳ ಮೂಲಕ ವಿಷಯಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಓದು ಮತ್ತು ಬರಹ ಎರಡೂ ಜೊತೆಯಾಗಿ ಸಾಗಬೇಕು. ನೋಟ್ಸ್‌ಗಳನ್ನು ಅವಲಂಬಿಸದೆ ಮೂಲಪತ್ಯಗಳನ್ನು ಓದಿ ಗ್ರಹಿಸಿಕೊಂಡರೆ ಮಾತ್ರ ಪರೀಕ್ಷೆಯನ್ನು ಯಶಸ್ವಿಯಾಗಿ ಎದುರಿಸಲು ಸಾಧ್ಯ ಎಂದು ಸಲಹೆ ನೀಡಿದರು.

ಮೈಸೂರು ವಿಶ್ವವಿದ್ಯಾನಿಲಯದ ಎಮರೇಟಿಸ್ ಪ್ರಾಧ್ಯಾಪಕ ಪ್ರೊ.ಹೆಚ್.ಎಂ.ರಾಜಶೇಖರ್ ಮಾತನಾಡಿ, ಯುಪಿಎಸ್‌ಸಿ ಹಾಗೂ ಕೆಪಿಎಸ್‌ಸಿ ಪರೀಕ್ಷೆಗಳನ್ನು ಸತತವಾಗಿ ಎದುರಿಸಬೇಕು. ಆರಂಭದಲ್ಲಿ ಸೋಲಾಗುವುದು ಸಹಜ. ಆದರೆ ಅಷ್ಟಕ್ಕೆ ಎದೆಗುಂದದೆ ತಪ್ಪುಗಳನ್ನು ತಿದ್ದುಕೊಳ್ಳುತ್ತಾ ಅಧ್ಯಯನ ಮುಂದುವರೆಸಿದರೆ ಯಶಸ್ಸು ಕಟ್ಟಿಟ್ಟ ಬುತ್ತಿ. ಧೈರ್ಯ, ಸಕಾರಾತ್ಮಕ ಚಿಂತನೆಯೊಂದಿಗೆ ನಿರಂತರ ಪರಿಶ್ರಮದಿಂದ ಗುರಿಯ ಬೆನ್ನತ್ತಿದರೆ ಸಾಧನೆ ನಿಮ್ಮದಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಜ್ಞಾನಬುತ್ತಿಯ ಜೈನಹಳ್ಳಿ ಸತ್ಯನಾರಾಯಣಗೌಡ, ಪ್ರೊ.ಕೃಷ್ಣ.ಗಣೇಶ, ಕಾರ್ಯದರ್ಶಿ ಹೆಚ್.ಬಾಲಕೃಷ್ಣ, ಡಾ.ಎಸ್‌ಬಿಎಂ ಪ್ರಸನ್ನ, ಕೆ.ವೈ.ನಾಗೇಂದ್ರ, ಪ್ರೊ.ಸಿ.ಕೆ.ಕಿರಣ್ ಕೌಶಿಕ್ ಮತ್ತಿತರರಿದ್ದರು.



ಮೈಸೂರು ಮೃಗಾಲಯದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪಿ.ಅನುಷಾ ಅವರನ್ನು ಅಭಿನಂದಿಸಲಾಯಿತು.

ದಸರಾ ಚಲನಚಿತ್ರೋತ್ಸವ

(ಐನಾಕ್ಸ್ ಮಲ್ಟಿಪ್ಲೆಕ್ಸ್)



ಸ್ಕ್ರೀನ್ 2: ಬೆ.10– ಚುರು ಮುರಿಯಾ, ಮ.1– ಎಕ್ಕ, ಸಂ.4– ಲಿಟ್ಲ್ ಪ್ಲಾನೆಟ್, ಸಂ.5– ಅಂತ್ಯಾರಂಭ, ಸಂ.7– ಮಹಾವತಾರ್ ನರಸಿಂಹ

ಸ್ಕ್ರೀನ್ 3: ಬೆ.10.15– ಮಂದಾರ, ಮ.1.15– ಲಚ್ಚಿ, ಸಂ.4.15– ಅಡವಿ, ರಾ.7.15– ಕೃತ್ಯ

ಸ್ಕ್ರೀನ್ 4 : ಬೆ.10.30– ಡಿಸಿಷನ್ ಟು ಲೀವ್, ಮ.1.30– ವೆನ್ ದ ಲೈಟ್ ಬ್ರೇಕ್ಸ್, ಸಂ.4.30– ದ ಸೀಡ್ ಆಫ್ ದ ಸೇಕ್ರೇಡ್ ಫಿಗ್, ರಾ.7.30– ಲೈಟ್ ಹೌಸ್

ಮಹಿಳಾ ದಸರಾ: ಸೆ.23ಕ್ಕೆ ರಂಗೋಲಿ ಸ್ಪರ್ಧೆ

ಮೈಸೂರು, ಸೆ.19– ಮಹಿಳಾ ಮತ್ತು ಮಕ್ಕಳ ದಸರಾ ಉಪಸಮಿತಿ ವತಿಯಿಂದ ಮಹಿಳಾ ದಸರಾ ಅಂಗವಾಗಿ ಸೆ.23ರಂದು ಬೆಳಗ್ಗೆ 7ಕ್ಕೆ ಅರಮನೆ ಮುಂಭಾಗ 'ರಂಗೋಲಿ ಚಿತ್ತಾರ' ಸ್ಪರ್ಧೆ ಆಯೋಜಿಸಿದ್ದು, ಆಸಕ್ತ ಮಹಿಳೆಯರು ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗೆ ಮೇಲ್ವಿಚಾರಕಿಯರಾದ ತಾರಾ (7795033652) ಅಥವಾ ಅನುಪಮಾ(9611591791) ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಸರ್ ಎಂ.ವಿಶ್ವೇಶ್ವರಯ್ಯ, ಡಾ.ರಾಧಾಕೃಷ್ಣನ್ ಶ್ರೇಷ್ಠ ವ್ಯಕ್ತಿತ್ವಗಳು

ಎಸಿಸಿಇ ವತಿಯಿಂದ ಈರ್ವರು ಮಹನೀಯರಿಗೆ ನುಡಿನಮನ



ಸಮೈಸೂರು, ಸೆ.19(ವಿವಿಹೆಚ್)– ತಮ್ಮ ಅಸಾಧಾರಣ ವ್ಯಕ್ತಿತ್ವ ಕ್ರಿಯಾಶೀಲ ಚಿಂತನೆಗಳ ಮೂಲಕ ರಾಜ್ಯದ ಅಭಿವೃದ್ಧಿಗೆ ಶ್ರಮಿಸಿದವರಲ್ಲಿ ಸರ್ ಎಂ.ವಿಶ್ವೇಶ್ವರಯ್ಯ ಮತ್ತು ಮಾಜಿ ರಾಷ್ಟ್ರಪತಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರು ಪ್ರಮುಖರು ಎಂದು ಎಸಿಸಿಇನ ಮಾಜಿ ಅಧ್ಯಕ್ಷ ಬಿ.ಎಸ್.ಸಿ.ರಾವ್ ಅಭಿಪ್ರಾಯಪಟ್ಟರು.

ಅಸೋಷಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಎಂಜಿನಿಯರ್ಸ್ (ಎಸಿಸಿಇ) ಮೈಸೂರು ಕೇಂದ್ರದ ವತಿಯಿಂದ ರಾಮ್ಕೋ ಸಿಮೆಂಟ್ (ramco cement) ಸಹಯೋಗದೊಂದಿಗೆ ಮೈಸೂರಿನ ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಸ್ಪೋರ್ಟ್ಸ್ ಕ್ಲಬ್‌ನ ಗಾಯತ್ರಿ ದೇವಿ ಹಾಲ್ ನಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ಇಂಜಿನಿಯರ್ ಹಾಗೂ ಶಿಕ್ಷಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸರ್ ಎಂ.ವಿಶ್ವೇಶ್ವರಯ್ಯನವರು ಅತ್ಯಂತ ಪ್ರಾಮಾಣಿಕ, ಅಚಲ ವ್ಯಕ್ತಿತ್ವ ಹೊಂದಿದ್ದ ಒಬ್ಬ ಮಹಾನ್ ನಾವೀನ್ಯಕಾರ ಮತ್ತು ಅನನ್ಯ ಚಿಂತಕರಾಗಿದ್ದರು. ಪರಿಹರಿಸಲಾಗದ ಸಮಸ್ಯೆಗಳಿಗೆ ಮೂಲ ಪರಿಹಾರಗಳನ್ನು ನೀಡಿದ ಅವರು, ತಾವು ಮಾಡುವ ಎಲ್ಲಾ ಕೆಲಸದಲ್ಲೂ ಪ್ರಾಮಾಣಿಕ, ಸಮರ್ಪಿತ ಮತ್ತು ಸೂಕ್ಷ್ಮತೆಯನ್ನು ಹೊಂದಿದ್ದ ಮೇರು ವ್ಯಕ್ತಿತ್ವ ಅವರದು ಎಂದು ಶ್ಲಾಘಿಸಿದರು.

ಸಿವಿಲ್ ಎಂಜಿನಿಯರ್‌ಗಳನ್ನು ಸಮಾಜದ ವಾಸ್ತುಶಿಲ್ಪಿಗಳು ಎಂದು ಕರೆಯಲಾಗುತ್ತದೆ. ಎಂಜಿನಿಯರಿಂಗ್ ನಮ್ಮ ದೈನಂದಿನ ಅಸ್ತಿತ್ವದ ಅದೃಶ್ಯ ಬೆನ್ನೆಲುಬಾಗಿದೆ. ಈ ವೃತ್ತಿಯನ್ನು ಜವಾಬ್ದಾರಿ ಎಂದು ಪರಿಗಣಿಸಿ ಕೆಲಸ ಮಾಡುತ್ತೇವೆ. ಇಂದಿನ ವಿದ್ಯಮಾನದಲ್ಲಿ ಎಂಜಿನಿಯರ್ ಎದುರಿಸುವ ಸವಾಲುಗಳು ವಿಶಿಷ್ಟ, ವೈವಿಧ್ಯಮಯ ಮತ್ತು ಕ್ಲಿಷ್ಟಕರವಾಗಿರುತ್ತದೆ. ಇವುಗಳನ್ನು ಪರಿಹರಿಸಲು ಹೊಸ ಆಲೋಚನಾ ವಿಧಾನಗಳು, ಹೊಸ ಕೆಲಸದ ವಿಧಾನಗಳು ಭಿನ್ನವಾಗಿರಬೇಕಿದೆ ಎಂದರು.

ಸರ್ ಎಂ ವಿಶ್ವೇಶ್ವರಯ್ಯನವರು ವಿಭಿನ್ನ ಜಗತ್ತು ಮತ್ತು ವಿಭಿನ್ನ ಯುಗಕ್ಕೆ ಸೇರಿದವರಾಗಿದ್ದರೂ, ಅವರ ಜೀವನ ಮತ್ತು ಅವರು ಎತ್ತಿಹಿಡಿದ ಮೌಲ್ಯಗಳು ನಮಗೆ, ವಿಶೇಷವಾಗಿ ಯುವ ಪೀಳಿಗೆಗೆ ದಾರಿದೀಪವಾಗಿದೆ. ಅವುಗಳನ್ನು ಪಾಲಿಸದೇ ಆಧುನಿಕತೆ ನೆಪದಲ್ಲಿ ಕಂಪ್ಯೂಟರ್, ಇಂಟರ್ನೆಟ್ ಮತ್ತು ಈಗಿನ ಎಐ–ಟೂಲ್‌ಗಳ ಮೇಲೆ ಅವಲಂಭಿತರಾಗಿದ್ದಾರೆ. ಇದು ಹೀಗೆ ಮುಂದುವರಿದಲ್ಲಿ ಮುಂದಿನ ದಿನಗಳಲ್ಲಿ ಕೈಯಿಂದ ಬರೆಯಲು ಅಥವಾ ಸ್ವತಃ ಯೋಚಿಸಲು ಸಾಧ್ಯವಿಲ್ಲದ ಸ್ಥಿತಿಗೆ ತಲುಪಬೇಕಾಗುತ್ತದೆ ಎಂದು ಎಚ್ಚರಿಸಿದರು.

ಎಸಿಸಿಇ ಮೈಸೂರು ಕೇಂದ್ರದ ಅಧ್ಯಕ್ಷ ಎಸ್. ಬಿ. ಬಸವರಾಜ್ ಮಾತನಾಡಿ, ಪ್ರತಿಯೊಬ್ಬ ವ್ಯಕ್ತಿ ಹಾಗೂ ವ್ಯಕ್ತಿತ್ವವನ್ನು ರೂಪಿಸುವ ಏಕೈಕ ವ್ಯಕ್ತಿಯೇ ಶಿಕ್ಷಕ. ಶಿಕ್ಷಣ ಕ್ಷೇತ್ರಕ್ಕೆ ರಾಧಾಕೃಷ್ಣನ್ ಅವರ ಕೊಡುಗೆ ಅಪಾರವಾದರೆ, ಎಂಜಿನಿಯರಿಂಗ್‌ಗೆ ಸರ್.ಎಂ.ವಿ ಅವರ ಕೊಡುಗೆ ಸ್ಮರಣೀಯ. ಹಾಗಾಗಿ ಈ ಇಬ್ಬರು ಮಹನೀಯರ ಜನ್ಮದಿನಾಚರಣೆಯನ್ನು ಒಟ್ಟಾಗಿ ಆಚರಿಸಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಸಿವಿಲ್ ಇಂಜಿನಿಯರ್ ವಿಭಾಗದಲ್ಲಿ ಕೊಡಮಾಡುವ 'ಅತ್ಯುತ್ತಮ ಶಿಕ್ಷಕ' ಪ್ರಶಸ್ತಿಯನ್ನು ಪಿಇಎಸ್ ಕಾಲೇಜಿನ ಮಾಜಿ ಪ್ರಾಂಶುಪಾಲರಾದ ಡಾ. ರಾಮಲಿಂಗಯ್ಯ ಅವರಿಗೆ, 'ಅಸಾಧಾರಣ ಸಿವಿಲ್ ಎಂಜಿನಿಯರ್' ಪ್ರಶಸ್ತಿಯನ್ನು ಇಂಜಿನಿಯರ್ ಹೆಚ್.ಕೆ.ಸಂಪತ್ ಕುಮಾರ್ ಅವರಿಗೆ ನೀಡಿ ಗೌರವಿಸಲಾಯಿತು.

ರಾಮ್ಕೋ ಸಿಮೆಂಟ್ ನ ತಾಂತ್ರಿಕ ಸೇವೆಗಳ ಸಹಾಯಕ ಉಪಾಧ್ಯಕ್ಷ ಅನಿಲ್ ಕುಮಾರ್ ಪಿಳ್ಳೈ, ಗೌರವ ಕಾರ್ಯದರ್ಶಿ ಸಿ.ಎಸ್.ಶ್ರೀಕಾಂತ್, ರಾಮ್ಕೊ ಸಿಮೆಂಟ್ ನ ಸೂರಜ್ ಕುಮಾರ್, ಖಜಾಂಚಿ ಡಾ. ಬಿ.ಎಸ್. ಕೀರ್ತಿ ಗೌಡ ಸೇರಿದಂತೆ ಇಂಜಿನಿಯರ್ ಗಳು ಉಪಸ್ಥಿತರಿದ್ದರು.

ದೇಶ - ವಿದೇಶ

ಉಗ್ರರಿಂದ ಗುಂಡಿನ ದಾಳಿ: ಅಸ್ಸಾಂ ರೈಫಲ್ಸ್‌ನ ಇಬ್ಬರು ಸೈನಿಕರು ಹುತಾತ್ಮ

ಮಣಿಪುರ: ಮಣಿಪುರದ ಇಂಫಾಲ್ ಹೊರವಲಯದಲ್ಲಿ ಶುಕ್ರವಾರ ಸಂಜೆ ಬಂದೂಕುಧಾರಿಗಳ ಗುಂಪೊಂದು ಅಸ್ಸಾಂ ರೈಫಲ್ಸ್‌ನ ಟ್ರಕ್ ಮೇಲೆ ಹೊಂಚು ಹಾಕಿ ದಾಳಿ ನಡೆಸಿದ ಪರಿಣಾಮ ಇಬ್ಬರು ಅಸ್ಸಾಂ ರೈಫಲ್ಸ್ ಯೋಧರು ಸಾವನ್ನಪ್ಪಿದ್ದಾರೆ. ಘಟನೆಯಲ್ಲಿ 5 ಮಂದಿ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಇಂಫಾಲ್‌ನಲ್ಲಿರುವ ಪ್ರಾದೇಶಿಕ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ದಾಖಲಿಸಲಾಗಿದೆ.

ಸಂಜೆ 5.50 ಕ್ಕೆ ಪಟ್ಸೊಯ್ ಕಂಪನಿಯ ಕಾರ್ಯಾಚರಣೆ ನೆಲೆಯಿಂದ ನಂಬೋಲ್ ನೆಲೆಗೆ ಪ್ರಯಾಣಿಸುತ್ತಿದ್ದಾಗ, ಅರೆಸೈನಿಕ ಪಡೆಗಳ 407 ಟಾಟಾ ವಾಹನದ ಮೇಲೆ ಅಪರಿಚಿತ ಬಂದೂಕುಧಾರಿಗಳು ಗುಂಡು ಹಾರಿಸಿದರು. ಪ್ರಧಾನಿ ನರೇಂದ್ರ ಮೋದಿ ಒಂದು ವಾರದ ಹಿಂದೆ ಮಣಿಪುರಕ್ಕೆ ಭೇಟಿ ನೀಡಿದ್ದಾಗ ಅವರು ತೆರಳಿದ ಅದೇ ರಸ್ತೆಯಲ್ಲಿ ಈ ಘಟನೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಮಣಿಪುರದ ಡಿನೋಟಿಫೈಡ್ ಪ್ರದೇಶದಲ್ಲಿ ಹೆದ್ದಾರಿಯಲ್ಲಿ ಗುರುತಿಸಲಾಗದ ಭಯೋತ್ಪಾದಕರು ಕಾವಲುಗಾರರ ಮೇಲೆ ದಾಳಿ ನಡೆಸಿದ್ದಾರೆ. ನಂತರದ ಕಾರ್ಯಾಚರಣೆಯಲ್ಲಿ, ಅಸ್ಸಾಂ ರೈಫಲ್ಸ್‌ನ ಇಬ್ಬರು ಸಿಬ್ಬಂದಿ ಹುತಾತ್ಮರಾದರು ಮತ್ತು ಐದು ಮಂದಿ ಗಾಯಗೊಂಡರು ಎಂದು ಅಧಿಕೃತ ಹೇಳಿಕೆ ತಿಳಿಸಿದೆ.

ಅಮೆರಿಕದಲ್ಲಿ ಪೊಲೀಸರ ಗುಂಡೇಟಿಗೆ ತೆಲಂಗಾಣ ಟೆಕ್ಕಿ ಬಲಿ



ಕ್ಯಾಲಿಫೋರ್ನಿಯಾ: ರೂಮ್ ಮೇಟ್ ಜೊತೆಗೆ ಹೊಡೆದಾಟದ ನಂತರ ತೆಲಂಗಾಣದ ಮಹಬೂಬ್‌ನಗರ ಜಿಲ್ಲೆಯ 29 ವರ್ಷದ ಟೆಕ್ಕಿಯನ್ನು ಅಮೆರಿಕದಲ್ಲಿ ಪೊಲೀಸರು ಗುಂಡಿಕ್ಕಿ ಕೊಂದಿದ್ದಾರೆ ಎಂದು ವರದಿಯಾಗಿರುವುದಾಗಿ ಅವರು ಕುಟುಂಬ ಗುರುವಾರ ತಿಳಿಸಿದೆ.

ಕ್ಯಾಲಿಫೋರ್ನಿಯಾದಲ್ಲಿ ಸಾಫ್ಟ್‌ವೇರ್ ವೃತ್ತಿಪರರಾಗಿದ್ದ ಮೊಹಮ್ಮದ್ ನಿಜಾಮುದ್ದೀನ್ ಅವರನ್ನು ಸಾಂಟಾ ಕ್ಲಾರಾ ಪೊಲೀಸರು ಸೆ.3ರಂದು ಕೊಂದಿದ್ದಾರೆ ಎಂದು ಹೇಳಲಾಗಿದೆ. ಈ ವಿಷಯವನ್ನು ತನ್ನ ಮಗನ ಸ್ನೇಹಿತನ ಮೂಲಕ ತಿಳಿದಿರುವುದಾಗಿ ಅವರ ಹೈದರಾಬಾದ್‌ನಲ್ಲಿರುವ ಅವರತಂದೆ ಮೊಹಮ್ಮದ್ ಹಸ್ನುದ್ದೀನ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಏನಾಯಿತು ಎಂಬುದು ನಿಖರವಾಗಿ ತಿಳಿದುಬಂದಿಲ್ಲ. ಕ್ಷುಲಕ ವಿಚಾರಕ್ಕೆ ರೂಮ್‌ಮೇಟ್‌ನೊಂದಿಗೆ ಜಗಳ ನಡೆದಿದೆ. ಗುರುವಾರ ಬೆಳಗ್ಗೆ ಪೊಲೀಸರು ಗುಂಡಿಕ್ಕಿ ಹತ್ಯೆ ಮಾಡಿರುವುದಾಗಿ ತಿಳಿಸಲಾಗಿದೆ ಎಂದು ಅವರು ಹೇಳಿದರು.

ಐಸೆನ್‌ಹೋವರ್ ಡ್ರೈವ್‌ನಲ್ಲಿರುವ ಮನೆಯೊಳಗೆ ತನ್ನ ರೂಮ್‌ಮೇಟ್‌ಗೆ ಇರಿದ ಆರೋಪದ ನಂತರ ಒಬ್ಬ ವ್ಯಕ್ತಿಯನ್ನು ಅಧಿಕಾರಿಗಳು ಗುಂಡಿಕ್ಕಿ ಕೊಂದಿದ್ದಾರೆ ಎಂದು ಸಾಂಟಾ ಕ್ಲಾರಾ ಪೊಲೀಸರು ತಿಳಿಸಿದ್ದಾರೆ.

ತೈವಾನ್‌ಗೆ ಸೇನಾ, ಆರ್ಥಿಕ ನೆರವು ನಿಲ್ಲಿಸಿದ ಟ್ರಂಪ್



ವಾಷಿಂಗ್ಟನ್: ಚೀನಾದೊಂದಿಗೆ ವ್ಯಾಪಾರ ಒಪ್ಪಂದ ಮಾತುಕತೆ ನಡೆಸಲು ಮುಂದಾಗಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ತೈವಾನ್‌ಗೆ ಸೇನಾ, ಆರ್ಥಿಕ ನೆರವು ನಿಲ್ಲಿಸಿದ್ದಾರೆ. 400 ಮಿಲಿಯನ್ ಡಾಲರ್ ಮೊತ್ತದ ಮಿಲಿಟರಿ ನೆರವಿಗೆ ಅನುಮೋದನೆ ನೀಡಲು ನಿರಾಕರಿಸಿದ್ದಾರೆ ಎಂದು ಮೂಲಗಳನ್ನು ಉಲ್ಲೇಖಿಸಿ ವಾಷಿಂಗ್ಟನ್ ಪೋಸ್ಟ್ ವರದಿ ಮಾಡಿದೆ.

ಟ್ರಂಪ್ ತಮ್ಮ ಚೀನಾದ ಸಹವರ್ತಿ ಕ್ಸಿ ಜಿನ್‌ಪಿಂಗ್ ಅವರೊಂದಿಗೆ ಮಾತುಕತೆಯ ಒಪ್ಪಂದಕ್ಕೆ ಪ್ರಯತ್ನಿಸುತ್ತಿದ್ದು, ಬೀಜಿಂಗ್‌ನೊಂದಿಗೆ ಸಂಬಂಧವನ್ನು ಮೃದುಗೊಳಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಅಮೆರಿಕದ ಪತ್ರಿಕೆ ವರದಿ ಮಾಡಿದೆ.

ಅಮೆರಿಕದಲ್ಲಿ ಟಿಕ್ ಟಾಕ್ ನಿಷೇಧವನ್ನು ತಪ್ಪಿಸಲು ಅದರ ಚೀನಾದ ಮಾಲೀಕರಾದ ಬೈಟ್‌ಡ್ಯಾನ್ಸ್‌ನಿಂದ ಬೇರ್ಪಡಿಸುವ ಒಪ್ಪಂದ ಕುರಿತು ಉಭಯ ನಾಯಕರು ಚರ್ಚಿಸುವ ಸಾಧ್ಯತೆಯಿದೆ ಎಂದು ಅಮೆರಿಕದ ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ರಾಷ್ಟ್ರೀಯ ಭದ್ರತೆಯ ಕಳವಳದ ಹಿನ್ನೆಲೆಯಲ್ಲಿ ಕಳೆದ ವರ್ಷ ಅಮೆರಿಕದಲ್ಲಿ ಟಿಕ್ ಟಾಕ್ ಅನ್ನು ಟ್ರಂಪ್ ಆಡಳಿತ ಬ್ಯಾನ್ ಮಾಡುವ ಕಾನೂನು ರೂಪಿಸಿತ್ತು. ಆದರೆ, ಎರಡನೇ ಬಾರಿಗೆ ಅಮೆರಿಕದ ಅಧ್ಯಕ್ಷರಾದ ಟ್ರಂಪ್ ಡೆಡ್ ಲೈನ್ ಅನ್ನು ವಿಸ್ತರಿಸಿದ್ದರು.

ಸ್ಕೂಬಾ ಡೈವಿಂಗ್ ವೇಳೆ ಅಸ್ಸಾಂನ ಜನಪ್ರಿಯ ಗಾಯಕ ಸಾವು



ಸಿಂಗಾಪುರ: ಅಸ್ಸಾಂನ ಜನಪ್ರಿಯ ಗಾಯಕ ಜುಬೀನ್ ಗರ್ಗ್(52) ಅವರು ಸಿಂಗಾಪುರದಲ್ಲಿ ಸ್ಕೂಬಾ ಡೈವಿಂಗ್ ವೇಳೆ ಸಂಭವಿಸಿದ ಅಪಘಾತದಲ್ಲಿ ನಿಧನರಾಗಿದ್ದಾರೆ.

'ಯಾ ಅಲಿ' ಖ್ಯಾತಿಯ ಗಾಯಕ ಸಿಂಗಾಪುರದಲ್ಲಿ ಪ್ಯಾರಾಗ್ಲೈಡಿಂಗ್ ಮಾಡುವಾಗ ಸಮುದ್ರಕ್ಕೆ ಬಿದ್ದು ಸಾವನ್ನಪ್ಪಿದ್ದಾರೆ. ಕೆಲವು ವರದಿಗಳ ಪ್ರಕಾರ ಅವರು ವಿಲಕ್ಷಣ ಸ್ಕೂಬಾ ಡೈವಿಂಗ್ ಅಪಘಾತದಲ್ಲಿ ಸಾವನ್ನಪ್ಪಿದ್ದಾರೆ. ಗಂಭೀರ ಸ್ಥಿತಿಯಲ್ಲಿದ್ದ ಗಾರ್ಗ್ ಅವರನ್ನು ಆಸ್ಪತ್ರೆಗೆ ಕರೆದೊಯ್ಯುವಾಗ ದಾರಿ ಮಧ್ಯೆಯೇ ಮೃತಪಟ್ಟಿದ್ದಾರೆ. ಗಾಯಕ ಗಾರ್ಗ್ ಅವರು ಈಶಾನ್ಯ ಉತ್ಸವದಲ್ಲಿ ಭಾಗವಹಿಸಲು ಸಿಂಗಾಪುರಕ್ಕೆ ತೆರಳಿದ್ದರು ಮತ್ತು ಶುಕ್ರವಾರ ಪ್ರದರ್ಶನ ನೀಡಬೇಕಿತ್ತು.

ಗರ್ಗ್ ಅಸ್ಸಾಂನ ಗೋಲಾಘಾಟ್‌ನ ಫ್ಯಾಷನ್ ಡಿಸೈನರ್ ಗರಿಮಾ ಸೈಕಿಯಾ ಅವರನ್ನು ವಿವಾಹವಾಗಿದ್ದರು. ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಗಾಯಕ ಗಾರ್ಗ್ ನಿಧನಕ್ಕೆ ಶೋಕ ವ್ಯಕ್ತಪಡಿಸಿದ್ದು, ಇದು ಒಂದು ದುರಂತ ಮತ್ತು ನೋವಿನ ಘಟನೆ. ನಾನು ಗುವಾಹಟಿಗೆ ಹಿಂತಿರುಗಿ ಅವರ ಪಾರ್ಥೀವ ಶರೀರವನ್ನು ಹೇಗೆ ತರಬಹುದು ಎಂಬುದರ ಕುರಿತು ಚರ್ಚಿಸುತ್ತೇನೆ ಎಂದು ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಚಮೋಲಿಯಲ್ಲಿ ಇನ್ನು ಐದು ಶವ ಪತ್ತೆ : ಸಾವಿನ ಸಂಖ್ಯೆ ಏಳಕ್ಕೆ ಏರಿಕೆ



ಗೋಪೇಶ್ವರ: ಉತ್ತರಾಖಂಡದ ಚಮೋಲಿ ಜಿಲ್ಲೆಯ ಮಳೆಯಿಂದ ತತ್ತರಿಸಿದ್ದು, ಹಾನಿಗೊಳಗಾದ ಹಳ್ಳಿಗಳಲ್ಲಿ ಮತ್ತೆ ಐದು ಶವಗಳು ಪತ್ತೆಯಾಗಿವೆ. ಇದರೊಂದಿಗೆ ಸಾವಿನ ಸಂಖ್ಯೆ ಏಳಕ್ಕೆ ಏರಿದೆ. ಡೆಹ್ರಾಡೂನ್‌ನಿಂದ ಸುಮಾರು 260 ಕಿ.ಮೀ ಮತ್ತು ಗೋಪೇಶ್ವರದಲ್ಲಿರುವ ಚಮೋಲಿ ಜಿಲ್ಲಾ ಕೇಂದ್ರದಿಂದ 50 ಕಿ.ಮೀ ದೂರದಲ್ಲಿರುವ ಚಮೋಲಿಯ ನಂದನಗರ ಪ್ರದೇಶದ ಕುಂಟಾರಿ ಲಗಾ ಫಾಲಿ, ಕುಂಟಾರಿ ಲಗಾ ಸರ್ಪಾನಿ, ಸೆರಾ ಮತ್ತು ಧುರ್ಮಾ ಎಂಬ ನಾಲ್ಕು ಗ್ರಾಮಗಳಲ್ಲಿ ಭಾರೀ ಮಳೆಯಿಂದ ನಿನ್ನೆ ಭೂಕುಸಿತ ಮತ್ತು ಪ್ರವಾಹ ಸಂಭವಿಸಿದೆ.

ನಂದನಗರವು ಈಗಾಗಲೇ ಭೂ ಕುಸಿತದಿಂದ ತತ್ತರಿಸಿದ್ದು, ಚಮೋಲಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಸಂದೀಪ್ ತಿವಾರಿ ಅವರು ಶೋಧ ಮತ್ತು ರಕ್ಷಣಾ ಕಾರ್ಯಾಚರಣೆಗಳ ಮೇಲ್ವಿಚಾರಣೆಗೆ ನಂದನಗರದಲ್ಲಿದ್ದಾರೆ. ಗುರುವಾರ, ಕುಂಟಾರಿ ಲಗಾ ಫಾಲಿ ಮತ್ತು ಧುರ್ಮಾ ಗ್ರಾಮಗಳಿಂದ ಜೀವಂತವಾಗಿ ರಕ್ಷಿಸಲ್ಪಟ್ಟ ಐದು ಜನ ಸೇರಿದಂತೆ 12 ಜನ ಗಾಯಗೊಂಡಿದ್ದು, ಅವರು ಋಷಿಕೇಶದ ಏಮ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಂಗಾಂಗ ದಾನದ ಜನಜಾಗೃತಿಗೆ ಶ್ರೀನಿರ್ಮಲಾನಂದನಾಥ ಸ್ವಾಮೀಜಿ ನೇತೃತ್ವದಲ್ಲಿ ಜಾಥಾ


ಬಿಜಿಎಸ್ ವಾಕ್ ಫಾರ್ ಲೈಫ್ ಕಾರ್ಯಕ್ರಮದಲ್ಲಿ ಶ್ರವಣಬೆಳಗೊಳ, ಆದಿಚುಂಚನಗಿರಿ ಮಠದ ಶ್ರೀಗಳೊಂದಿಗೆ ಜಿಲ್ಲಾ ಉಸ್ತುವಾರಿ ಸಚಿವ ಚೆಲುವರಾಯ ಸ್ವಾಮಿ, ಪೊಲೀಸ್ ಮಹಾ ನಿರ್ದೇಶಕ ಡಾ. ಎಂ.ಎ ಸಲೀಂ ಮೊದಲಾದವರು ಪಾಲ್ಗೊಂಡಿದ್ದರು.

ನಾಗಮಂಗಲ, ಸೆ.19–ದೇಹದ ಅಂಗಾಂಗವನ್ನು ದಾನ ಮಾಡುವ ಮೂಲಕ ಇನ್ನೊಬ್ಬರ ಜೀವಕ್ಕೆ ಆಸರೆ ಆಗುವಂತೆ ಜಿಲ್ಲಾ ಉಸ್ತುವಾರಿ ಸಚಿವ ಎನ್ ಚೆಲುವರಾಯಸ್ವಾಮಿ ತಿಳಿಸಿದ್ದಾರೆ.

ತಾಲೂಕಿನ ಬಿ.ಜಿ ನಗರದ ಆದಿಚುಂಚನಗಿರಿ ಆಸ್ಪತ್ರೆ ಆವರಣದಿಂದ 5ಕಿ.ಮೀ ದೂರದ ನಡಿಗೆಯ ವಾಕ್ ಫಾರ್ ಲೈಫ್ ಜಾಥಾಕ್ಕೆ ಗಣ್ಯರು ಪಾರಿವಾಳ ಹಾರಿಬಿಡುವ ಮುಖಾಂತರ ಚಾಲನೆ ನೀಡಿದರು. ಮನುಷ್ಯ ಜೀವನ ಉಳಿಸುವಂತಹ ಒಂದು ಅಂತರಾಷ್ಟ್ರೀಯ ಮಟ್ಟದ ವೈದ್ಯಕೀಯ ಸೇವೆಯನ್ನು ಮಾಡಬೇಕೆಂಬ ಸಂಕಲ್ಪವನ್ನು ಹೊಂದಿದ್ದ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಕನಸು ನನಸಾಗಿದೆ. ಅಂಗಾಂಗ ವೈಫಲ್ಯದಿಂದ ಬಳಲುತ್ತಿರುವವರಿಗೆ ದಾನ ಮಾಡುವ ಮೂಲಕ ಹೊಸ ಜೀವನಕ್ಕೆ ದಾರಿದೀಪವಾಗಲು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಬಿಜಿಎಸ್ ವಾಕ್ ಫಾರ್ ಲೈಫ್ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಕ್ಕೆ ಶ್ಲಾಘಿಸಿದರು.

ಮಾಜಿ ಸಂಸದ ಪ್ರತಾಪ್ ಸಿಂಹ ಮಾತನಾಡಿ ಅಂಗಾಂಗ ದಾನ ಮಾಡುವುದರಿಂದ ನಾವು ಮತ್ತೊಬ್ಬರ ಜೀವಕ್ಕೆ ಆಸರೆಯಾಗುತ್ತೇವೆ ಎಂಬುದುಸಂತಸದ ವಿಚಾರ. ಇಂತಹ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಿರ್ವಹಿಸುವಲ್ಲಿ ಶ್ರೀ ಆದಿಚುಂಚನಗಿರಿ ಕ್ಷೇತ್ರ ಮೈಲಿಗಲ್ಲನ್ನು ನಿರ್ಮಿಸಲಿದೆ. ರಾಜ್ಯದಲ್ಲಿ ನಾವು ಕಂಡಿರುವಂತಹ ಮಹಾಸ್ವಾಮೀಜಿಗಳನ್ನು ಗುರುತಿಸುವುದಾದರೆ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ, ಪೇಜಾವರ ಮಠದ ಸ್ವಾಮೀಜಿಗಳು ಮತ್ತು ಶಿವಗಂಗೆ ಮಠದ ಶಿವಕುಮಾರ ಸ್ವಾಮೀಜಿಗಳನ್ನು ನಾವು ಮೇರುಮಟ್ಟದಲ್ಲಿ ನೋಡುತ್ತಿದ್ದೇವೆ ಎಂದರು.

ಸ್ವಾಮೀಜಿ ಪ್ರದೇಶದಲ್ಲಿ ಅಂಗಾಂಗ ವೈಫಲ್ಯದಿಂದ ಬಳಲುತ್ತಿರುವವರಿಗೆ ಅತಿ ಕಡಿಮೆ ವೆಚ್ಚದಲ್ಲಿ ಅಳವಡಿಸುವ ಮೂಲಕ ಜನಜಾಗೃತಿ ಉಂಟು ಮಾಡಬೇಕಾಗಿದೆ ಎಂದು ಡಾ. ಶಿವರಾಮ್ ಹೇಳಿದರು. ಸಮಾರಂಭದಲ್ಲಿ 350ಕ್ಕೂ ಹೆಚ್ಚು ಮಂದಿ ದೇಹದ ಅಂಗಾಂಗವನ್ನು ದಾನ ಮಾಡುವುದಾಗಿ ನೋಂದಣಿ ಮಾಡಿಕೊಂಡರು.

ವಾಕ್ ಫಾರ್ ಲೈಫ್ ನಡಿಗೆಯಲ್ಲಿ ಶಾಲಾ ಮಕ್ಕಳು, ಸೇರಿದಂತೆ 12 ಸಾವಿರಕ್ಕೂ ಹೆಚ್ಚು ಜನರು ಹಾಗೂ ಸುಮಾರು ಐದು ಕಿ.ಮೀ.ಗೂ ಹೆಚ್ಚು ನಡಿಗೆಯಲ್ಲಿ ಭಾಗವಹಿಸಿದ್ದರು.

ಶ್ರವಣ ಬೆಳಗೊಳ ಜೈನಮಠದ ಶ್ರೀ ಅಭಿನವ ಚಾರು ಕೀರ್ತಿ ಭಟ್ಟಾರಕ ಸ್ವಾಮೀಜಿ, ಆದಿಚುಂಚನಗಿರಿ ಮಠದ ಶಂಭುನಾಥ ಸ್ವಾಮೀಜಿ, ಮಂಗಳ ನಾಥ ಸ್ವಾಮೀಜಿ, ಚಂದ್ರ ಶೇಖರನಾಥ ಸ್ವಾಮೀಜಿ, ಮಾದಾರ ಚೆನ್ನಯ್ಯ ಸ್ವಾಮಿ, ಪೊಲೀಸ್ ಮಹಾ ನಿರ್ದೇಶಕ ಡಾ. ಎಂ.ಎ ಸಲೀಂ, ಡಿಜಿಪಿ ಬಿಜೋರಲಿಂಗಯ್ಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಜಿಲ್ಲಾಧಿ ಕಾರಿ ಡಾ. ಕುಮಾರ್, ಚಲನಚಿತ್ರ ನಟರಾದ ಧ್ರುವ ಸರ್ಜಾ, ಸಚಿನ್ ಚೆಲುವರಾಯಸ್ವಾಮಿ, ಡಿವೈಎಸ್‌ಪಿ ಚೆಲುವರಾಜು, ಸುನಿಲ್ ಲಕ್ಷ್ಮೀಕಾಂತ್, ಶಾಸಕರಾದ ರಂಗನಾಥ್, ಸಿ.ಎನ್ ಬಾಲಕೃಷ್ಣ, ಶರತ್ ಬಚ್ಚೇಗೌಡ, ಎಂಟಿ ಕೃಷ್ಣಪ್ಪ, ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಪ್ರಮೋದ್ ಮುತಾಲಿಕ್‌ಗೆ ನಿರ್ಬಂಧ

ಮದ್ದೂರಿಗೆ ಬರುತ್ತಿದ್ದಾಗ ನಿಡಘಟ್ಟ ಬಳಿ ವಾಪಸ್ ಕಳಿಸಿದ ಪೊಲೀಸರು

ಮದ್ದೂರು,ಸೆ.19–ಇತ್ತೀಚೆಗೆ ಮದ್ದೂರಿನಲ್ಲುಂಟಾದ ಕೋಮುಗಲಭೆಯ ಪ್ರದೇಶ ಮತ್ತು ಗಾಯಾಳುಗಳ ಮನೆಗೆ ಭೇಟಿ ನೀಡಲು ಮದ್ದೂರಿಗೆ ಆಗಮಿಸಬೇಕಿದ್ದ ಶ್ರೀರಾಮ ಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಅವರನ್ನು ಜಿಲ್ಲಾ ಗಡಿ ನಿಡಘಟ್ಟ ಬಳಿ ಪೊಲೀಸರು ತಡೆಯೊಡ್ಡಿದ ಘಟನೆ ಶುಕ್ರವಾರ ನಡೆಯಿತು.

ಮದ್ದೂರಿಗೆ ಮುತಾಲಿಕ್ ಬರುತ್ತಿದ್ದಾರೆಂಬ ಮಾಹಿತಿ ಅರಿತಿದ್ದ ಜಿಲ್ಲಾಧಿಕಾರಿ ಡಾ. ಕುಮಾರ ಸೆ.19ರಬೆಳಗ್ಗೆ 6ಗಂಟೆಯಿಂದ ರಾತ್ರಿ 12ಗಂಟೆಯವರೆಗೆ ಜಿಲ್ಲೆ ಪ್ರವೇಶಿಸದಂತೆ ನಿರ್ಬಂಧ ವಿಧಿಸಿ ಆದೇಶ ಹೊರಡಿಸಿದ್ದರು. ಕೋಮು ಪ್ರಚೋದನಾ ಭಾಷಣದಿಂದ ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ಅನೇಕ ಪ್ರಕರಣಗಳನ್ನು ಎದುರಿಸುತ್ತಿರುವ ಮುತಾಲಿಕ್ ಮದ್ದೂರಿಗೆ ಭೇಟಿ ನೀಡಿದರೆ, ಮತ್ತೆ ಶಾಂತಿ ಕದಡಬಹುದೆಂದು ಜಿಲ್ಲೆಗೆ ಬಾರದ ಹಾಗೆ ನಿರ್ಬಂಧ ಹೇರಿ, ಒಂದು ವೇಳೆ


ನಿಡಘಟ್ಟ ಬಳಿ ಬ್ಯಾರಿಕೇಡ್ ಹಾಕಿ ಪೊಲೀಸರು ಮುತಾಲಿಕ್‌ರನ್ನು ತಡೆದರು.

ಬಂದರೆ ಪೊಲೀಸರು ಅವರನ್ನು ತಡೆದು ವಾಪಸ್ ಕಳುಹಿಸಬೇಕೆಂದು ಸೂಚಿಸಿದ್ದರು. ಅದಾಗ್ಯೂ ಮುತಾಲಿಕ್ ಇಂದು ಬೆಳಿಗ್ಗೆ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ಮಾರ್ಗವಾಗಿ ಜಿಲ್ಲೆಯೊಳಗೆ ಪ್ರವೇಶ ಮಾಡಲು ಆಗಮಿಸಿದಾಗ ಮದ್ದೂರು–ಚನ್ನಪಟ್ಟಣ ಗಡಿ ನಿಡಘಟ್ಟ ಬಳಿ ಬ್ಯಾರಿಕೇಡ್ ಹಾಕಿ ಕಾದು ನಿಂತಿದ್ದ ಪೊಲೀಸರು ಮುತಾಲಿಕ್‌ರನ್ನು ತಡೆದರು. ಜಿಲ್ಲೆ ಪ್ರವೇಶಕ್ಕೆ ತಮಗೆ ನಿರ್ಬಂಧ ವಿದ್ದು, ತಾವು ವಾಪಸ್ ಹೋಗುವಂತೆ ಮನವಿ ಮಾಡಿದರು. ಇದರಿಂದ ಆಕ್ರೋಶಗೊಂಡ ಪ್ರಮೋದ್ ಮುತಾಲಿಕ್ ಹಾಗೂ ಬೆಂಬಲಿಗರು ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಪೊಲೀಸರಿಗೂ ಹಾಗೂ ಮುತಾಲಿಕ್ ನಡುವೆ ಮಾತಿನ ಚಕಮಕಿ ನಡೆದು ಕೆಲ ಕಾಲ ಪರಿಸ್ಥಿತಿ ಉದ್ವಿಗ್ನಗೊಂಡಿತ್ತು. ಕೊನೆಗೆ ಪೊಲೀಸರು ನಿರ್ಬಂಧದ ಪ್ರತಿಗೆ ಮುತಾಲಿಕ್‌ರಿಂದ ಸಹಿ ಹಾಕಿಸಿಕೊಂಡು ವಾಪಸ್ಸು ಬೆಂಗಳೂರಿಗೆ ಕಳುಹಿಸಿದರು.

ಸರ್ಕಾರದ ವಿರುದ್ಧ ವಾಗ್ದಾಳಿ: ಮುತಾಲಿಕ್ ಮಾತನಾಡಿ, ಮದ್ದೂರಿನ ಶಾಂತ ವಾತಾವರಣ ಕೆರಳಿಸುತ್ತಿರುವುದು ಕಾಂಗ್ರೆಸ್ ಸರ್ಕಾರ.ನಾವು ಯಾವ ಪ್ರತಿಭಟನೆಗೂ ಹೋಗುತ್ತಿಲ್ಲ. ಕಾರ್ಯಕರ್ತರ ಮೇಲಿನ ಕೇಸ್ ಬಗ್ಗೆ ವಕಾಲತ್ತು ವಹಿಸಲು ವಕೀಲರೊಂದಿಗೆ ಹೋಗುತ್ತಿದ್ದೆ ಆದರೆ ಈ ಸರ್ಕಾರ ನಮ್ಮನ್ನು ತಡೆಯುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಮುಖಂಡರಾದ ಕೆ.ಜಿ. ಗುರುಮಲ್ಲೇಶ್, ವೀರಭದ್ರಸ್ವಾಮಿ, ಜಗನ್ನಾಥ್, ಸುರೇಶ್, ಸ್ವಾಮಿ, ಮಲ್ಲಿಕಾರ್ಜುನ, ದಿನೇಶ್, ಗಿರೀಶ್, ಚೈತನ್ಯ ಇದ್ದರು.

ಸುಳ್ಳು ದೂರು ದಾಖಲೆ ರದ್ದುಪಡಿಸಲು ಆಗ್ರಹಿಸಿ

ಠಾಣೆ ಎದುರು ರೈತರ ಪರ ಧರಣಿ ಕುಳಿತ ಶಾಸಕ ಮಂಜು

ಕಿಕ್ಕೇರಿ, ಸೆ.19–ಇನಾಂ ಜಮೀನಿನಲ್ಲಿ ಬೇಸಾಯ ಮಾಡುತ್ತಿದ್ದು ಸುಳ್ಳು ದಾಖಲೆ ಸೃಷ್ಟಿಸಿಕೊಂಡಿರುವ ಪ್ರಭಾವಿ ಜಮೀನುದಾರರ ಪರವಾಗಿ ಅಮಾಯಕ ರೈತರ ವಿರುದ್ಧ ಸುಳ್ಳು ದೂರು ದಾಖಲು ಮಾಡಿಕೊಂಡಿರುವುದನ್ನು ಕೈಬಿಡುವಂತೆ ಆಗ್ರಹಿಸಿ ಶಾಸಕ ಎಚ್.ಟಿ. ಮಂಜು ನೇತೃತ್ವದಲ್ಲಿ ಮಾರ್ಗೋನಹಳ್ಳಿ ಗ್ರಾಮದ ರೈತರು ಶುಕ್ರವಾರ ಪೊಲೀಸ್ ಠಾಣೆ ಆವರಣದಲ್ಲಿ ಧರಣಿ ನಡೆಸಿದರು.

ಠಾಣೆ ಆವರಣದಲ್ಲಿ ಸಮಾವೇಶಗೊಂಡ ರೈತರು ಘೋಷಣೆ ಕೂಗುತ್ತಾ ಶುಕ್ರವಾರ ಪ್ರತಿಭಟನೆಗೆ ಇಳಿದರು. ವಿವಾದಿತ ಜಮೀನಿನ ಹಕ್ಕಿಗಾಗಿ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಲಾಗಿದೆ. ರೈತರಿಗೆ ರಕ್ಷಣೆ ಕೊಡದೆ ತಮ್ಮ ವಿರುದ್ದವೇ ಕೇಸು ಹಾಕಿದ್ದು, ನಿಷ್ಪಕ್ಷ ಪಾತ ನಡೆಸುವಂತೆ ರೈತರು ಪಟ್ಟು ಹಿಡಿದರು.

ಇಡೀ ಗ್ರಾಮದ ರೈತರ ಅನ್ನವನ್ನು ಕಿತ್ತುಕೊಳ್ಳುವಂತಿದೆ. ಇವರು ಉಗ್ರಗಾಮಿಗಳಲ್ಲ. ಅನ್ನದಾತರು. ಆಗಿರುವ ಅನ್ಯಾಯ ಸರಿಪಡಿಸಿಕೊಡಲು ಅಧಿಕಾರಿಗಳು ಮುಂದಾಗಬೇಕು. ತಾನು ರೈತರ, ನ್ಯಾಯದ ಪರವಾಗಿದ್ದು ಸ್ಥಳಕ್ಕೆ ಮೇಲಾಧಿ ಕಾರಿಗಳು ಆಗಮಿಸಿ. ಸೂಕ್ತ ನ್ಯಾಯ ಕೊಡಿಸಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದರು.


ರೈತರ ವಿರುದ್ಧ ಹೂಡಿರುವ ಸುಳ್ಳು ಕೇಸಿನ ಬಗ್ಗೆ ತನಿಖೆಗೆ ಒತ್ತಾಯಿಸಿ ರೈತರೊಂದಿಗೆ ಶಾಸಕ ಹೆಚ್.ಟಿ.ಮಂಜು ಪ್ರತಿಭಟನೆ ನಡೆಸಿದರು.

ರೈತ ಶಿವೇಗೌಡ ಮಾತನಾಡಿ ತಾವು ಶಾಂತಿಯುತವಾಗಿ ಪ್ರತಿಭಟನೆ ಮಾಡುತ್ತಿದ್ದರೂ ರೈತರ ಮೇಲೆ ಇಲ್ಲಸಲ್ಲದ ಆರೋಪ ಹೊರಿಸಿ ಯಾವುದೇ ಗಲಾಟೆ ಮಾಡದ ಅಮಾಯಕ 32ರೈತರ ವಿರುದ್ಧ ಸುಳ್ಳು ಕೇಸನ್ನು ಕಿಕ್ಕೇರಿ ಪೊಲೀಸ್ ಠಾಣೆಯಲ್ಲಿ ಹಾಕಿಸಿದ್ದಾರೆ ಎಂದು ಆರೋಪಿಸಿದರು

ಸಮಗ್ರ ತನಿಖೆ ಆಗುವವರೆಗೆ ಜಾಗ ಬಿಟ್ಟು ಕದಲುವುದಿಲ್ಲ ಎಂದು ಪಟ್ಟು ಹಿಡಿದು ಸ್ಥಳದಲ್ಲೇ ಅಡುಗೆ ತಯಾರಿಸಿ ಸಾಮೂಹಿಕ ಭೋಜನ ಮಾಡಿದರು. ಪ್ರತಿಭಟನಾಕಾರರು ಠಾಣೆ ಪ್ರವೇಶಿಸದಂತೆ ಬ್ಯಾರಿಕೇಡ್ ನಿರ್ಮಿಸಿ ರೈತರನ್ನು ತಡೆದರು.

ಪ್ರತಿಭಟನೆಯಲ್ಲಿ ಶಾಸಕ ಎಚ್.ಟಿ. ಮಂಜು, ಜೆಡಿಎಸ್ ಜಿಲ್ಲಾ ಯುವ ಕಾರ್ಯದರ್ಶಿ ಬಿ.ಎಂ.ಕಿರಣ್, ಎಸ್‌ಡಿಎಂಸಿ ಅಧ್ಯಕ್ಷ ಐಕನಹಳ್ಳಿ ಕೃಷ್ಣೇಗೌಡ, ಸದಸ್ಯ ಮಧುಗೌಡ, ಸಂಘದ ಸದಸ್ಯರಾದ ಶೇಖರ್, ಎಂ.ಟಿ.ರಮೇಶ್, ರಾಜಶೇಖರ್, ಕಾಳೇಗೌಡ, ಶಿವಣ್ಣ, ಮಂಜು, ಚಂದ್ರು, ಸ್ವಾಮಿ, ಶಂಕರ್, ರಮೇಶ್, ಇತರರಿದ್ದರು. ಇನ್‌ಸ್ಪೆಕ್ಟರ್ ರೇವತಿ, ಸುವರ್ಣಾರಾಣಿ, ಅನಂದೇಗೌಡ ಬಂದೋಬಸ್ತಿನ ನೇತೃತ್ವ ವಹಿಸಿದ್ದರು.

ದಸರಾ ಸಿದ್ಧತಾ ಕಾರ್ಯಗಳ ಬಗ್ಗೆ ಶಾಸಕರಿಂದ ಪರಿಶೀಲನೆ

ಶ್ರೀರಂಗಪಟ್ಟಣ, ಸೆ.19–ಶಾಸಕ ರಮೇಶ್ ಬಂಡಿಸಿದ್ದೇಗೌಡ ಹಾಗೂ ಜಿಲ್ಲಾಧಿಕಾರಿ ಡಾ.ಕುಮಾರ ಜೊತೆಗೂಡಿ ದಸರಾ ಆಚರಣೆ ಬಗ್ಗೆ ಸ್ಥಳ ಪರಿಶೀಲನೆ ನಡೆಸಿದರು.

ಶ್ರೀ ರಂಗನಾಥ ಸ್ವಾಮಿ ದೇವಾಲಯದ ಆವರಣದಲ್ಲಿನ ಶ್ರೀರಂಗ ವೇದಿಕೆ ಕಾಮಗಾರಿಯ ಸಿದ್ಧತೆ ಬಗ್ಗೆ ಪರಿಶೀಲನೆ ನಡೆಸಿ, ಉದ್ಘಾಟನಾ ಸ್ಥಳ ವಾದ ಕಿರಂಗೂರು ಬನ್ನಿಮಂಟಪಕ್ಕೆ ಭೇಟಿ ನೀಡಿ ಸಣ್ಣ– ಬಣ್ಣ ಪೂರ್ಣಗೊಂಡಿರುವ ಬಗ್ಗೆ ಪರಿಶೀಲಿಸಿದರು. ಎಲ್ಲಾ ತಾಲೂಕು ಮಟ್ಟದ ಅಧಿಕಾರಿಗಳು ಹಾಜರಿದ್ದು, ಕಳೆದ ವರ್ಷದಂತೆ ಈ ವರ್ಷವೂ ಸಹ ಯಶಸ್ವಿಯಾಗಿ ದಸರಾ ಉತ್ಸವವನ್ನು ನಡೆಸಲು ಎಲ್ಲಾ ಅಧಿಕಾರಿಗಳು ಸಹಕಸಬೇಕೆಂದು ಶಾಸಕರು ಹೇಳಿದರು.

ಪೊಲೀಸ್ ಇಲಾಖೆಯಿಂದ ಅಗತ್ಯ ಸಿಬ್ಬಂದಿಗಳನ್ನು ನಿಯೋಜಿಸಲು ಮತ್ತು ಯಾವುದೇ ಅಹಿತಕರ ಘಟನೆ ನಡೆಯದಂತೆ ಕ್ರಮ ವಹಿಸಬೇಕು, ವೇದಿಕೆ ನಿರ್ಮಾಣದಲ್ಲಿ ಯಾವುದೇ ಲೋಪವಿಲ್ಲದಂತೆ ನಿರ್ಮಾಣವಾಗಬೇಕು. ವಾಹನಗಳ ನಿಲುಗಡೆಗೆ ಸರಿಯಾದ ಸ್ಥಳವನ್ನು ನಿಗದಿಪಡಿಸುವಂತೆ ತಿಳಿಸಲಾಯಿತು. ಕಾರ್ಯಕ್ರಮ ರೂಪುರೇಷೆಗಳನ್ನು ಸಿದ್ಧಪಡಿಸಲು ರಚಿಸಲಾಗುವ ವಿವಿಧ ಸಮಿತಿಗಳು ಯಾವುದೇ ಲೋಪ ಬಾರದಂತೆ ವಹಿಸಿರುವ ಕರ್ತವ್ಯವನ್ನು ಜವಾಬ್ದಾರಿಯುತವಾಗಿ ನಡೆಸಲು ಸೂಚಿಸಿದರು. ವೇದಿಕೆ ಬಳಿ ವಿವಿಧ ಇಲಾಖೆಗಳ ಮಳಿಗೆ ನಿರ್ಮಾಣ ಮಾಡಿ ಸ್ಥಳೀಯ ಉತ್ಪನ್ನಗಳ ಮಾರಾಟಕ್ಕೆ ಅಗತ್ಯ ಕ್ರಮವಹಿಸಲು ಮತ್ತು ಬನ್ನಿಮಂಟಪ ಹಾಗೂ ವೇದಿಕೆ ನಿರ್ಮಾಣದಲ್ಲಿ ಶುಚಿತ್ವದಲ್ಲಿ ರಾಜಿಯಿಲ್ಲದಂತೆ ಕ್ರಮವಹಿಸಲು ಸೂಚಿಸಲಾಯಿತು.


ಶಾಸಕ ರಮೇಶ್ ಬಂಡಿಸಿದ್ದೇಗೌಡ, ಜಿಲ್ಲಾಧಿಕಾರಿ ಡಾ.ಕುಮಾರ, ಜಿಪಂ ಸಿಇಓ ಕೆ.ಆರ್.ನಂದಿನಿ ದಸರಾ ಸಿದ್ಧತಾ ಕಾರ್ಯಗಳನ್ನು ಪರಿಶೀಲಿಸಿದರು.

ಜಿಪಂ ಸಿಇಓ ಕೆ.ಆರ್. ನಂದಿನಿ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ವೇಣು ಮೊದಲಾದ ಅಧಿಕಾರಿಗಳು ಪರಿಶೀಲನಾ ಸಮಯದಲ್ಲಿ ಹಾಜರಿದ್ದರು.

ಇಂದು ಸಂಘ–ಸಂಸ್ಥೆಗಳ ಮುಖಂಡರ ಸಭೆ

ಮಂಡ್ಯ: ರಾಜ್ಯದ ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗಳ ಬಗ್ಗೆ ಸಮೀಕ್ಷೆ ನಡೆಸುವ ಸಂಬಂಧ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸೆ.20 ರಂದು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಮಧ್ಯಾಹ್ನ 4.30 ಗಂಟೆಗೆ ಜಿಲ್ಲೆಯ ಎಲ್ಲಾ ಸಮುದಾಯದ ಸಂಘ–ಸಂಸ್ಥೆಗಳ ಮುಖಂಡರೊಂದಿಗೆ ಸಭೆಯನ್ನು ಆಯೋಜಿಸಲಾಗಿದೆ. ಸದರಿ ಸಭೆಗೆ ಜಿಲ್ಲೆಯ ಎಲ್ಲಾ ಸಮುದಾಯದ ಸಂಘ–ಸಂಸ್ಥೆಗಳ ಮುಖಂಡರುಗಳು ತಪ್ಪದೆ ಹಾಜರಾಗುವಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ಕೋರಿದ್ದಾರೆ

ಮೂರನೇ ಪುಟದಿಂದ

ಜಾತಿ ಗಣತಿ

ಲಿಂಗ ಸೇರಿದಂತೆ ಶೈಕ್ಷಣಿಕ ಅರ್ಹತೆ, ಉದ್ಯೋಗ, ಜಾತಿ, ಉಪಜಾತಿ, ಧರ್ಮ ಹಾಗೂ ಮಾತೃಭಾಷೆ, ಆದಾಯದ ಮೂಲ, ಕುಟುಂಬದ ಆದಾಯ, ಆಸ್ತಿಪಾಸ್ತಿಯ ವಿವರ ಸೇರಿದಂತೆ 60 ಪ್ರಶ್ನೆಗಳಿಗೆ ಉತ್ತರದ ವಿವರ ಪಡೆಯಲಾಗುತ್ತದೆ. ಆಯೋಗವು ಇದೆಲ್ಲ ಮಾಹಿತಿಯನ್ನು ಸಂಗ್ರಹಿಸಿ. ವಿಶ್ಲೇಷಿಸಿ ಅಂತಿಮವಾಗಿ ಸರಕಾರಕ್ಕೆ ವರದಿ ಕೊಡಲಿದೆ.

ವಿಪಕ್ಷಗಳು ಮತ್ತು ವಿವಿದ ಸಮುದಾಯದವರು ಮಾತ್ರವಲ್ಲದೆ ಸರ್ಕಾರದ ಅಂಗವಾಗಿರುವ ಬಹುತೇಕ ಸಚಿವರು ಈ ಸಮೀಕ್ಷೆಯ ವಿರುದ್ಧ ಸಂಪುಟ ಸಭೆಯಲ್ಲೇ ಧ್ವನಿ ಎತ್ತಿದ್ದು, ಸಮೀಕ್ಷೆಯು ಬೇಡವೇ ಬೇಡ ಎಂದು ಮುಖ್ಯಮಂತ್ರಿಗಳಿಗೆ ಆಗ್ರಹಿಸಿದ್ದಾರೆ. ಅಲ್ಲದೇ ಸಮೀಕ್ಷೆ ನಡೆದದ್ದೇ ಆದಲ್ಲಿ ಪಕ್ಷದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿ ಮುಂದಿನ ಚುನಾವಣೆಯಲ್ಲಿ ಸೋಲನ ನುಭವಿಸಬೇಕಾಗುತ್ತದೆ ಎಂಬ ಆತಂಕವನ್ನೂ ಸಚಿವರು ಮುಖ್ಯಮಂತ್ರಿಗಳ ಬಳಿ ವ್ಯಕ್ತಪಡಿಸಿದ್ದಾರೆ ಎಂದು ಹೇಳಲಾಗಿದೆ. ಸಂಪುಟ ಸಭೆಯಲ್ಲಿ ಕೆಲ ಸಚಿವರು ಸಮೀಕ್ಷೆಯ ಬಗ್ಗೆ ಅಪಸ್ವರ ಎತ್ತಿರುವು ದನ್ನು ಒಪ್ಪಿಕೊಂಡ ಮುಖ್ಯಮಂತ್ರಿಗಳು, ಕೆಲ ಸಚಿವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಯಾವುದೇ ಪ್ರಕ್ರಿಯೆ ನಡೆಯುವಾಗಲೂ ಭಿನ್ನವಾದ ಅಭಿಪ್ರಾಯಗಳು ಬರುವುದು ಸಹಜ. ಅದೆಲ್ಲವನ್ನೂ ಸರಿಪಡಿಸಿ ಸಮೀಕ್ಷೆ ನಡೆಸಲಾಗುತ್ತದೆ ಎಂದು ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಖಾಸಗಿ ದರ್ಬಾರ್‌ಗೆ ಭರದ ಸಿದ್ಧತೆ

12.58ರೊಳಗೆ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಸಿಂಹಾಸನ ವೇರಲಿದ್ದಾರೆ. ಮಧ್ಯಾಹ್ನ 2.05ರಿಂದ 2.15ರೊಳಗೆ ಚಾಮುಂಡೇಶ್ವರಿ ಅಮ್ಮನವರನ್ನು ಚಾಮುಂಡಿತೊಟ್ಟಿಯಿಂದ ಕನ್ನಡಿ ತೊಟ್ಟಿಗೆ ಬಿಜಯ ಮಾಡಲಾಗುತ್ತದೆ.

ಸೆ.23ರಿಂದ 29ರವರೆಗೆ ಸಂಜೆ ವೇಳೆ ಖಾಸಗಿ ದರ್ಬಾರ್ ಜರುಗಲಿದೆ. ಈ ವೇಳೆ ಪಟ್ಟದ ಆನೆ, ಪಟ್ಟದ ಹಸು, ಕುದುರೆ, ಒಂಟೆಯೊಂದಿಗೆ ಪದ್ಧತಿಯಂತೆ ಕಳಸ ಹೊತ್ತ ಮಹಿಳೆಯರು, ಬಿರುದು ಬಾವಲಿ ಹಿಡಿದ ಅರಮನೆ ಸಿಬ್ಬಂದಿ, ಮಂಗಳವಾದ್ಯದವರು ದೇವರು ತರುವ ಕಾರ್ಯದಲ್ಲಿ ಪಾಲ್ಗೊಳ್ಳಲಿದ್ದಾರೆ.

ಸೆ.29ರಂದು ಬೆಳಗ್ಗೆ 10.10ರಿಂದ 10.30ರೊಳಗೆ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಸರಸ್ವತಿ ಪೂಜೆ ಮಾಡಲಿದ್ದಾರೆ. ಅಂದು ರಾತ್ರಿ ಖಾಸಗಿ ದರ್ಬಾರ್ ಮುಗಿದ ಬಳಿಕ ಕನ್ನಡಿ ತೊಟ್ಟಿಯಲ್ಲಿ ಕಾಳರಾತ್ರಿ ಪೂಜೆ ನೆರವೇರಲಿದೆ. ಸೆ.30ರಂದು ದುರ್ಗಾಷ್ಟಮಿ ಪೂಜೆ ನೆರವೇರಲಿದೆ.

ಆಯುಧ ಪೂಜೆ ದಿನವಾದ ಅ.1ರಂದು ಬೆಳಗ್ಗೆ 6ಕ್ಕೆ ಚಂಡಿ ಹೋಮ ಆರಂಭವಾಗಲಿದ್ದು, 9.15ಕ್ಕೆ ಚಂಡಿ ಹೋಮದ ಪೂರ್ಣಾಹುತಿ ನೆರವೇರಲಿದೆ. ಬೆಳಗ್ಗೆ 7.30ರಿಂದ 7.42ರವರೆಗೆ ಪಟ್ಟದ ಕತ್ತಿ ಸೇರಿದಂತೆ ಖಾಸ ಆಯುಧಗಳನ್ನು ಅರಮನೆಯ ಆನೆ ಬಾಗಿಲಿನ ಮೂಲಕ ಪಟ್ಟದ ಆನೆ,ಹಸು, ಕುದುರೆ, ಒಂಟೆಗಳೊಂದಿಗೆ ಕೋಡಿ ಸೋಮೇಶ್ವರ ದೇವಾಲಯಕ್ಕೆ ಕಳುಹಿಸಿಕೊಡಲಾಗುತ್ತದೆ. ನಂತರ ಬೆಳಗ್ಗೆ 8ರಿಂದ 8.40ರೊಳಗೆ ಪಟ್ಟದ ಕತ್ತಿ ಹಾಗೂ ಖಾಸ ಆಯುಧಗಳನ್ನು ಕೋಡಿ ಸೋಮೇಶ್ವರ ದೇವಾಲಯದಿಂದ ಆನೆ ಬಾಗಿಲು ಮೂಲಕ ಕಲ್ಯಾಣ ಮಂಟಪಕ್ಕೆ ತರಲಾಗುತ್ತದೆ. ಬೆಳಗ್ಗೆ 10.30ಕ್ಕೆ ಆನೆ ಬಾಗಿಲಿಗೆ ಆನೆ, ಕುದುರೆ, ಹಸು ಕರತಂದ ಬಳಿಕ ಕಲ್ಯಾಣ ಮಂಟಪದಲ್ಲಿ ಆಯುಧ ಪೂಜಾ ಕಾರ್ಯ ಆರಂಭವಾಗಲಿದೆ. ನಂತರ ಸಂಜೆ ಖಾಸಗಿ ದರ್ಬಾರ್ ಮುಗಿದ ನಂತರ ಸಿಂಹ ವಿಸರ್ಜನೆ ಮಾಡಲಾಗುತ್ತದೆ. ಬಳಿಕ ಯದುವೀರ್ ಹಾಗೂ ತ್ರಿಷಿಕಾ ಕುಮಾರಿ ಒಡೆಯರ್ ಅವರ ಕಂಕಣವನ್ನು ದೇವರ ಮನೆಯಲ್ಲಿ ವಿಸರ್ಜಿಸಿ, ಅಮಲು ದೇವತೆ ಅಮ್ಮನವರ ದರ್ಶನ ಮಾಡಿದ ಬಳಿಕ ದಫ್ತರ್ ಪೂಜೆ ನೆರವೇರುವುದರೊಂದಿಗೆ ಈ ವರ್ಷದ ಖಾಸಗಿ ದರ್ಬಾರ್‌ಗೆ ತೆರೆ ಬೀಳಲಿದೆ.

ಸೆ.2ರಂದು ಬೆಳಗ್ಗೆ 10ಗಂಟೆಗೆ ವಿಜಯದಶಮಿ ಪೂಜೆ ಆರಂಭವಾಗಲಿದೆ. ಪಟ್ಟದ ಆನೆಗಳು ಬಂದ ಬಳಿಕ ಉತ್ತರ ಪೂಜೆ ನೆರವೇರಲಿದೆ. ಬೆಳಗ್ಗೆ 10.50 ರಿಂದ 11.10ರೊಳಗೆ ವಿಜಯ ಯಾತ್ರೆ. ಅಂತಿಮವಾಗಿ ಚಾಮುಂಡೇಶ್ವರಿ ಅಮ್ಮನವರ ಉತ್ಸವ ಮೂರ್ತಿಯನ್ನು ಕನ್ನಡಿ ತೊಟ್ಟಿಯಿಂದ ಚಾಮುಂಡಿತೊಟ್ಟಿಗೆ ಬಿಜಯ ಮಾಡಿಸಲಾಗುತ್ತದೆ. ಈ ಎಲ್ಲಾ ಪೂಜಾ ಕಾರ್ಯ ಮುಗಿದ ನಂತರ ಜಂಬೂ ಸವಾರಿ ಮೆರವಣಿಗೆಯ ಪ್ರಕ್ರಿಯೆ ಆರಂಭವಾಗಲಿದೆ.

ಜನರ ಚಲನವಲನಗಳ ಮೇಲೆ ಹದ್ದಿನಕಣ್ಣು

ವ್ಯವಸ್ಥೆ ಮಾಡಲಾಗಿದೆ ಎಂದರು. ದಸರಾ ಉದ್ಘಾಟನೆಯಾಗುವ ಚಾಮುಂಡಿಬೆಟ್ಟ, ಅರಮನೆಯ ಸಾಂಸ್ಕೃತಿಕ ಕಾರ್ಯಕ್ರಮ, ದಸರಾ ವಸ್ತುಪ್ರದರ್ಶನ, ದಸರಾ ಕುಸ್ತಿ, ದಸರಾ ಫಲಪುಷ್ಪ ಪ್ರದರ್ಶನ, ದಸರಾ ಆಹಾರ ಮೇಳ, ಪುಸ್ತಕ ಮೇಳ, ದೀಪಾಲಂಕಾರ, ಯುವ ದಸರಾ, ಏರ್ ಶೋ, ಜಂಬೂ ಸವಾರಿ ಮೆರವಣಿಗೆ, ಬನ್ನಿಮಂಟಪದ ಟಾರ್ಚ್ ಲೈಟ್ ಪರೇಡ್ ನಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ದಸರಾದಲ್ಲಿ ನಿಯೋಜನೆಗೊಳ್ಳುವ ಪೊಲೀಸ್ ಸಿಬ್ಬಂದಿ ಕುರಿತಂತೆ ಅಂಕಿ ಅಂಶಗಳ ವಿವರ ನೀಡಿದ ಸೀಮಾ ಲಾಟ್ಕರ್, 6,384 ಸಿವಿಲ್, ಟ್ರಾಫಿಕ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ಬಂದೋಬಸ್ತ್‌ಗೆ ನಿಯೋಜಿಸಲಾಗಿದೆ. ಅಲ್ಲದೆ 35 ಕೆಎಸ್‌ಆರ್‌ಪಿ ತುಕಡಿಗಳು, 15 ಸಿಎಆರ್ ಮತ್ತು ಡಿಎಆರ್ ತುಕಡಿಗಳು, 29 ಎಎಸ್‌ಸಿ (ಆರ್ಮಿ ಸರ್ವೀಸ್ ಕಾರ್ಪ್ ಟೀಂ), 1 ಗರುಡಾ ಫೋರ್ಸ್ ಹಾಗೂ 1,200 ಹೋಂ ಗಾರ್ಡ್ ಸಿಬ್ಬಂದಿಗಳನ್ನು ಬಂದೋಬಸ್ತ್‌ಗೆ ನೇಮಕ ಮಾಡಲಾಗಿದೆ ಎಂದು ಹೇಳಿದರು.

ದಸರಾ ಬಂದೋಬಸ್ತ್‌ಗೆ ಐವರು ಎಸ್ಪಿ, 35 ಡಿವೈಎಸ್ಪಿ, 140 ಸಿವಿಲ್ ಇನ್‌ಸ್ಪೆಕ್ಟರ್‌ಗಳು ಬಂದೋಬಸ್ತ್ ನೇತೃತ್ವ ವಹಿಸಲಿದ್ದಾರೆ ಎಂದು ತಿಳಿಸಿದರು.

ಮೈಸೂರು ರೈಲ್ವೆ ನಿಲ್ದಾಣದಲ್ಲಿ 24x7 ಸಮಯ ಬಂದೋಬಸ್ತ್ ಮಾಡಲಾಗುವುದು. ಕೊನೆಯ ದಿನ ನಡೆಯುವ ಜಂಬೂ ಸವಾರಿ ಮೆರವಣಿಗೆ ವೇಳೆ ಒಂದು ಆರ್‌ಪಿಎಫ್ ತುಕಡಿಯನ್ನು ನಿಯೋಜನೆ ಮಾಡಲಾಗಿದೆ ಎಂದು ಸೀಮಾ ಲಾಟ್ಕರ್ ಹೇಳಿದರು.

26 ಆಂಬುಲೆನ್ಸ್, 32 ಅಗ್ನಿ ಶಾಮಕ ವಾಹನ ಸನ್ನದ್ಧ– ಮೈಸೂರು ಅರಮನೆ ಆವರಣ, ಅರಮನೆ ಗೇಟ್, ಜಂಬೂ ಸವಾರಿ ಮಾರ್ಗ, ಬನ್ನಿಮಂಟಪದ ಟಾರ್ಚ್ ಲೈಟ್ ಪರೇಡ್ ಆವರಣ ಸೇರಿದಂತೆ ಇತರೆಡೆ 26 ಆಂಬುಲೆನ್ಸ್ ಮತ್ತು 32 ಅಗ್ನಿ ಶಾಮಕ ದಳವನ್ನು ಸನ್ನದ್ಧ ಸ್ಥಿತಿಯಲ್ಲಿಡಲಾಗಿದೆ ಎಂದರು.

ಹಾಸಿಗೆ ಕಾಯ್ದಿರಿಸಲು ಸೂಚನೆ: ಏನಾದರೂ ಅಹಿತಕರ ಘಟನೆ ಸಂಭವಿಸಿದರೆ ಗಾಯಗೊಂಡವರನ್ನು ದಾಖಲು ಮಾಡಲು ನಗರದ ಎಲ್ಲಾ ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸೆ ಹಾಸಿಗೆಗಳನ್ನು ಕಾಯ್ದಿರಿಸುವಂತೆ ಸೂಚನೆ ನೀಡಲಾಗಿದೆ ಎಂದು ಹೇಳಿದರು.

43 ಪಬ್ಲಿಕ್ ಅಡ್ರೆಸ್ ಸಿಸ್ಟಂ– ದಸರಾ ಮಹೋತ್ಸವದ ಸಮಯದಲ್ಲಿ ಸಂಚಾರ ವಿಭಾಗದಿಂದ ಸೆಪ್ಟೆಂಬರ್ 22 ರಿಂದ ಅಕ್ಟೋಬರ್ 1ರವರೆಗೆ ನಗರದ ಎಲ್ಲಾ ಪ್ರಮುಖ ಜಂಕ್ಷನ್ ಮತ್ತು ಪ್ರವಾಸಿ ಸ್ಥಳಗಳ ಬಳಿ ಪಬ್ಲಿಕ್ ಅಡ್ರೆಸ್ ಸಿಸ್ಟಂ ಜೊತೆ ಟ್ರಾಫಿಕ್ ಪೊಲೀಸ್ ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗುವುದು ಎಂದರು.

ಜಂಬೂ ಸವಾರಿ ಮೆರವಣಿಗೆ ನಡೆಯುವ ಅಕ್ಟೋಬರ್ 2 ರಂದು ಜನ ಸಂದಣಿ ನಿಯಂತ್ರಣ ಹಾಗೂ ಸಾರ್ವಜನಿಕರಿಗೆ ಸೂಚನೆಗಳನ್ನು ನೀಡಲು ಅರಮನೆಯ ಎಲ್ಲಾ ದ್ವಾರಗಳು, ಜಂಬೂ ಸವಾರಿ ಮಾರ್ಗ, ಕೆ.ಆರ್.ವೃತ್ತ, ಆಯುರ್ವೇದಿಕ್ ವೃತ್ತ, ಆರ್‌ಎಂಸಿ ಸರ್ಕಲ್, ಹೈವೆ ಸರ್ಕಲ್, ಬನ್ನಿಮಂಟಪದ ಮೈದಾನ ಸೇರಿದಂತೆ ಇತರೆಡೆ 33 ಪಬ್ಲಿಕ್ ಅಡ್ರೆಸ್‌ನೊಂದಿಗೆ ಸಿವಿಲ್ ಪೊಲೀಸರನ್ನು ನಿಯೋಜನೆ ಮಾಡಲಾಗುವುದು ಎಂದು ಮಾಹಿತಿ ನೀಡಿದರು. ಪತ್ರಿಕಾಗೋಷ್ಠಿಯಲ್ಲಿ ಡಿಸಿಪಿಗಳಾದ ಬಿಂದುಮಣಿ ಹಾಗೂ ಸುಂದರ್ ರಾಜ್ ಉಪಸ್ಥಿತರಿದ್ದರು.

ಸೋಷಿಯಲ್ ಮೀಡಿಯಾದಲ್ಲಿ ಸುಳ್ಳು ಸುದ್ದಿ ಪೋಸ್ಟ್ ಮಾಡಿದರೆ ಹುಷಾರ್...

ಮೈಸೂರು ದಸರಾ ಮಹೋತ್ಸವಕ್ಕೆ ಸಂಬಂಧಿಸಿದಂತೆ ಸೋಷಿಯಲ್ ಮೀಡಿಯಾ ಮೂಲಕ ಜನರಿಗೆ ತಪ್ಪು ಮಾಹಿತಿ ನೀಡಿ, ಸುಳ್ಳು ಸುದ್ದಿ ಹರಡಿ, ಅವರಲ್ಲಿ ಭಯ ಹುಟ್ಟಿಸುವುದು, ಹಳೆ ವಿಡಿಯೋಗಳನ್ನು ಪೋಸ್ಟ್ ಮಾಡಿದರೆ ಅವರ ವಿರುದ್ಧ ಮುಲಾಜಿಲ್ಲದೆ ಕ್ರಮ ಕೈಗೊಳ್ಳಲಾಗುವುದು ಎಂದು ಸೀಮಾ ಲಾಟ್ಕರ್ ಎಚ್ಚರಿಸಿದ್ದಾರೆ. ಈ ಸಂಬಂಧ ಸೋಷಿಯಲ್ ಮೀಡಿಯಾ ಮಾನಿಟರಿಂಗ್ ಸೆಲ್‌ನಲ್ಲಿ 52 ಪೊಲೀಸರ ತಂಡ ರಚನೆ ಮಾಡಲಾಗಿದೆ. ಇವರು ದಸರಾಗೆ ಸಂಬಂಧಿಸಿದಂತೆ ಸೋಷಿಯಲ್ ಮೀಡಿಯಾದಲ್ಲಿ ಅನಾವಶ್ಯಕ ವಿಚಾರಗಳನ್ನು ಪೋಸ್ಟ್ ಮಾಡಲಾಗುತ್ತಿದೆಯೇ ಎಂದು ಹದ್ದಿನ ಕಣ್ಣಿರಿಸಿರುತ್ತಾರೆ ಎಂದರು.

ಹಳೆ ಕಟ್ಟಡ, ಮರ ಏರುವಂತಿಲ್ಲ: ಜಂಬೂ ಸವಾರಿ ಮೆರವಣಿಗೆ ಸಾಗುವ 4.5 ಕಿಲೋ ಮೀಟರ್ ಅಂತರದಲ್ಲಿ ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳು ಹಾಗೂ ಮರಗಳ ಮೇಲೆ ಕುಳಿತು ದಸರಾ ಜಂಬೂ ಸವಾರಿ ವೀಕ್ಷಣೆ ಮಾಡದಂತೆ ಎಲ್ಲಾ ರೀತಿಯ ಕ್ರಮ ಕೈಗೊಳ್ಳಲಾಗಿದೆ ಎಂದು ಸೀಮಾ ಲಾಟ್ಕರ್ ಮಾಹಿತಿ ನೀಡಿದರು. ಬನ್ನಿಮಂಟಪದಲ್ಲಿ ನಡೆಯುವ ಏರ್ ಶೋ ಮತ್ತು ಡ್ರೋನ್ ಶೋ ವೀಕ್ಷಣೆಗೆ ಪಾಸ್ ವಿತರಣೆ ಮಾಡಲಾಗುತ್ತದೆ. ಪಾಸ್ ಇದ್ದವರಿಗೆ ಮಾತ್ರ ಒಳಗೆ ಪ್ರವೇಶ ನೀಡಲಾಗುವುದು ಎಂದರು. ಕಳೆದ ವರ್ಷ ದೇವರಾಜ ಅರಸ್ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ನಿರ್ಬಂಧ ವಿಧಿಸಲಾಗಿತ್ತು. ಆದರೆ ಈ ಬಾರಿ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಲಾಡ್ಜ್‌ಗಳಿಗೆ ಅನಿರೀಕ್ಷಿತ ಭೇಟಿ, ತಪಾಸಣೆ

ಮೈಸೂರಿನ ಲಾಡ್ಜ್‌ಗಳನ್ನು ಅನಿರೀಕ್ಷಿತ ತಪಾಸಣೆ ನಡೆಸಿ ಅನುಮಾನಾಸ್ಪದ ವ್ಯಕ್ತಿಗಳನ್ನು ವಿಚಾರಣೆ ಮಾಡಲಾಗುವುದು ಎಂದು ಸೀಮಾ ಲಾಟ್ಕರ್ ತಿಳಿಸಿದರು. ರೈಲ್ವೆ ನಿಲ್ದಾಣ ಮತ್ತು ಬಸ್ ನಿಲ್ದಾಣದಲ್ಲಿ ದಿನದ 24 ಗಂಟೆಯೂ ನುರಿತ ಅಪರಾಧ ವಿಭಾಗದ ಸಿಬ್ಬಂದಿ ಗಸ್ತಿನಲ್ಲಿರುತ್ತಾರೆ. ಆ ವೇಳೆ ಅನುಮಾನಾಸ್ಪದ ವ್ಯಕ್ತಿಗಳನ್ನು ವಿಚಾರಣೆ ಮಾಡಲಾಗುವುದು ಎಂದರು. ಯಾವುದಾದರೂ ಅಹಿತಕರ ಘಟನೆ ನಡೆದರೆ ತಕ್ಷಣ ಪೊಲೀಸರು ಬರಲು ಗಸ್ತು ವಾಹನ ವ್ಯವಸ್ಥೆ ಕಲ್ಪಿಸಲಾಗಿದೆ ಎಂದರು. ರೌಡಿ ಪರೇಡ್ ಮಾಡಿ ಯಾವುದೇ ಸಮಾಜಘಾತುಕ ಚಟುವಟಿಕೆಯಲ್ಲಿ ತೊಡಗದಂತೆ ಎಚ್ಚರಿಕೆ ನೀಡಲಾಗುವುದು

ತುತ್ತೂರಿ ನಿಷೇಧ: ಮೈಸೂರು ನಗರದಲ್ಲಿ ಸಾರ್ವಜನಿಕರಿಗೆ ಕಿರಿಕಿರಿ ಉಂಟು ಮಾಡುವ ವುವುಜೆಲ್ಲಾ ಅಥವಾ ತುತ್ತೂರಿ ಮಾರಾಟ ಹಾಗೂ ಬಳಕೆಯನ್ನು ನಿಷೇಧಿಸಲಾಗಿದೆ. ಯಾರಾದರೂ ಇದನ್ನು ಮಾರಾಟ ಮಾಡಿದರೆ ಅಥವಾ ಬಳಕೆ ಮಾಡಿದರೆ ಕರ್ನಾಟಕ ಪೊಲೀಸ್ ಕಾಯ್ದೆ 1963 ಸೆಕ್ಷನ್ 92 (0) ಪ್ರಕಾರ ಹಾಗೂ ಬಿಎನ್ ಎಸ್ 2023 ಸೆಕ್ಷನ್ 270 ಪ್ರಕಾರ ಪ್ರಕರಣ ದಾಖಲಿಸಲಾಗುವುದು ಎಂದು ಸೀಮಾ ಲಾಟ್ಕರ್ ಎಚ್ಚರಿಸಿದರು.

ಮಠಾಧೀಶರು ಧ್ವನಿ ಎತ್ತಬೇಕು

ಸಚಿವರೇ ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ ಎಂದು ಹೇಳಿದರು.

ಹಿಂದೂ ಧರ್ಮದ ಜಾತಿ ಹಾಗೂ ಉಪ ಜಾತಿಗಳನ್ನು ಬಿಡಿ ಬಿಡಿಯಾಗಿ ತೋರಿಸಿ, ಕ್ರಿಶ್ಚಿಯನ್ ಸಮುದಾಯದವರ ಸಂಖ್ಯೆ ಹೆಚ್ಚು ಮಾಡುವುದು ಇವರ ಷಡ್ಯಂತ್ರ. ಈ ಮೂಲಕ ಹಿಂದೂ ಧರ್ಮವನ್ನು ಛಿದ್ರಗೊಳಿಸುತ್ತಿರುವ ಸಿದ್ದರಾಮಯ್ಯ ಅವರ ಈ ವರ್ತನೆ ವಿರುದ್ಧ ಹಿಂದೂ ಧರ್ಮದ ಎಲ್ಲಾ ಮಠಾಧೀಶರು ಧ್ವನಿ ಎತ್ತಬೇಕು ಎಂದು ಮನವಿ ಮಾಡಿದರು. ಕುರುಬ ಸಮುದಾಯವನ್ನು ಎಸ್‌ಟಿಗೆ ಸೇರಿಸುವ ಸರ್ಕಾರದ ನಿಲುವಿಗೆ ಆಕ್ರೋಶ ವ್ಯಕ್ತಪಡಿಸಿದರು. ಯಾವುದೇ ಜಾತಿಯನ್ನು ಹಿಂದುಳಿದ ವರ್ಗ ಅಥವಾ ಪರಿಶಿಷ್ಟ ವರ್ಗಕ್ಕೆ ಸೇರಿಸಲು ಆ ಸಮುದಾಯ ಸಾಮಾಜಿಕ, ಶೈಕ್ಷಣಿಕ, ಆರ್ಥಿಕವಾಗಿ ಹಿಂದುಳಿದಿರಬೇಕು. ಈಗ ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಕುಲಶಾಸ್ತ್ರ ಅಧ್ಯಯನ ಮಾಡಬೇಕು. ಕುರುಬ ಸಮುದಾಯ ಇದರಲ್ಲಿ ಅರ್ಹತೆ ಪಡೆದರೆ ಮಾತ್ರ ಎಸ್‌ಟಿಗೆ ಸೇರಿಸಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಗೋವಾ ಕ್ಯಾಸಿನೋದಲ್ಲಿ ಜನರಿಗೆ ಕುಡಿಸಿ ನಾನು ಶಾಸಕನಾಗಿಲ್ಲ

ಮದ್ದೂರು ಶಾಸಕ ಉದಯ ಅವರಂತೆ ನಾನು ಜನರಿಗೆ ಗೋವಾ ಕ್ಯಾಸಿನೋದಲ್ಲಿ ಇಸ್ಪೀಟ್ ಆಡಿಸಿ, ಕುಡಿಸಿ ಶಾಸಕನಾಗಿಲ್ಲ ಎಂದು ಪ್ರತಾಪ್ ಸಿಂಹ ತಿರುಗೇಟು ನೀಡಿದರು. ತನ್ನನ್ನು ಪೋರ್ಕಿ ಎಂದು ಜರಿದ ಉದಯ್ ಅವರಿಗೆ ಟಾಂಗ್ ನೀಡಿದ ಪ್ರತಾಪ್ ಸಿಂಹ ಅವರು, ಕ್ಯಾಸಿನೋದ ಇಸ್ಪೀಟ್ ಟೇಬಲ್‌ನಲ್ಲಿ ಕುಡಿದ ಮತ್ತಿನಲ್ಲಿ ಮಾತನಾಡಿದಂತೆ ಹೇಳಿಕೆ ನೀಡಿದ್ದಾರೆ ಎಂದು ಕಿಡಿಕಾರಿದರು.

ಶಾಸಕ ಉದಯ್ ಅವರಿಗೆ ಕ್ಯಾಸಿನೋ ಟೇಬಲ್‌ಗೂ, ಇಸ್ಪೀಟ್ ಟೇಬಲ್‌ಗೂ, ಪತ್ರಿಕಾಗೋಷ್ಠಿ ಟೇಬಲ್‌ಗೂ ಯಾವುದೇ ವ್ಯತ್ಯಾಸ ಗೊತ್ತಿಲ್ಲದಂತೆ ಮಾತನಾಡಿದ್ದಾರೆ ಎಂದು ಪ್ರತಾಪ್ ಸಿಂಹ ಗೇಲಿ ಮಾಡಿದರು.

ಗಣೇಶ ಮೆರವಣಿಗೆ ವೇಳೆ ಮದ್ದೂರಿನಲ್ಲಿ ಇದ್ದಿದ್ದರೆ ಜನರು ಅವರಿಗೆ ತಕ್ಕ ಪಾಠ ಕಲಿಸುತ್ತಿದ್ದರು. ಮೊದಲು ಜವಾಬ್ದಾರಿ ಅರಿತು ಮಾತನಾಡಬೇಕು ಎಂದು ಸಲಹೆ ನೀಡಿದರು.

ನಿವೇಶನ ಹರಾಜಿಗೆ ಎಂಡಿಎ ಸಿದ್ಧತೆ

ಈ ಯಶಸ್ವಿ ಪ್ರಕ್ರಿಯೆಯಿಂದ ಪಾರದರ್ಶಕತೆ, ಆದಾಯ ಹೆಚ್ಚಳ, ನಿವೇಶನಗಳ ಅಕ್ರಮ ಮಾರಾಟಕ್ಕೆ ಕಡಿವಾಣ, ಮಧ್ಯವರ್ತಿಗಳ ಹಾವಳಿ ನಿಯಂತ್ರಿಸಲು ಸಹಕಾರಿಯಾಗಿದೆ. ಹಾಗಾಗಿ ದಸರಾ ನಂತರ ಇನ್ನೂ 400 ನಿವೇಶನಗಳನ್ನು ಇ–ಹರಾಜು ಮೂಲಕ ಮಾರಾಟ ಮಾಡಲು ಸಿದ್ಧತೆ ಮಾಡುತ್ತಿದ್ದೇವೆ. ಇ–ಹರಾಜು ಪ್ರಕ್ರಿಯೆಯನ್ನು ಎರಡು ಹಂತದಲ್ಲಿ ತಲಾ 200 ನಿವೇಶನಗಳಂತೆ ವಿಲೇವಾರಿ ಮಾಡಲಾಗುವುದು ಎಂದರು.

6 ನಿವೇಶನ ಹಂಚಿಕೆ ರದ್ದು: ಮೊದಲ ಇ–ಹರಾಜಿನಲ್ಲಿ, ಎಂಡಿಎ 200 ಮೂಲೆ, ಮಧ್ಯಂತರ ಮತ್ತು ಪ್ರೀಮಿಯಂ ನಿವೇಶನಗಳ ಹರಾಜು ನಡೆಸಿತ್ತು. ಇವುಗಳಲ್ಲಿ 45 ನಿವೇಶನಗಳಿಗೆ ಒಬ್ಬರೇ ಬಿಡ್ಡುದಾರರಾಗಿದ್ದರು. ಹರಾಜು ನಿಯಮಗಳ ಪ್ರಕಾರ, ಇವುಗಳನ್ನು ಮಾನ್ಯ ಮಾಡಲಾಗದು. ಒಟ್ಟು 108 ನಿವೇಶನಗಳು ಯಶಸ್ವಿಯಾಗಿ ವಿಲೇ ಆಗಿವೆ. ಯಶಸ್ವಿ ಬಿಡ್‌ದಾರರಿಗೆ ಬಿಡ್ ಮೊತ್ತದ ಶೇ. 25 ರಷ್ಟು ಹಣ ಪಾವತಿಸಲು ಮೂರು ದಿನಗಳ ಕಾಲಾವಕಾಶ ನೀಡಲಾಗಿತ್ತು. ಆದಾಗ್ಯೂ, 6 ಮಂದಿ ಬಿಡ್ಡುದಾರರು ಕಡ್ಡಾಯ ಆರಂಭಿಕ ಪಾವತಿಯನ್ನು ಮಾಡುವಲ್ಲಿ ವಿಫಲರಾಗಿರುವುದರಿಂದ ಅವರ ನಿವೇಶನಗಳ ಹಂಚಿಕೆಯನ್ನು ರದ್ದುಗೊಳಿಸಲಾಗಿದೆ ಎಂದು ರಕ್ಷಿತ್ ತಿಳಿಸಿದ್ದಾರೆ.

ಆ ಪೈಕಿ ವಿಜಯನಗರ 4ನೇ ಹಂತ, 2ನೇ ಘಟ್ಟದಲ್ಲಿ 20x30 ಅಡಿ (600 ಚದರ ಅಡಿ) ನಿವೇಶನ ಅಚ್ಚರಿ ಬೆಲೆ 2 ಕೋಟಿ (ಪ್ರತಿ ಚದರಡಿಗೆ 33,333 ರೂ.)ಗೆ ಬಿಡ್ ಆಗಿತ್ತು. ಈ ಬಿಡ್ಡುದಾರನು ತನ್ನ ತಾಯಿ ಮೃತಪಟ್ಟಿರುವ ಕಾರಣ, ಆರಂಭಿಕ ಹಣ ಪಾವತಿಸಲು ಹೆಚ್ಚಿನ ಕಾಲಾವಕಾಶ ಕೋರಿದ್ದರು. ಆದರೆ ನಂತರ ಕುಟುಂಬದ ಒತ್ತಡದಿಂದಾಗಿ ತಾನು ಮುಂದುವರಿಯಲು ಸಾಧ್ಯವಾಗಲಿಲ್ಲ ಎಂದು ತಿಳಿಸಿದ ಕಾರಣ ಅವರ ಹಂಚಿಕೆಯನ್ನು ರದ್ದುಗೊಳಿಸಲಾಗಿದೆ. ಸೈಟ್‌ಗಳನ್ನು ಹರಾಜಿನಲ್ಲಿ ಕೂಗಿದ್ದ ಇತರ ಇಬ್ಬರು ಬಿಡ್ಡುದಾರರು, ಆರಂಭಿಕ ಹಣ ಪಾವತಿ ಮಾಡುವ ಮೊದಲೇ ನಿಧನರಾಗಿದ್ದು, ಮೃತ ವ್ಯಕ್ತಿಗಳ ಹೆಸರಿನಲ್ಲಿ ಬೇರೆ ಯಾರೂ ಬಿಡ್ಡು ಮಾಡಲು ನಿಯಮದಲ್ಲಿ ಅವಕಾವಿಲ್ಲದಿರುವುದರಿಂದ ಆ ಹಂಚಿಕೆಗಳನ್ನು ರದ್ದುಗೊಳಿಸಲಾಗಿದೆ. ಉಳಿದ ಮೂವರು ಬಿಡ್ಡರ್‌ಗಳು ಸರಿಯಾದ ಕಾರಣವನ್ನು ನೀಡದೆ, ಇರುವುದರಿಂದ ಹಣವನ್ನೂ ಪಾವತಿ ಮಾಡದ ಕಾರಣ ಅವರ ನಿವೇಶನ ಹಂಚಿಕೆಯೂ ಅಮಾನ್ಯವಾಗಿದೆ. ಈ ಆರು ಸೈಟ್‌ಗಳನ್ನು, ಈಗ ಹರಾಜು ಪಟ್ಟಿಗೆ ಮತ್ತೆ ಸೇರಿಸಲಾಗುತ್ತಿದೆ ಎಂದರು.

ಸಂಪೂರ್ಣ ಡಿಜಿಟಲ್: ನಾವು ದಸರಾ ಮಹೋತ್ಸವದ ನಂತರ ವಿವಿಧ ಪ್ರದೇಶಗಳಲ್ಲಿನ 200 ಸೈಟ್‌ಗಳನ್ನು ಹರಾಜು ಮಾಡಲು ಸಿದ್ಧತೆ ನಡೆಸುತ್ತಿದ್ದೇವೆ. ನಂತರ, ರದ್ದಾದ ಆರು ಸೈಟ್‌ಗಳು ಸೇರಿದಂತೆ ಇನ್ನೂ 200 ಸೈಟ್‌ಗಳನ್ನು ಹರಾಜು ಮಾಡುತ್ತೇವೆ. ಆಸಕ್ತ ಖರೀದಿದಾರರು ಎಂಡಿಎ ಅಧಿಕೃತ ವೆಬ್‌ಸೈಟ್‌ನಲ್ಲಿ ನೋಂದಾಯಿಸಿಕೊಳ್ಳಬಹುದು.

ಅರ್ಜಿ ಸುಪ್ರೀಂಕೋರ್ಟ್‌ನಲ್ಲೂ ವಜಾ

ಬಗ್ಗೆಯಾದರೂ ಭೇದ ಮಾಡಲು ಹೇಗೆ ಸಾಧ್ಯ ಎಂದು ಅಸಮಾಧಾನ ವ್ಯಕ್ತಪಡಿಸಿ, ಅರ್ಜಿ ವಜಾಗೊಳಿಸಿತು. ಸೆಪ್ಟೆಂಬರ್ 22ರಂದು ಮೈಸೂರು ದಸರಾ ಮಹೋತ್ಸವ ಉದ್ಘಾಟನೆ ಕಾರ್ಯಕ್ರಮ ಇರುವುದರಿಂದ ಪ್ರಕರಣದ ತುರ್ತು ವಿಚಾರಣೆ ಕೋರಿ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ನ್ಯಾಯಪೀಠದ ಮುಂದೆ ಪ್ರಸ್ತಾಪ ಮಂಡಿಸಿದ್ದ ಹಿನ್ನೆಲೆಯಲ್ಲಿ ಇಂದು ಅರ್ಜಿಯನ್ನು ವಿಚಾರಣೆಗೆ ತೆಗೆದುಕೊಳ್ಳಲಾಗಿತ್ತು.

ಇದಕ್ಕೂ ಮುನ್ನ, ಕರ್ನಾಟಕ ಹೈಕೋರ್ಟ್‌ನಲ್ಲಿ ಬಾನು ಮುಷ್ತಾಕ್ ದಸರಾ ಉದ್ಘಾಟನೆ ವಿರೋಧಿಸಿ ಬಿಜೆಪಿ ಮಾಜಿ ಸಂಸದ ಪ್ರತಾಪ್ ಸಿಂಹ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಪೀಠ, ದಸರಾ ಉದ್ಘಾಟನೆ ವಿಚಾರದಲ್ಲಿ ಯಾವುದೇ ಹಕ್ಕು ಉಲ್ಲಂಘನೆ ಕಂಡುಬರುತ್ತಿಲ್ಲ ಎನ್ನುವ ಮೂಲಕ ಕರ್ನಾಟಕ ಸರ್ಕಾರದ ನಿರ್ಧಾರದಲ್ಲಿ ಮಧ್ಯಪ್ರವೇಶಿಸಲು ನಿರಾಕರಿಸಿತ್ತು

ತೀರ್ಪು ಸ್ವಾಗತಿಸಿದ ಸಿಎಂ ಸಿದ್ದರಾಮಯ್ಯ

ಬೆಂಗಳೂರು, ಸೆ.19(ಕೆಎಂಶಿ)–ಮೈಸೂರು ದಸರಾ ಉದ್ಘಾಟನೆಗೆ ಸಾಹಿತಿ ಬಾನು ಮುಷ್ತಾಕ್ ಅವರನ್ನು ಆಹ್ವಾನಿಸಿದ ರಾಜ್ಯ ಸರ್ಕಾರದ ನಿಲುವಿನ ವಿರುದ್ಧ ಸಲ್ಲಿಕೆಯಾಗಿದ್ದ ಅರ್ಜಿಯನ್ನು ವಜಾಗೊಳಿಸಿರುವ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಸ್ವಾಗತಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಮೈಸೂರು ದಸರಾ ಧಾರ್ಮಿಕ ನೆಲೆಗಟ್ಟಿಗೆ ಸೀಮಿತವಾಗಿಸಲು ಸಾಧ್ಯವಿಲ್ಲ, ಜಾತಿ, ಧರ್ಮ ಮೀರಿ ನಾಡಿನ ಸಮಸ್ತ ಜನತೆ ಸಂಭ್ರಮಿಸುವ ಹಬ್ಬ ಇದಾಗಿದೆ

ಇದರ ವಿರುದ್ಧ ವ್ಯವಸ್ಥಿತ ಅಪಪ್ರಚಾರ ನಡೆಸಿ, ಸಮಾಜ ಒಡೆಯುವ ಪ್ರಯತ್ನ ಮಾಡಲಾಯಿತು, ಸುಪ್ರೀಂಕೋರ್ಟ್ ತೀರ್ಪಿನಿಂದ ಸರ್ಕಾರದ ನಿಲುವಿಗೆ ಮನ್ನಣೆ ದೊರೆತಿದೆ. ಜಾತಿ, ಧರ್ಮಗಳ ವೈಷಮ್ಯ ಬಿತ್ತುವ ವಿಚ್ಛಿದ್ರಕಾರಿ ಮನಸುಗಳಿಗೆ ಇನ್ನಾದರೂ ತಾಯಿ ಚಾಮುಂಡೇಶ್ವರಿ ಸದ್ಬುದ್ಧಿ ನೀಡಲಿ ಎಂದರು.

ಮೈಸೂರು ದಸರಾ ಮಹೋತ್ಸವ-2025

ಸೆ.22 ರಿಂದ 9 ದಿನ ದಸರಾ ಪುಸ್ತಕ ಮೇಳ

● ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನದಲ್ಲಿ ಆಯೋಜನೆ ● ನಿತ್ಯವೂ ಸಾಹಿತಿಗಳೊಂದಿಗೆ ಸಂವಾದ, ಸೆಲ್ಫಿ ವ್ಯವಸ್ಥೆ



ಮೈಸೂರಿನ ಕಲಾಮಂದಿರದ ಸುಚಿತ್ರಾ ಆರ್ಟ್ ಗ್ಯಾಲರಿಯಲ್ಲಿ ದಸರಾ ಪುಸ್ತಕ ಮೇಳ ಕುರಿತಾಗಿ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ಸುದ್ದಿಗೋಷ್ಠಿ ನಡೆಸಿದ ನಂತರ ದಸರಾ ಪುಸ್ತಕ ಮೇಳದ ಪೋಸ್ಟರ್ ಬಿಡುಗಡೆ ಮಾಡಿದರು.

ಮೈಸೂರು, ಸೆ.19(ಎಂಕೆ)- ನಾಡ ಹಬ್ಬ ಮೈಸೂರು ದಸರಾ ಮಹೋತ್ಸವ-2025ರ 'ದಸರಾ ಪುಸ್ತಕ ಮೇಳ'ವು ಬೂಕರ್ ಪ್ರಶಸ್ತಿ ವಿಜೇತರಾದ ಸಾಹಿತಿ ಬಾನು ಮುಷ್ತಾಕ್ ಅವರ ಬದುಕು-ಬರಹದ 'ಬುಕರ್ ಬಾನು' ಕೃತಿ ಲೋಕಾರ್ಪಣೆಯೊಂದಿಗೆ, ಸಾಹಿತಿಗಳ ಜೊತೆಗೆ ಸೆಲ್ಫಿ, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ 28 ಪುಸ್ತಕಗಳ ಬಿಡುಗಡೆಗೆ ವೇದಿಕೆಯಾಗಲಿದೆ ಎಂದು ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ತಿಳಿಸಿದರು.

ಮೈಸೂರಿನ ಕಲಾಮಂದಿರದ ಸುಚಿತ್ರಾ ಆರ್ಟ್ ಗ್ಯಾಲರಿಯಲ್ಲಿ ಪುಸ್ತಕ ಮೇಳ ಕುರಿತಾಗಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿದ ಅವರು, ಸೆ.22 ರಿಂದ ಸೆ.30ರವರೆಗೆ 9 ದಿನಗಳ ಕಾಲ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನದಲ್ಲಿ ದಸರಾ ಪುಸ್ತಕ ಮೇಳ ನಡೆಯಲಿದ್ದು, ಹಲವು ವಿಶೇಷತೆಗಳಿಂದ ಪುಸ್ತಕ ಪ್ರೇಮಿಗಳನ್ನು ಒಂದೆಡೆ ಸೇರಿಸುವ ನಿಟ್ಟಿನಲ್ಲಿ ಆಯೋಜನೆಗೊಳ್ಳುತ್ತಿದೆ ಎಂದರು.

ಚಾಮುಂಡಿಬೆಟ್ಟದಲ್ಲಿ ನಡೆಯುವ ನಾಡ ಹಬ್ಬ ದಸರಾ ಉದ್ಘಾಟನೆ ಸಂದರ್ಭದಲ್ಲಿಯೇ ಕನ್ನಡ ಪುಸ್ತಕ ಪ್ರಾಧಿಕಾರ ಹೊರ ತಂದಿರುವ ಲೇಖಕ ಶಿವಾನಂದ ರಚಿತ 'ಬುಕರ್ ಬಾನು'(ಬಾನು ಮುಷ್ತಾಕ್ ಅವರ ಬದುಕು-ಬರಹ) ಕೃತಿ ಲೋಕಾರ್ಪಣೆಯಾಗಲಿದ್ದು, ಸಂಜೆ 5 ಗಂಟೆಗೆ ಪುಸ್ತಕ ಮೇಳವನ್ನು ಮುಖ್ಯಮಂತ್ರಿಗಳು ಉದ್ಘಾಟಿಸಲಿದ್ದಾರೆ. ಪುಸ್ತಕ ಮೇಳದಲ್ಲಿ ಸಾಂಸ್ಕೃತಿಕ ವೇದಿಕೆ ಸಹಿತ ಸುಮಾರು 90ಕ್ಕೂ ಹೆಚ್ಚು ಮಳಿಗೆಗಳು ಇರಲಿದ್ದು, ಇದುವರೆಗೆ 150 ಅರ್ಜಿಗಳು ಬಂದಿವೆ. ಮುಖ್ಯವಾಗಿ ಸ್ಥಳೀಯರಿಗೆ ಅವಕಾಶ ನೀಡಲಿದ್ದು, ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ ಪ್ರಕಾಶಕರು ಆಗಮಿಸಲಿದ್ದಾರೆ. ಓದುಗರ ಆಸಕ್ತಿಯನ್ನು ಕೆರಳಿಸುವಂತಹ 50 ಸಾವಿರಕ್ಕೂ ಹೆಚ್ಚು ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ ಇರಲಿದೆ ಎಂದು ತಿಳಿಸಿದರು.

ಸಾಹಿತಿಗಳೊಂದಿಗೆ ಸೆಲ್ಫಿ: ಪುಸ್ತಕ ಪ್ರೇಮಿಗಳು ತಮ್ಮ ನೆಚ್ಚಿನ ಸಾಹಿತಿಗಳ ಆಟೋಗ್ರಾಫ್ ಪಡೆದು ಅವರೊಂದಿಗೆ ಸೆಲ್ಫಿ ತೆಗೆದುಕೊಳ್ಳಲು ಸೆಲ್ಫಿಸ್ಪಾಟ್ ಇರಲಿದ್ದು, ಸೆ.23 ರಂದು ಸಾಹಿತಿಗಳಾದ ಡಾ.ಎಲ್.ಎನ್.ಮುಕುಂದರಾಜ್ ಮತ್ತು ವಸುಧೇಂದ್ರ, ಸೆ.24 ರಂದು ಲೇಖಕಿ ಡಾ.ಸುಕನ್ಯಾ ಮಾರುತಿ ಮತ್ತು ಡಾ.ರಾಜಪ್ಪ ದಳವಾಯಿ, ಸೆ.25 ರಂದು ನಗೆ ಬರಹಗಾರ ಎಂ.ಎಸ್.ನರಸಿಂಹಮೂರ್ತಿ, ಸೆ.26 ರಂದು ಲೇಖಕಿ ಡಾ.ಮಲ್ಲಿಕಾ ಘಂಟಿ, ಸೆ.27 ರಂದು ನಟ ಹಾಗೂ ಲೇಖಕ ಶಂಕರ್ ಅಶ್ವಥ್, ಸೆ.28 ರಂದು ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ, ಸೆ.29 ರಂದು ಸಾಹಿತಿ ಡಾ.ಅರವಿಂದ ಮಾಲಗತ್ತಿ ಹಾಗೂ ಸೆ.30 ರಂದು ಹಿರಿಯ ಸಾಹಿತಿ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿ ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಸಾಂಸ್ಕೃತಿಕ ಕಾರ್ಯಕ್ರಗಳು: ಸೆ.23 ರಿಂದ ಸೆ.30 ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದ್ದು, ಮೊದಲ ದಿನ ಸಾಹಿತಿ ಬಾನು ಮುಷ್ತಾಕ್ ಬದುಕು ಬರಹ ಕುರಿತು ಚರ್ಚೆ ನಡೆದರೆ, ನಂತರದ ದಿನಗಳಲ್ಲಿ ಭಾವಗೀತೆ ಗಾಯನ, ಕವಿಗೋಷ್ಠಿ ಮತ್ತು ಕುಂಚ ಕಾವ್ಯ ಗಾಯನ, ಜನಪದ ಗೀತೆಗಳ ಗಾಯನ, ನನ್ನ ನೆಚ್ಚಿನ ಪುಸ್ತಕ ಓದು, ರಂಗಗೀತೆಗಳ ಗಾಯನ, ವಿಚಾರ ಸಂಕಿರಣ ಹಾಗೂ 'ಕಂಸವಧೆ' ಯಕ್ಷಗಾನ ಪ್ರಸಂಗ ಪ್ರದರ್ಶನ ಇರಲಿದೆ ಎಂದರು.

ದಸರಾ ಪುಸ್ತಕ ಮೇಳ ಸಮನ್ವಯ ಅಧಿಕಾರಿ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಮೈಸೂರು ವಿವಿ ಪ್ರಸಾರಾಂಗದ ನಿರ್ದೇಶಕ ಡಾ.ನಂಜಯ್ಯ ಹೊಂಗನೂರು, ಆಡಳಿತಾಧಿಕಾರಿ ಕೆ.ಬಿ.ಕಿರಣ್ ಸಿಂಗ್ ಸೇರಿದಂತೆ ಸಮಿತಿ ಸದಸ್ಯರಾದ ರಾಜಶೇಖರ್ ಕದಂಬ, ಎಂ.ಚಂದ್ರಶೇಖರ್, ಡಾ.ಮಹೇಶ್ ಚಿಕ್ಕಲೂರು, ಸುಚಿತ್ರಾ ಹೆಗ್ಡೆ, ವೈ.ನಾ.ಲೋಕೇಶ್, ಕೆ.ಎಸ್.ಶಿವರಾಂ, ರವಿನಂದನ್ ಹಾಗೂ ಪ್ರಮೋದ್ ಮತ್ತಿತರು ಉಪಸ್ಥಿತರಿದ್ದರು.

ಮೇಳದಲ್ಲಿ 28 ಪುಸ್ತಕಗಳ ಬಿಡುಗಡೆ...

ಪ್ರತಿದಿನ ಬೆಳಗ್ಗೆ 11.30ಕ್ಕೆ ದಸರಾ ಪುಸ್ತಕ ಮೇಳದಲ್ಲಿ ಪುಸ್ತಕಗಳ ಬಿಡುಗಡೆ ಕಾರ್ಯಕ್ರಮ ನಡೆಯಲಿದೆ. ಲೇಖಕಿ ಹೆಚ್.ನಾಗವೇಣಿ ರಚಿತ 'ಗಾಂಧಿ ಬಂದ', ಲೇಖಕ ಬಿ.ಶ್ರೀಪಾದ್ ಭಟ್ ರಚಿತ 'ವಿಮೋಚಕಿಯ ಕನಸುಗಳು(ಸಾವಿತ್ರಿಬಾಯಿ ಪುಲೆ ಬದುಕು-ಹೋರಾಟ)', ಚಿಂತಕ ರಹಮತ್ ತರೀಕೆರೆ ರಚಿತ 'ಕುಲುಮೆ', ಪುರುಷೋತ್ತಮ್ ಬಿಳಿಮಲೆ ರಚಿತ 'ಕಾಗೆ ಮುಟ್ಟಿದ ನೀರು', ಶ್ರೀಮತಿ ಸುಮಲತಾ ಗಡಿಯಪ್ಪ ರಚಿತ 'ಪುಟ್ಟನ ದಸರಾ', ಟಿ.ಎಸ್.ಭವ್ಯ ರಚಿತ 'ವಸುಂಧರೆ', ಡಿ.ನಳಿನಾ ರಚಿತ 'ಭಾವ-ಬೆಳಕು', ಸಣ್ಣರಾಮ ರಚಿತ 'ನಾನೆಂಬುದು ನಾನಲ್ಲ', ಮೇಟಿ ಮಲ್ಲಿಕಾರ್ಜುನ ರಚಿತ 'ನಾವು ನಮ್ಮನುಡಿ ', ಕೆ.ವೈ. ನಾರಾಯಣ ಸ್ವಾಮಿ ರಚಿತ 'ನೀವು ಕಾಣಿರೇ ಮತ್ತು ಮಲ್ಲಿಗೆ', ಡಾ.ನರಸಿಂಹಮೂರ್ತಿ ಹೂವಿನಹಳ್ಳಿ ರಚಿತ 'ತುಂಬಿ ಬಂದಿತ್ತ ಬೇಂದ್ರೆ ಕಾವ್ಯದ ಅಧ್ಯಯನ' ಕೃತಿ ಬಿಡುಗಡೆಯಾಗಲಿದೆ.

ಹಾಗೆಯೇ ಪ್ರೊ.ಜಿ.ಅಬ್ದುಲ್ ಬಷೀರ್ ರಚಿತ 'ಚಿಂತನ ಮತ್ತು ಮನದಂಗಳದ ಮಾತುಕತೆ', ಡಾ.ರೇಣುಕಾತಾಯಿ ರಚಿತ 'ದಿಲ್‌ಕಶ ಗಜಲ್' ಎಂ.ಆರ್.ಮಂಜುನಾಥ್ ರಚಿತ 'ಅಕ್ಷರಗಳ ಪಯಣ', ಅರ್ಚನಾ ಪಾಟೀಲ ರಚಿತ 'ಲಾಸ್ಟ್ ಚಾನ್ಸ್ ಬದಲಾಗೋಕೆ', ಡಾ.ಗುಣವಂತ ಮಂಜು ರಚಿತ 'ಪದ್ಯದಂಗಡಿ', ಪಿ.ಮಹೇಶ್ ಕುಮಾರ್ ರಚಿತ 'ಅವ್ವಕ್ಕೆ', ಅಶೋಕ ಪಿ.ಮಣಿ ರಚಿತ 'ಅಮೃತ ಸಿಂಚನ', ಪ್ರಮೋದ ಕರಣಂ ರಚಿತ 'ಹುಟ್ಟು ಸಾವು ಎರಡರ ನಡುವೆ', ಜ್ಯೋತಿ ಬದಾಮಿ ರಚಿತ 'ಕುಂಬಳಕಾಯಿ ಕಳ್ಳ ಅಂದ್ರೆ...!', ಕೆ.ಎಲ್.ವಿನೋದ್ ರಚಿತ 'ತುಪಾಕಿಯ ಪಿಸುಮಾತು', ಎಸ್.ಸುಂದರ್ ಕಲಿವೀರ್ ರಚಿತ 'ಜನರೊಡಲ ಜಂಗಮ', ವಸು ವತ್ಸಲೆ ರಚಿತ 'ಮನಸೇ ಥ್ಯಾಂಕ್ಯೂ', ಆರ್.ಸದಾಶಿವಯ್ಯ ಜರಗನಹಳ್ಳಿ ರಚಿತ 'ಕಾವ್ಯಧಾರೆ', ಹೆಚ್.ಎಸಿ.ಶ್ರೇಯಸ್ ರಚಿತ 'ನವಾಬ್ ಹೈದರ್ ಅಲಿಖಾನ್ ಬಹದ್ದೂರ್ ಒಂದು ದಂತ ಕಥೆ', ನವೀನ್ ಸೂರಿಂಜಿ ರಚಿತ 'ಸತ್ಯೊಲು ಶ್ರಮಿಕರ ಜನಪದ ಐತಿಹ್ಯ', ಕಮಲಾ ರಾಜೇಶ್ ರಚಿತ 'ಮೈಸೂರು ದೊರೆಗಳು' ಹಾಗೂ 'ಮೈಸೂರು ಅರಸರು- ಒಂದು ಪದ್ಯ' ಕೃತಿಗಳು ಲೋಕಾರ್ಪಣೆಗೊಳ್ಳಲಿವೆ ಎಂದು ವಿವರಿಸಿದರು.

ನಗರದೆಲ್ಲೆಡೆ ಸಂಚರಿಸಲಿದೆ ಪುಸ್ತಕ ಜಾಗೃತಿ ರಥ...!

ಪುಸ್ತಕ ಪ್ರೇಮಿಗಳ ಗಮನ ಸೆಳೆಯುವ ನಿಟ್ಟಿನಲ್ಲಿ ಮೈಸೂರು ನಗರದಾದ್ಯಂತ ಸಂಚರಿಸಲು ನಾಳೆ(ಸೆ.20) ಬೆಳಗ್ಗೆ 11 ಗಂಟೆಗೆ ಮಾನಸ ಗಂಗೋತ್ರಿಯಲ್ಲಿರುವ ಕುವೆಂಪು ಪ್ರತಿಮೆ ಮುಂಭಾಗದಿಂದ ಪುಸ್ತಕ ಜಾಗೃತ ರಥವು ಸಂಚರಿಸಲಿದ್ದು, ಜಿಲ್ಲಾಧಿಕಾರಿಗಳು ಚಾಲನೆ ನೀಡಲಿದ್ದಾರೆ. ಈ ರಥವನ್ನು ಪ್ರಮುಖ ಏರಿಯಾಗಳಲ್ಲಿ ಸ್ವಾಗತಿಸುವ ಕಾರ್ಯಕ್ರಮಗಳು ನಡೆಯಲಿದೆ. ದಸರಾ ಎಂದರೆ ಬರೀ ಹಾಡು-ಕುಣಿತವಲ್ಲ ಸಾಹಿತ್ಯವನ್ನು ಒಳಗೊಂಡಿದೆ ಎಂಬುದನ್ನು ತಿಳಿಸುವ ನಿಟ್ಟಿನಲ್ಲಿ ಪುಸ್ತಕ ಜಾಗೃತಿ ರಥ ಸಂಚರಿಸಿ, ಸಂಜೆ ವೇಳೆಗೆ ಮೇಳದ ಬಳಿ ಬಂದು ನಿಲ್ಲಲಿದೆ.

- ಮಾನಸ, ಅಧ್ಯಕ್ಷ, ಕನ್ನಡ ಪುಸ್ತಕ ಪ್ರಾಧಿಕಾರ

ದಸರಾ ಗಜಪಡೆಯ ಮುಂದೆ ರೀಲ್ಸ್: ದಂಡಾಸ್ತ್ರ ಪ್ರಯೋಗಕ್ಕೆ ಮುಂದಾದ ಅರಣ್ಯ ಇಲಾಖೆ

● ರಾತ್ರಿ ವೇಳೆ ಕಾರ್‌ನಲ್ಲಿ ಅರಮನೆ ಪ್ರವೇಶಿಸಿ ಆನೆಗಳ ಮುಂದೆ ಯುವತಿ ರೀಲ್ಸ್
● ವಿಡಿಯೋ ವೈರಲ್; ಕ್ರಮಕ್ಕೆ ಮುಂದಾದ ಅಧಿಕಾರಿಗಳು
● ಅರಣ್ಯ ಇಲಾಖೆ ಸಿಬ್ಬಂದಿಗಳಲ್ಲದೆ, ಸಂಬಂಧಪಡದ ಕೆಲವರಿಂದ ರೂಲ್ಸ್ ಬ್ರೇಕ್
● ರೀಲ್ಸ್ ಮಾಡಿದರೆ ಒಂದು ಸಾವಿರ ರೂ. ದಂಡ; ಮೂವರಿಂದ ದಂಡ ವಸೂಲಿ



ಅರಮನೆಯಲ್ಲಿ ಆನೆ ಮುಂದೆ ಯುವತಿಯ ರೀಲ್ಸ್

ಮೈಸೂರು, ಸೆ.19(ಎಂಟಿವೈ)- ದಸರಾ ಗಜಪಡೆಯ ಮುಂದೆ ರೀಲ್ಸ್ ಮಾಡಿ ಹುಚ್ಚಾಟ ಪ್ರದರ್ಶಿಸುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಯುವತಿಯೊಬ್ಬಳು ರಾತ್ರಿ ವೇಳೆ ಅರಮನೆ ಆವರಣ ಪ್ರವೇಶಿಸಿ ದಸರಾ ಆನೆಗಳ ಮುಂದೆ ರೀಲ್ಸ್ ಮಾಡಿರುವ ವಿಡಿಯೋ ವೈರಲ್ ಆದ ಬೆನ್ನಲ್ಲೇ ಇದೀಗ ಅರಣ್ಯ ಇಲಾಖೆ ದಂಡಾಸ್ತ್ರ ಪ್ರಯೋಗಕ್ಕೆ ಮುಂದಾಗಿದೆ.

ದಸರಾ ಗಜಪಡೆ ನೋಡಲು ರಾಜ್ಯದ ವಿವಿಧೆಡೆಯಿಂದ ಪ್ರತಿದಿನ ಆಗಮಿಸುವವರ ಸಂಖ್ಯೆ ಹೆಚ್ಚಾಗುತ್ತಲೇ ಇದ್ದು, ನಿಯಮ ಉಲ್ಲಂಘಿಸಿ ಆನೆಗಳ ಮುಂದೆ ಫೋಟೋ, ವಿಡಿಯೋ ಚಿತ್ರೀಕರಣ ಮಾಡಲು ಮುಗಿ ಬೀಳುತ್ತಿದ್ದಾರೆ. ಅದರಲ್ಲೂ ರೀಲ್ಸ್ ವ್ಯಾಮೋಹಕ್ಕೆ ಕಟ್ಟುಬಿದ್ದಿರುವ ಕೆಲವರು ಅರಣ್ಯ ಸಿಬ್ಬಂದಿಯ ಕಣ್ತಪ್ಪಿಸಿ, ಮಾವುತರು, ಕಾವಾಡಿಗಳ ಮಾತಿಗೂ ಮನ್ನಣೆ ನೀಡದೇ ಆನೆಗಳ ಮುಂದೆ ವಿಡಿಯೋ ಮಾಡಿಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ಅಪ್ಲೋಡ್ ಮಾಡುತ್ತಿದ್ದಾರೆ.

ಕಳೆದ ಐದಾರು ದಿನದ ಹಿಂದೆ ಮೈಸೂರಿನ ಯುವತಿಯೊಬ್ಬಳು ರಾತ್ರಿ ವೇಳೆ ಕಾರಿನಲ್ಲಿ ಅರಮನೆ ಆವರಣ ಪ್ರವೇಶಿಸಿದ್ದು, ದಸರಾ ಗಜಪಡೆಯ ಆರಕ್ಕೂ ಹೆಚ್ಚು ಆನೆಗಳ ಮುಂದೆ ಮೊಬೈಲ್ ಫ್ಲಾಶ್ ಬಳಸಿ ವಿಡಿಯೋ ಮಾಡಿಕೊಂಡು, ಅದನ್ನು ಸಾಮಾಜಿಕ ಜಾಲತಾಣಗಳಲ್ಲಿ ರೀಲ್ಸ್ ಆಗಿ ಅಪ್ಲೋಡ್ ಮಾಡಿದ್ದಾರೆ. ಇದನ್ನು ಕಂಡ ಸಾರ್ವಜನಿಕರು ರಾತ್ರಿ ವೇಳೆ ಆ ಯುವತಿಗೆ ಆನೆಗಳ ಮುಂದೆ ರೀಲ್ಸ್ ಮಾಡಲು ಅವಕಾಶ ನೀಡಿದವರು ಯಾರು? ಹಗಲು ವೇಳೆಯೇ ಫೋಟೋ ತೆಗೆಸಿಕೊಳ್ಳುವುದಕ್ಕೆ ಅವಕಾಶ ನೀಡದವರು ರಾತ್ರಿ ವೇಳೆ ಆನೆ ಬಳಿ ಹೇಗೆ ಬಿಟ್ಟರು ಎಂದು ಟೀಕಿಸಿ, ಆಕ್ರೋಶ ವ್ಯಕ್ತಪಡಿಸಿದ್ದರು.

ಯುವತಿಯ ರೀಲ್ಸ್ ವಾಹಿನಿಗಳಲ್ಲಿ ಬಿತ್ತರಗೊಂಡಿತ್ತು ಇದಕ್ಕೆ ಪ್ರತಿಕ್ರಿಯೆ ನೀಡಿರುವ ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ, ಯುವತಿಯೊಬ್ಬಳು ರೀಲ್ಸ್ ಮಾಡಲು ಅರಣ್ಯ ಇಲಾಖೆ ಅನುಮತಿ ನೀಡಿಲ್ಲ. ಸಿಬ್ಬಂದಿಯ ಕಣ್ತಪ್ಪಿಸಿ, ಅರಮನೆ ಆವರಣದಲ್ಲಿರುವ ದಸರಾ ಗಜಪಡೆಯ ಕ್ಯಾಂಪ್ ಪ್ರವೇಶಿಸಿದ್ದಾರೆ. ರೀಲ್ಸ್ ಮಾಡಿರುವ ಯುವತಿಯನ್ನು ಪತ್ತೆ ಮಾಡಿ ದಂಡ ವಿಧಿಸಲು ಕ್ರಮ ಕೈಗೊಳ್ಳಲಾಗಿದೆ. ಈಗಾಗಲೇ ಸಿಬ್ಬಂದಿಗಳಿಲ್ಲದ ಸಂದರ್ಭದಲ್ಲಿ ನಿಯಮ ಉಲ್ಲಂಘಿಸಿ, ಆನೆಗಳ ಮುಂದೆ ವಿಡಿಯೋ ಮಾಡಿದ ಮೂವರಿಗೆ ತಲಾ ಒಂದು ಸಾವಿರ ರೂ. ದಂಡ ವಿಧಿಸಲಾಗಿದೆ. ಇಂತಹ ಪ್ರಕರಣ ಪುನರಾವರ್ತನೆಯಾದರೆ ವನ್ಯಜೀವಿ ಸಂರಕ್ಷಣಾ ಕಾಯ್ದೆ ಅನ್ವಯ ಪ್ರಕರಣ ದಾಖಲಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ದಸರಾ ಯಶಸ್ವಿಗೆ ಸಹಕರಿಸಿ: ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಆಗಮಿಸಿರುವ ದಸರಾ ಗಜಪಡೆ ಪ್ರತಿದಿನ ತಾಲೀಮಿನಲ್ಲಿ ಪಾಲ್ಗೊಳ್ಳುತ್ತಿದ್ದು, ಅರಮನೆಯಿಂದ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದವರೆಗೆ ತಾಲೀಮು ನಡೆಸುವ ವೇಳೆ ಸಾರ್ವಜನಿಕರು ಗಜಪಡೆಯ ಮುಂದೆ ಕಿರುಚಾಡುವುದನ್ನು ನಿಲ್ಲಿಸಬೇಕು. ಆನೆಗಳ ಶಾಂತ ನಡೆಗೆ ಭಂಗವುಂಟು ಮಾಡಬಾರದು. ಅರಣ್ಯ ಇಲಾಖೆಯೊಂದಿಗೆ ಸಹಕರಿಸಬೇಕು. ಆ ಮೂಲಕ ದಸರಾ ಮಹೋತ್ಸವದ ಯಶಸ್ಸಿಗೆ ಕೈಜೋಡಿಸುವಂತೆ ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ ಮನವಿ ಮಾಡಿದ್ದಾರೆ.

ಅನಾಹುತವಾದರೆ ಯಾರು ಹೊಣೆ?

ದಸರಾ ಗಜಪಡೆಯನ್ನು ಜನ ಹಾಗೂ ವಾಹನ ಜಂಗುಳಿ ನಡುವೆ ಯಶಸ್ವಿಯಾಗಿ ಮುನ್ನಡೆಸುವ ಜವಾಬ್ದಾರಿಯನ್ನು ಮಾವುತರು ಹಾಗೂ ಕಾವಾಡಿಗಳು ನಿಭಾಯಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಅರಣ್ಯ ಸಿಬ್ಬಂದಿ ಸೂಚನೆಯನ್ನು ಸಾರ್ವಜನಿಕರು ತಪ್ಪದೇ ಪಾಲಿಸಬೇಕು. ಅನಗತ್ಯವಾಗಿ ಆನೆಗಳ ಮುಂದೆ ಬರುವುದನ್ನು ನಿಲ್ಲಿಸಬೇಕು. ಏನಾದರೂ ಅನಾಹುತವಾದರೆ ಯಾರು ಹೊಣೆ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಜನ ವರ್ತಿಸಬೇಕು. ಆನೆಗಳ ಶಾಂತ ಮನಸ್ಥಿತಿಗೆ ಭಂಗವುಂಟು ಮಾಡುವ ವರ್ತನೆ ಜನರಿಂದಾಗಬಾರದು. ದಸರಾ ಆರಂಭಕ್ಕೆ ಕೇವಲ 3 ದಿನಗಳಷ್ಟೇ ಇದ್ದು, ಈ ಸಂದರ್ಭದಲ್ಲಿ ಗಜಪಡೆಯನ್ನು ಸೂಕ್ಷ್ಮವಾಗಿ ನೋಡಿಕೊಳ್ಳಬೇಕಾದ ಜವಾಬ್ದಾರಿ, ಸವಾಲು ಅರಣ್ಯ ಇಲಾಖೆ ಮುಂದೆ ಇದೆ. ಜನ ಹತ್ತಿರ ಬಂದರೆ ಆನೆಗಳಿಗೆ ಕಿರಿಕಿರಿ ಆಗುವ ಸಾಧ್ಯತೆ ಹೆಚ್ಚಾಗಿದೆ. ಆ ಕಾರಣದಿಂದ ಜನ ಸ್ವಯಂ ಪ್ರೇರಣೆಯಿಂದ ದಸರಾ ಗಜಪಡೆಯ ಸ್ವಾಸ್ಥ್ಯ ಕಾಪಾಡಿಕೊಳ್ಳಲು ಅರಣ್ಯ ಇಲಾಖೆಯೊಂದಿಗೆ ಸಹಕರಿಸಬೇಕಾಗಿದೆ.

ಮೈಸೂರು ದಸರಾ ಹಿನ್ನೆಲೆಯಲ್ಲಿ ಖಾಸಗಿ ಬಸ್‌ಗಳ ಸಂಚಾರ ಮಾರ್ಗ ಬದಲಾವಣೆ

ಲಲಿತ ಮಹಲ್ ಆಟದ ಮೈದಾನದಲ್ಲಿ ಖಾಸಗಿ ಬಸ್‌ಗಳು ತಾತ್ಕಾಲಿಕ ನಿಲುಗಡೆ; ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಸೂಚನೆ

ಮೈಸೂರು, ಸೆ.19(ಬಿಎಲ್‌ಯು)- ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದಲ್ಲಿ ವಾಹನ ದಟ್ಟಣೆ ನಿಯಂತ್ರಿಸುವ ಸಲುವಾಗಿ ಖಾಸಗಿ ಬಸ್‌ಗಳಿಗೆ ಅನ್ವಯವಾಗುವಂತೆ ಸಂಚಾರ ಮಾರ್ಗ ಬದಲಾವಣೆ ಮತ್ತು ತಾತ್ಕಾಲಿಕ ಬಸ್ ನಿಲುಗಡೆ ವ್ಯವಸ್ಥೆ ಮಾಡಲಾಗಿದೆ.

ಈ ಸಂಬಂಧ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರು ಸಮಗ್ರ ಮಾಹಿತಿ ನೀಡಿದ್ದಾರೆ.

ಎರಡು ಹಂತದಲ್ಲಿ ಮಾರ್ಪಾಡು ಮಾಡಲಾಗಿದ್ದು, ಸೆಪ್ಟಂಬರ್ 22ರಿಂದ ಅಕ್ಟೋಬರ್ 2ರವರೆಗೆ ಈ ವ್ಯವಸ್ಥೆ ಜಾರಿಯಲ್ಲಿರುತ್ತದೆ.

ಸೆಪ್ಟೆಂಬರ್ 22 ರಿಂದ ಅಕ್ಟೋಬರ್ 1 ರವರೆಗೆ ಪ್ರತಿ ದಿನ ಸಂಜೆ 3 ಗಂಟೆಯಿಂದ ರಾತ್ರಿ 11 ಗಂಟೆವರೆಗೆ ತಿ.ನರಸೀಪುರ, ಬನ್ನೂರು ಕಡೆಯಿಂದ ಮೈಸೂರು ನಗರಕ್ಕೆ ಆಗಮಿಸುವ ಮತ್ತು ನಿರ್ಗಮಿಸುವ ಖಾಸಗಿ ಬಸ್‌ಗಳ ಸಂಚಾರ ಮಾರ್ಗ ವಿವರ:

● ತಿ.ನರಸೀಪುರ ಕಡೆಯಿಂದ ಮೈಸೂರು ಕಡೆಗೆ ಆಗಮಿಸುವ ಬಸ್‌ಗಳು ಲಲಿತಮಹಲ್ ರಸ್ತೆ ಪ್ರವೇಶಿಸಿ ಲಲಿತ ಮಹಲ್ ಆಟದ ಮೈದಾನದಲ್ಲಿ ನಿಲುಗಡೆ ಮಾಡಬೇಕು. ಈ ಜಾಗದಲ್ಲಿ ಪ್ರಯಾಣಿಕರನ್ನು ಇಳಿಸಿ, ತರುವಾಯ ಅಲ್ಲಿಂದಲೇ ಪ್ರಯಾಣಿಕರನ್ನು ಹತ್ತಿಸಿಕೊಂಡು ತಿ.ನರಸೀಪುರ ರಸ್ತೆ ಜಂಕ್ಷನ್ ಮೂಲಕ ತಿ.ನರಸೀಪುರದತ್ತ ಸಾಗಬೇಕು.

● ಬನ್ನೂರು ಕಡೆಯಿಂದ ಮೈಸೂರು ನಗರಕ್ಕೆ ಆಗಮಿಸುವ ಮತ್ತು ನಿರ್ಗಮಿಸುವ ಖಾಸಗಿ ಬಸ್‌ಗಳು ದೇವೇಗೌಡ ವೃತ್ತ, ಆರ್.ಮಹದೇವಪ್ಪ ವೃತ್ತ, ತಿ.ನರಸೀಪುರ ರಸ್ತೆ ಜಂಕ್ಷನ್ ಮೂಲಕ ಲಲಿತ ಮಹಲ್ ರಸ್ತೆ ಪ್ರವೇಶಿಸಿ ಲಲಿತ ಮಹಲ್ ಆಟದ ಮೈದಾನದಲ್ಲಿ ಬಸ್ ನಿಲುಗಡೆ ಮಾಡಿ ಪ್ರಯಾಣಿಕರನ್ನು ಅಲ್ಲಿಯೇ ಇಳಿಸಬೇಕು.



ತರುವಾಯ ಪ್ರಯಾಣಿಕರನ್ನು ಅಲ್ಲಿಂದಲೇ ಹತ್ತಿಸಿಕೊಂಡು ತಿ.ನರಸೀಪುರ ರಸ್ತೆ ಜಂಕ್ಷನ್, ಆರ್.ಮಹದೇವಪ್ಪ ವೃತ್ತ, ಬನ್ನೂರು ರಸ್ತೆ ಮೂಲಕ ಬನ್ನೂರು ಕಡೆಗೆ ಸಾಗಬೇಕು.

ಎರಡನೇ ಹಂತದಲ್ಲಿ ಮಾಡಿರುವ ಮಾರ್ಪಾಡಿನಂತೆ ಅಕ್ಟೋಬರ್ 2ರಂದು ಬೆಳಿಗ್ಗೆ 6ರಿಂದ ರಾತ್ರಿ 12 ಗಂಟೆವರೆಗೆ ಖಾಸಗಿ ಬಸ್‌ಗಳ ಮಾರ್ಗ ಮತ್ತು ನಿಲುಗಡೆ ವಿವರ ಇಂತಿದೆ;

● ಟಿ.ನರಸೀಪುರ ಕಡೆಯಿಂದ ಮೈಸೂರು ನಗರಕ್ಕೆ ಆಗಮಿಸುವ ಖಾಸಗಿ ಬಸ್‌ಗಳು ಲಲಿತ ಮಹಲ್ ರಸ್ತೆ ಪ್ರವೇಶಿಸಿ ಲಲಿತ ಮಹಲ್ ಆಟದ ಮೈದಾನದಲ್ಲಿ ಬಸ್ ನಿಲುಗಡೆ ಮಾಡಿ ಅಲ್ಲಿಯೇ ಪ್ರಯಾಣಿಕರನ್ನು ಇಳಿಸಬೇಕು. ಬಳಿಕ ಪ್ರಯಾಣಿಕರನ್ನು ಹತ್ತಿಸಿಕೊಂಡು ತಿ.ನರಸೀಪುರ ರಸ್ತೆ ಜಂಕ್ಷನ್‌ನಿಂದ ತಿ.ನರಸೀಪುರ ಕಡೆ ಸಾಗಬೇಕು.

● ಬನ್ನೂರು ಕಡೆಯಿಂದ ಮೈಸೂರು ನಗರಕ್ಕೆ ಆಗಮಿಸುವ ಖಾಸಗಿ ಬಸ್‌ಗಳು ದೇವೇಗೌಡ ವೃತ್ತ, ಆರ್.ಮಹದೇವಪ್ಪ ವೃತ್ತ, ತಿ.ನರಸೀಪುರ ರಸ್ತೆ ಜಂಕ್ಷನ್‌ನಿಂದ ಲಲಿತ ಮಹಲ್ ರಸ್ತೆ ಪ್ರವೇಶಿಸಿ ಲಲಿತ ಮಹಲ್ ಆಟದ ಮೈದಾನದಲ್ಲಿ ಪ್ರಯಾಣಿಕರನ್ನು ಇಳಿಸಬೇಕು. ಹಾಗೆಯೇ ಅಲ್ಲಿಂದಲೇ ಪ್ರಯಾಣಿಕರನ್ನು ಹತ್ತಿಸಿಕೊಂಡು ಬಂದ ಮಾರ್ಗದಲ್ಲೇ ಬನ್ನೂರು ಕಡೆಗೆ ಹೋಗಬೇಕು.

ಸೆ.22.ರಿಂದ ಅ.1.ರವರೆಗೆ ಪ್ರತಿ ದಿನ ಮಧ್ಯಾಹ್ನ 3.00 ಗಂಟೆಯಿಂದ ರಾತ್ರಿ 11.00 ಗಂಟೆಯವರೆಗೆ

ನಗರ ಸಾರಿಗೆ ಬಸ್‌ಗಳು ಸಂಚರಿಸುವ ಮಾರ್ಗ; ತಾತ್ಕಾಲಿಕ ನಿಲ್ದಾಣಗಳು

ರಾಮಸ್ವಾಮಿ ವೃತ್ತದ ಕಡೆಯಿಂದ ನಗರ ಬಸ್ ನಿಲ್ದಾಣಕ್ಕೆ ಆಗಮಿಸುವ ಬಸ್‌ಗಳು: (ಕುವೆಂಪುನಗರ, ಸರಸ್ವತಿಪುರಂ, ರಾಮಕೃಷ್ಣನಗರ, ಬೋಗಾದಿ) ಆರ್‌ಟಿಓ ವೃತ್ತ- ರಾಮಸ್ವಾಮಿ ವೃತ್ತ ಮೂಡಾ ಜಂಕ್ಷನ್ -ರಮಾವಿಲಾಸ ರಸ್ತೆ- ಬನುಮಯ್ಯ ಕಾಲೇಜು ಹತ್ತಿರದ ತಾತ್ಕಾಲಿಕ ಬಸ್ ನಿಲ್ದಾಣದ ಬಳಿ ಪ್ರಯಾಣಿಕರನ್ನು ಇಳಿಸಿ/ಹತ್ತಿಸಿಕೊಂಡು ಬಿ.ರಾಚಯ್ಯ ವೃತ್ತ- ಬಸವೇಶ್ವರ ವೃತ್ತ- ಅಗ್ರಹಾರ ವೃತ್ತ- ವಾಣಿವಿಲಾಸ ರಸ್ತೆಯಲ್ಲಿ ಮುಂದೆ ಸಾಗುವುದು.



ಶ್ರೀನಿವಾಸ ವೃತ್ತದ ಕಡೆಯಿಂದ ನಗರ ಬಸ್ ನಿಲ್ದಾಣಕ್ಕೆ ಆಗಮಿಸುವ ಬಸ್‌ಗಳು: (ವಿದ್ಯಾರಣ್ಯಪುರಂ, ಜೆ.ಪಿ.ನಗರ, ಶ್ರೀರಾಂಪುರ, ಹೆಚ್.ಡಿ.ಕೋಟೆ) ಶ್ರೀನಿವಾಸ ವೃತ್ತ- ಎಡ ತಿರುವು- ಆರ್‌ಟಿಓ ವೃತ್ತ- ರಾಮಸ್ವಾಮಿ ವೃತ್ತ ಮೂಡಾ ಜಂಕ್ಷನ್ - ರಮಾವಿಲಾಸ ರಸ್ತೆ- ಬನುಮಯ್ಯ ಕಾಲೇಜು ಹತ್ತಿರದ ತಾತ್ಕಾಲಿಕ ಬಸ್ ನಿಲ್ದಾಣದ ಬಳಿ ಪ್ರಯಾಣಿಕರನ್ನು ಇಳಿಸಿ/ಹತ್ತಿಸಿಕೊಂಡು ಬಿ.ರಾಚಯ್ಯ ವೃತ್ತ- ಬಸವೇಶ್ವರ ವೃತ್ತ- ಅಗ್ರಹಾರ ವೃತ್ತ- ವಾಣಿವಿಲಾಸ ರಸ್ತೆಯಲ್ಲಿ ಮುಂದೆ ಸಾಗುವುದು.

ನಂಜನಗೂಡು ರಸ್ತೆ ಮಾರ್ಗವಾಗಿ ನಗರ ಬಸ್ ನಿಲ್ದಾಣಕ್ಕೆ ಆಗಮಿಸುವ ಬಸ್‌ಗಳು: (ನಂಜನಗೂಡು, ಕಡಕೊಳ) ನಂಜನಗೂಡು ರಸ್ತೆ- ಜೆ.ಪಿ.ನಗರ ಲಿಂಕ್ ರಸ್ತೆ- ಮಾನಂದವಾಡಿ ರಸ್ತೆ- ಶ್ರೀನಿವಾಸ ವೃತ್ತ- ವೇದಾಂತ ಹೆಮ್ಮಿಗೆ ವೃತ್ತ- ಆರ್.ಟಿ.ಓ ವೃತ್ತ- ರಾಮಸ್ವಾಮಿ ವೃತ್ತ, ಮುಡಾ ಜಂಕ್ಷನ್ -ರಮಾವಿಲಾಸ ರಸ್ತೆ- ಬನುಮಯ್ಯ ಕಾಲೇಜು ಹತ್ತಿರದ ತಾತ್ಕಾಲಿಕ ಬಸ್ ನಿಲ್ದಾಣದ ಬಳಿ ಪ್ರಯಾಣಿಕರನ್ನು ಇಳಿಸಿ/ಹತ್ತಿಸಿಕೊಂಡು ಬಿ.ರಾಚಯ್ಯ ವೃತ್ತ- ಬಸವೇಶ್ವರ ವೃತ್ತ- ಗನ್‌ಹೌಸ್ ವೃತ್ತ- ನಂಜನಗೂಡು ರಸ್ತೆ- ರಾಜಹಂಸ ಜಂಕ್ಷನ್- ಮೂಲಕ ಮುಂದೆ ಸಾಗುವುದು.

ಕೆಆರ್.ಎಸ್ ರಸ್ತೆ ಕಡೆಯಿಂದ ನಗರ ಬಸ್ ನಿಲ್ದಾಣಕ್ಕೆ ಆಗಮಿಸುವ ಬಸ್‌ಗಳು: (ಕೆ.ಆರ್‌ಎಸ್, ಇಲವಾಲ, ಬೆಳವಾಡಿ, ವಿಜಯನಗರ, ಕೂರ್ಗಳ್ಳಿ, ಹೂಟಗಳ್ಳಿ) ಕೆಆರ್‌ಎಸ್ ರಸ್ತೆ- ಆಕಾಶವಾಣಿ ವೃತ್ತ- ದಾಸಪ್ಪ ವೃತ್ತ- ರೈಲ್ವೇ ನಿಲ್ದಾಣ ವೃತ್ತ- ಜೆ.ಕೆ.ಗ್ರೌಂಡ್ ಜಂಕ್ಷನ್- ಆಯುರ್ವೇದಿಕ್ ವೃತ್ತ- ಇರ್ವಿನ್ ರಸ್ತೆ- ನೆಹರು ವೃತ್ತ- ಅಶೋಕ ರಸ್ತೆ- ದೊಡ್ಡ ಗಡಿಯಾರ ಜಂಕ್ಷನ್- ಗಾಂಧಿ ವೃತ್ತದ ತಾತ್ಕಾಲಿಕ ಬಸ್ ನಿಲ್ದಾಣದ ಬಳಿ ಪ್ರಯಾಣಿಕರನ್ನು ಇಳಿಸಿ/ಹತ್ತಿಸಿಕೊಂಡು- ಓಲ್ಡ್ ಬ್ಯಾಂಕ್ ರಸ್ತೆ- ಎಸ್‌ಆರ್‌ರಸ್ತೆ ಜಂಕ್ಷನ್- ಆಯುರ್ವೇದಿಕ್ ವೃತ್ತ- ಎಡ ತಿರವು ಪಡೆದು ಮುಂದೆ ಸಾಗುವುದು.

ಹೈದರಾಲಿ ವೃತ್ತ (ಫೈವ್ ಲೈಟ್ ಸರ್ಕಲ್) ಕಡೆಯಿಂದ ನಗರ ಬಸ್ ನಿಲ್ದಾಣಕ್ಕೆ ಆಗಮಿಸುವ ಬಸ್‌ಗಳು: (ಶ್ರೀರಂಗಪಟ್ಟಣ, ಸಿದ್ದಲಿಂಗಪುರ, ಎನ್.ಆರ್.ಮೊಹಲ್ಲಾ, ಉದಯಗಿರಿ, ಕೆಸರೆ, ನಾಯ್ಡುನಗರ) ಸರ್ಕಾರಿ ಭವನ ಉತ್ತರ ದ್ವಾರ ಜಂಕ್ಷನ್- ಫೈವ್ ಲೈಟ್ ವೃತ್ತ- ದಾವೂದ್ ಖಾನ್ ರಸ್ತೆ- ಅಶೋಕ ರಸ್ತೆ- ನೆಹರು ವೃತ್ತ- ದೊಡ್ಡ ಗಡಿಯಾರ ಜಂಕ್ಷನ್- ಗಾಂಧಿ ವೃತ್ತದ ತಾತ್ಕಾಲಿಕ ಬಸ್ ನಿಲ್ದಾಣದ ಬಳಿ ಪ್ರಯಾಣಿಕರನ್ನು ಇಳಿಸಿ/ಹತ್ತಿಸಿಕೊಂಡು- ದೊಡ್ಡ ಗಡಿಯಾರ ಜಂಕ್ಷನ್- ಚಂದ್ರಗುಪ್ತ ರಸ್ತೆ- ಬಿಎನ್‌ರಸ್ತೆ- ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ- ಫೈವ್ ಲೈಟ್ ವೃತ್ತದ ಕಡೆಯಿಂದ ಮುಂದೆ ಸಾಗುವುದು.

ಲೋಕರಂಜನ್ ರಸ್ತೆ ಮಾರ್ಗವಾಗಿ ನಗರ ಬಸ್ ನಿಲ್ದಾಣಕ್ಕೆ ಆಗಮಿಸುವ ಬಸ್‌ಗಳು: (ಚಾಮುಂಡಿ ಬೆಟ್ಟ, ಪೊಲೀಸ್ ಲೇಔಟ್, ಆಲನಹಳ್ಳಿ, ಲಲಿತಾದ್ರಿಪುರ) ಲೋಕರಂಜನ್ ರಸ್ತೆ- ಎಸ್.ಲಿಂಗಣ್ಣ ವೃತ್ತ- ಲೋಕರಂಜನ್ ರಸ್ತೆ ಅಂತ್ಯದಲ್ಲಿ(ಹಾರ್ಡಿಂಜ್ ವೃತ್ತದ ಬಳಿ) ಬಲಕ್ಕೆ ತಿರುವು ಪಡೆದು ಮಿರ್ಜಾ ರಸ್ತೆಯ ತಾತ್ಕಾಲಿಕ ಬಸ್ ನಿಲ್ದಾಣದ ಬಳಿ ಪ್ರಯಾಣಿಕರನ್ನು ಇಳಿಸಿ/ಹತ್ತಿಸಿಕೊಂಡು ಎಫ್.ಕೆ.ಇರಾನಿ ವೃತ್ತ- ವಸಂತಮಹಲ್ ಜಂಕ್ಷನ್ ಮೂಲಕ ಮುಂದೆ ಸಾಗುವುದು. (ಹಾರ್ಡಿಂಜ್ ವೃತ್ತದ ಕಡೆ ಬರುವಂತಿಲ್ಲ).

ಎಂ.ಎಂ. ರಸ್ತೆ ಮಾರ್ಗವಾಗಿ ನಗರ ಬಸ್ ನಿಲ್ದಾಣಕ್ಕೆ ಆಗಮಿಸುವ ಬಸ್‌ಗಳು: (ಸಿದ್ಧಾರ್ಥನಗರ, ಮಹದೇವಪುರ, ಬನ್ನೂರು) ಡೈರಿ ಸರ್ಕಲ್- ವಾಯುವಿಹಾರ ಮಾರ್ಗ- ಸಂಗೊಳ್ಳಿ ರಾಯಣ್ಣ ವೃತ್ತ- ಬುಲೆವರ್ಡ್ ವೃತ್ತ- ಟ್ಯಾಂಕ್ ಬಂಡ್ ರಸ್ತೆ-ಸರ್ಕಸ್ ಗ್ರೌಂಡ್ ಜಂಕ್ಷನ್- ಲೋಕರಂಜನ್ ರಸ್ತೆ- ಎಸ್.ಲಿಂಗಣ್ಣ ವೃತ್ತ: ಲೋಕರಂಜನ್ ರಸ್ತೆ ಅಂತ್ಯದಲ್ಲಿ(ಹಾರ್ಡಿಂಜ್ ವೃತ್ತದ ಬಳಿ) ಬಲಕ್ಕೆ ತಿರುವು ಪಡೆದು ಮಿರ್ಜಾ ರಸ್ತೆಯ ತಾತ್ಕಾಲಿಕ ಬಸ್ ನಿಲ್ದಾಣದ ಬಳಿ ಪ್ರಯಾಣಿಕರನ್ನು ಇಳಿಸಿ/ಹತ್ತಿಸಿಕೊಂಡು ಎಫ್.ಕೆ.ಇರಾನಿ ವೃತ್ತ ವಸ0ತಮಹಲ್ ಜಂಕ್ಷನ್ ಮೂಲಕ ಮುಂದೆ ಸಾಗುವುದು. (ಹಾರ್ಡಿಂಜ್ ವೃತ್ತದ ಕಡೆ ಬರುವಂತಿಲ್ಲ).

ಸೆ22ರಿಂದ ಅ.2ರವರೆಗೆ ಪ್ರತಿ ದಿನ ಮಧ್ಯಾಹ್ನ 3-00 ಗಂಟೆಯಿಂದ ರಾತ್ರಿ 12.00 ಗಂಟೆಯವರೆಗೆ

ಏಕಮುಖ ವಾಹನ ಸಂಚಾರ ವ್ಯವಸ್ಥೆ

ಏಕಮುಖ ವಾಹನ ಸಂಚಾರ ನಿರ್ಬಂಧಗಳು

ಓಲ್ಡ್ ಬ್ಯಾಂಕ್ ರಸ್ತೆಯಲ್ಲಿ- ಗಾಂಧಿ ವೃತ್ತದಿಂದ ಎಸ್.ಆರ್.ರಸ್ತೆ ಜಂಕ್ಷನ್ ವರೆಗೆ: ಗಾಂಧಿ ವೃತ್ತದಿಂದ ಎಸ್.ಆರ್.ರಸ್ತೆ ಜಂಕ್ಷನ್ ವರೆಗೆ (ಪೂರ್ವದಿಂದ ಪಶ್ಚಿಮಕ್ಕೆ) ವಾಹನಗಳ ಏಕಮುಖ ಸಂಚಾರಕ್ಕೆ ಅವಕಾಶ ನೀಡಿರುತ್ತದೆ. ಎಸ್.ಆರ್.ರಸ್ತೆ ಜಂಕ್ಷನ್‌ನಿಂದ ಗಾಂಧಿ ವೃತ್ತದವರೆಗೆ (ಪಶ್ಚಿಮದಿಂದ ಪೂರ್ವಕ್ಕೆ) ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

ಅಶೋಕ ರಸ್ತೆಯಲ್ಲಿ- ದಾವೂದ್ ಖಾನ್ ರಸ್ತೆ ಜಂಕ್ಷನ್ ನಿಂದ ನೆಹರು ವೃತ್ತದವರೆಗೆ: ಅಶೋಕ ರಸ್ತೆಯಲ್ಲಿ - ದಾವೂದ್‌ಖಾನ್ ರಸ್ತೆ ಜಂಕ್ಷನ್ (ಗಾಂಧಿ ಮೆಡಿಕಲ್ಸ್)ನಿಂದ ನೆಹರು ಸರ್ಕಲ್‌ವರೆಗೆ (ಉತ್ತರದಿಂದ ದಕ್ಷಿಣಕ್ಕೆ) ವಾಹನಗಳ ಏಕಮುಖ ಸಂಚಾರಕ್ಕೆ ಅವಕಾಶ ನೀಡಿರುತ್ತದೆ. ನೆಹರು ಸರ್ಕಲ್‌ನಿಂದ ದಾವೂದ್‌ಖಾನ್ ರಸ್ತೆ ಜಂಕ್ಷನ್‌ವರೆಗೆ (ದಕ್ಷಿಣದಿಂದ ಉತ್ತರಕ್ಕೆ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

ಬನುಮಯ್ಯ ರಸ್ತೆಯಲ್ಲಿ- ಚಾಮರಾಜ ಜೋಡಿ ರಸ್ತೆ ಜಂಕ್ಷನ್‌ನಿಂದ ಬನುಮಯ್ಯ ಚೌಕದ ವರೆಗೆ: ಚಾಮರಾಜ ಜೋಡಿ ರಸ್ತೆಯಿಂದ ಬನುಮಯ್ಯ ಚೌಕದವರೆಗೆ (ದಕ್ಷಿಣದಿಂದ ಉತ್ತರಕ್ಕೆ) ವಾಹನಗಳ ಏಕಮುಖ ಸಂಚಾರಕ್ಕೆ ಅವಕಾಶ ನೀಡಿರುತ್ತದೆ. ಬನುಮಯ್ಯ ಚೌಕದಿಂದ ಚಾಮರಾಜ ಜೋಡಿ ರಸ್ತೆವರೆಗೆ (ಉತ್ತರದಿಂದ ದಕ್ಷಿಣಕ್ಕೆ) ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

ತ್ಯಾಗರಾಜ ರಸ್ತೆಯಲ್ಲಿ- ಎನ್.ಮಾಧವರಾವ್ ವೃತ್ತ (ಅಗ್ರಹಾರ ವೃತ್ತ) ದಿಂದ ಚಾಮರಾಜ ಜೋಡಿ ರಸ್ತೆ ಜಂಕ್ಷನ್ ವರೆಗೆ: ಎನ್.ಮಾಧವರಾವ್‌ವೃತ್ತ (ಅಗ್ರಹಾರ ವೃತ್ತ)ದಿಂದ (ದಕ್ಷಿಣದಿಂದ ಉತ್ತರಕ್ಕೆ) ತ್ಯಾಗರಾಜ ರಸ್ತೆಯಲ್ಲಿ ಚಾಮರಾಜ ಜೋಡಿ ರಸ್ತೆಯುವರೆಗೆ ವಾಹನಗಳ ಏಕಮುಖ ಸಂಚಾರಕ್ಕೆ ಅವಕಾಶ ನೀಡಿರುತ್ತದೆ. ಚಾಮರಾಜ ಜೋಡಿ ರಸ್ತೆಯಿಂದ ತ್ಯಾಗರಾಜ ರಸ್ತೆಯಲ್ಲಿ ಎನ್.ಮಾಧವರಾವ್ ವೃತ್ತದವರೆಗೆ (ಉತ್ತರದಿಂದ ದಕ್ಷಿಣಕ್ಕೆ)ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

ಲೋಕರಂಜನ್ ರಸ್ತೆಯಲ್ಲಿ- ಎಸ್.ಲಿಂಗಣ್ಣ ವೃತ್ತದಿಂದ ಸರ್ಕಸ್ ಮೈದಾನದ ಜಂಕ್ಷನ್‌ವರೆಗೆ: ಸರ್ಕಸ್ ಮೈದಾನದ ಜಂಕ್ಷನ್‌ನಿಂದ (ಪೂರ್ವದಿಂದ ಪಶ್ಚಿಮಕ್ಕೆ) ಹಾರ್ಡಿಂಜ್ ವೃತ್ತದವರೆಗೆ ವಾಹನಗಳ ಏಕಮುಖ ಸಂಚಾರಕ್ಕೆ ಅವಕಾಶ ನೀಡಿರುತ್ತದೆ. ಎಸ್.ಲಿಂಗಣ್ಣ ವೃತ್ತದಿ0ದ (ಪಶ್ಚಿಮದಿ0ದ ಪೂರ್ವಕ್ಕೆ) ಸರ್ಕಸ್ ಮೈದಾನದವರೆಗೆ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

ಚಂದ್ರಗುಪ್ತ ರಸ್ತೆಯಲ್ಲಿ ಬಿ.ಎನ್.ರಸ್ತೆ ಜಂಕ್ಷನ್‌ನಿಂದ ಅಶೋಕ ರಸ್ತೆ ಜಂಕ್ಷನ್‌ವರೆಗೆ: ಚಂದ್ರಗುಪ್ತ ರಸ್ತೆಯಲ್ಲಿ ಬಿ.ಎನ್.ರಸ್ತೆ ಜಂಕ್ಷನ್‌ನಿಂದ ಅಶೋಕ ರಸ್ತೆ ಜಂಕ್ಷನ್‌ವರೆಗೆ ಹಾಲಿ ಏಕಮುಖ ಸಂಚಾರ ವ್ಯವಸ್ಥೆ ಜಾರಿಯಲ್ಲಿದ್ದು, ದಿನಾಂಕ 22.09.2025 ರಿಂದ 02.10,2025 ರವರೆಗೆ ಏಕಮುಖ ಸಂಚಾರ ವ್ಯವಸ್ಥೆಯನ್ನು ತಾತ್ಕಲಿಕವಾಗಿ ಮುಕ್ತಗೊಳಿಸಿ ಅಶೋಕರಸ್ತೆಯಿಂದ ಬಿ.ಎನ್.ರಸ್ತೆ ಜಂಕ್ಷನ್‌ವರೆಗೆ (ಪಶ್ಚಿಮದಿಂದ ಪೂರ್ವ ದಿಕ್ಕಿಗೆ) ಏಕಮುಖ ಸಂಚಾರ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ.

ಶಾಲಿವಾಹನ ರಸ್ತೆಯಲ್ಲಿ (ಮೃಗಾಲಯ ರಸ್ತೆ- ಎಸ್.ಲಿಂಗಣ್ಣ ವೃತ್ತದಿಂದ ಎಫ್.ಕೆ.ಇರಾನಿ ವೃತ್ತದವರೆಗೆ: ಎಸ್.ಲಿಂಗಣ್ಣ ವೃತ್ತದಿಂದ ಎಫ್.ಕೆ.ಇರಾನಿ ವೃತ್ತದವರೆಗೆ (ಮಿರ್ಜಾ ವೃತ್ತ) (ದಕ್ಷಿಣದಿಂದ ಉತ್ತರಕ್ಕೆ) ವಾಹನಗಳ ಏಕಮುಖ ಸಂಚಾರಕ್ಕೆ ಅವಕಾಶ ನೀಡಿರುತ್ತದೆ. ಎಫ್.ಕೆ.ಇರಾನಿ ವೃತ್ತದಿಂದ (ಮಿರ್ಜಾ ವೃತ್ತ) ಎಸ್.ಲಿಂಗಣ್ಣ ವೃತ್ತದವರೆಗೆ (ಉತ್ತರದಿಂದ ದಕ್ಷಿಣಕ್ಕೆ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.


ಅರಮನೆಯ ಸುತ್ತಲಿನ ರಸ್ತೆಗಳಲ್ಲಿ ವಾಹನಗಳು ಸಂಚರಿಸುವ ದಿಕ್ಕು

ಚಾಮರಾಜ ಒಡೆಯರ್ ವೃತ್ತ (ಓಲ್ಡ್ ಸ್ಟಾಚ್ಯು ವೃತ್ತ) - ಕೆ.ಆರ್.ವೃತ್ತ - ನ್ಯೂ ಸಯ್ಯಾಜಿರಾವ್ ರಸ್ತೆ - ರಾಚಯ್ಯ ವೃತ್ತ- ಬಸವೇಶ್ವರ ವೃತ್ತ- ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ (ಗನ್ ಹೌಸ್)- ಕುಸ್ತಿ ಅಖಾಡ ಜಂಕ್ಷನ್ - ಬಿ.ಎನ್.ರಸ್ತೆ - ಜಯಚಾಮರಾಜ ಒಡೆಯರ್ ವೃತ್ತ (ಹಾರ್ಡಿಂಜ್ ವೃತ್ತ)- ಆಲ್ಬರ್ಟ್ ವಿಕ್ಟರ್ ರಸ್ತೆ - ಚಾಮರಾಜ ಒಡೆಯರ್ ವೃತ್ತ (ಓಲ್ಡ್ ಸ್ಟಾಚ್ಯು ವೃತ್ತ (ಪುರಂದರ ರಸ್ತೆಯನ್ನು ಒಳಗೊಂಡಂತೆ).

ಚಾಮರಾಜ ಒಡೆಯರ್ ವೃತ್ತ (ಓಲ್ಡ್ ಸ್ಟಾಚ್ಯು ವೃತ್ತು- ಕೆ.ಆರ್.ವೃತ್ತ - ನ್ಯೂ ಸಯ್ಯಾಜಿರಾವ್ ರಸ್ತೆ- ಬಾಟಾ ಜಂಕ್ಷನ್ -ಆಯುರ್ವೇದಿಕ್ ವೃತ್ತ - ಇರ್ವಿನ್ ರಸ್ತೆ - ನೆಹರು ವೃತ್ತ - ಅಶೋಕ ರಸ್ತೆ - ಮಹಾವೀರ ವೃತ (ದೊಡ್ಡ ಗಡಿಯಾರ)- ಚಾಮರಾಜ ಒಡೆಯರ್ ವೃತ್ತ (ಓಲ್ಡ್ ಸ್ಟಾಚ್ಯು ವೃತ್ತ)- ಈ ರಸ್ತೆಗಳ ಮಧ್ಯ ಇರುವ ಪ್ರದೇಶವನ್ನು ಮಧ್ಯ ಬಿಂದುವನ್ನಾಗಿ ಪರಿಗಣಿಸಿ ಗಡಿಯಾರದ ಮುಳ್ಳು ಸುತ್ತುವ ದಿಕ್ಕಿಗೆ ವಾಹನಗಳು ಸಂಚರಿಸಲು ಅವಕಾಶ ನೀಡಿರುತ್ತದೆ. ಈ ರಸ್ತೆಗಳಲ್ಲಿ ವಿರುದ್ಧ ದಿಕ್ಕಿನಲ್ಲಿ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

ಕೊಡವರಿಗೆ ವಿಶೇಷ ರಾಜಕೀಯ ಪ್ರಾತಿನಿಧ್ಯಕ್ಕೆ ಆಗ್ರಹಿಸಿ ಸಿಎನ್‌ಸಿಯಿಂದ ಮಾನವ ಸರಪಳಿ

ಜಾತಿಗಣತಿ ವೇಳೆ ಬಾಂಗ್ಲಾ ದೇಶಿಗರು, ರೋಹಿಂಗ್ಯಗಳು, ಜಾರ್ಖಂಡ್, ಅಸ್ಸಾಂ, ಮಧ್ಯಪ್ರದೇಶದ ವಲಸಿಗರಿಗೆ ಅವಕಾಶ ನೀಡದಂತೆ ಸಿಎನ್‌ಸಿ ಆಗ್ರಹ



ಮೂರ್ನಾಡಿನಲ್ಲಿ ನಡೆದ ಸಿಎನ್‌ಸಿಯ ಮಾನವ ಸರಪಳಿ ಜನಜಾಗೃತಿ.

ಮಡಿಕೇರಿ,ಸೆ.19– ಬಾಂಗ್ಲಾದೇಶಿಗರು, ರೋಹಿಂಗ್ಯಗಳು, ಜಾರ್ಖಂಡ್, ಅಸ್ಸಾಂ ಮತ್ತು ಮಧ್ಯಪ್ರದೇಶದ ಅಕ್ರಮ ವಲಸಿಗರು ಕೊಡಗು ಜಿಲ್ಲೆಯಲ್ಲಿ ಕಾರ್ಮಿಕರ ರೂಪದಲ್ಲಿ ಆಶ್ರಯ ಪಡೆದಿದ್ದಾರೆ. ಜಾತಿ ಜನಗಣತಿಯ ಸಂದರ್ಭ ಇವರುಗಳನ್ನು ಸಕ್ರಮಗೊಳಿಸಿದರೆ ಮತ್ತು ಇವರುಗಳಿಂದ ಕಾನೂನು ಉಲ್ಲಂಘನೆಯಾದರೆ ಅದಕ್ಕೆ ಜಿಲ್ಲಾಡಳಿತವೇ ನೇರ ಹೊಣೆಯಾಗಬೇಕಾಗುತ್ತದೆ ಎಂದು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಅಧ್ಯಕ್ಷ ಎನ್.ಯು.ನಾಚಪ್ಪ ಎಚ್ಚರಿಕೆ ನೀಡಿದ್ದಾರೆ.

ಜಾತಿ ಜನಗಣತಿಯ ಸಂದರ್ಭದಲ್ಲಿ ಕೊಡವರು ಜಾತಿ–ಭಾಷೆ–ಧರ್ಮದ ಕಾಲಂನಲ್ಲಿ ಕೊಡವ ಎಂದೇ ಬರೆಸಬೇಕೆನ್ನುವ ಕುರಿತು ಮತ್ತು ಸಂಸತ್ ಹಾಗೂ ವಿಧಾನ ಸಭೆಯಲ್ಲಿ ಕೊಡವರಿಗೆ ವಿಶೇಷ ರಾಜಕೀಯ ಪ್ರಾತಿನಿಧ್ಯ ನೀಡಬೇಕು ಎಂದು ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಮೂರ್ನಾಡಿನಲ್ಲಿ ನಡೆಸಿದ 13ನೇ ಮಾನವ ಸರಪಳಿ ಜನಜಾಗೃತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಜ್ಯ ಸರಕಾರದ ವತಿಯಿಂದ ಇದೇ ಸೆ.22ರಿಂದ ಅ.7ರವರೆಗೆ ನಡೆಯಲಿರುವ ಜಾತಿವಾರು ಗಣತಿಯ ಸಂದರ್ಭ ಜಾತಿ–ಭಾಷೆ–ಧರ್ಮದ ಕಾಲಂನಲ್ಲಿ 'ಕೊಡವ' ಎಂದೇ ಬರೆಸುವ ಮೂಲಕ ಕೊಡವರ ಸಮಗ್ರ ಸಬಲೀಕರಣಕ್ಕೆ ಕೊಡವರು ಕಟಿಬದ್ಧರಾಗಿರಬೇಕು ಎಂದು ಕರೆ ನೀಡಿದರು.

ತಾಂಡ ಗ್ಯಾಂಗ್ ರೀತಿಯಲ್ಲಿ ಕಳ್ಳತನ ಪ್ರಕರಣಗಳು ಜಿಲ್ಲೆಯಲ್ಲಿ ನಡೆಯುತ್ತಿದೆ. ಬಾಂಗ್ಲಾದೇಶಿಗರು, ರೋಹಿಂಗ್ಯಗಳು, ಜಾರ್ಖಂಡ್, ಅಸ್ಸಾಂ ಮತ್ತು ಮಧ್ಯಪ್ರದೇಶದ ಅಕ್ರಮ ವಲಸಿಗರು ಅಪರಾಧ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದಾರೆ. ಮಡಿಕೇರಿಯ ಪೊಲೀಸ್ ವಸತಿ ಗೃಹಕ್ಕೇ ನುಗ್ಗಿ ಕಳ್ಳತನ ನಡೆಸಿದ ಮಧ್ಯಪ್ರದೇಶದ ದಾರ್ ಜಿಲ್ಲೆಯ ತಾಂಡ ಪ್ರದೇಶದ ತಂಡವನ್ನು ಕೊಡಗು ಪೊಲೀಸರು ಸೆರೆ ಹಿಡಿದ್ದಿದ್ದರೂ, ಜಿಲ್ಲೆಯಲ್ಲೇ ಆಶ್ರಯ ಪಡೆದಿರುವ ಅಕ್ರಮ ವಲಸಿಗರಿಂದ ಆತಂಕವಿದೆ ಎಂದು ಎನ್.ಯು. ನಾಚಪ್ಪ ಗಮನ ಸೆಳೆದರು.

ಈಗಾಗಲೇ ಜಾತಿವಾರು ಜನಗಣತಿಯಲ್ಲಿ ಪ್ರತಿ ಕುಟುಂಬಗಳ ಮಾಹಿತಿ ದಾಖಲಿಸುವ ಕೆಲಸವನ್ನು ವಿದ್ಯುತ್ ಇಲಾಖೆ ಮಾಡುತ್ತಿದೆ. ಎಲ್ಲಾ ಮನೆಗಳ ವಿದ್ಯುತ್ ಮೀಟರ್‌ಗಳನ್ನು ಅನುಸರಿಸಿ ಜಿಯೋ ಟ್ಯಾಗಿಂಗ್‌ಗಾಗಿ ಸ್ಟಿಕ್ಕರ್‌ಗಳನ್ನು ಅಳವಡಿಸುವ ಕಾರ್ಯ ಪ್ರಗತಿಯಲ್ಲಿದೆ. ಅಕ್ರಮ ವಲಸಿಗರು ನೆಲೆಸಿರುವ ಬಾಡಿಗೆ ಮನೆ ಮತ್ತು ಲೈನ್ ಮನೆಗಳಿಗೆ ಕೂಡ ಸ್ಟಿಕರ್ ಅಳವಡಿಸಲಾಗಿದೆ. ಇದನ್ನು ಆಧರಿಸಿ ಜನಗಣತಿ ಮಾಹಿತಿದಾರರು ಸಹಜವಾಗಿಯೇ ಅಕ್ರಮ ವಲಸಿಗ ಕುಟುಂಬಗಳ ಮಾಹಿತಿಯನ್ನು ಕೂಡ ಕಲೆ ಹಾಕಲಿದ್ದಾರೆ. ಈ ಸಂದರ್ಭ ಅಕ್ರಮ ವಲಸಿಗರು ಸಕ್ರಮಗೊಳ್ಳುವ ಅಥವಾ ಅಧಿಕೃತ ನಿವಾಸಿಗಳೆಂದು ಘೋಷಿಸಲ್ಪಡುವ ಅಪಾಯವಿದ್ದು, ಕೊಡವರು ಜಾಗೃತರಾಗಬೇಕಾಗಿದೆ. ಒಂದು ವೇಳೆ ಕಾನೂನು ಮೀರಿ ಅಕ್ರಮ ವಲಸಿಗರು ಸ್ಥಳೀಯ ನಿವಾಸಿಗಳೆಂದು ಘೋಷಿಸಿಕೊಂಡು ಅಪರಾಧ ಕೃತ್ಯಗಳಲ್ಲಿ ಭಾಗಿಯಾದರೆ ಜಿಲ್ಲಾಡಳಿತವೇ ಇದಕ್ಕೆ ನೇರ ಹೊಣೆಯಾಗಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಬಿದ್ದಂಡ ಉಷಾ ದೇವಮ್ಮ, ಪಾಲಂದೀರ ರೀಟಾ, ನುಚ್ಚಿಮಣಿಯಂಡ ಸ್ವಾತಿ, ತಿರ್ಕಚೇರಿರ ಅನಿತಾ, ಚಂಇಂಡ ಕನ್ನಿಕ ಸೂರಜ್, ಕೊಚ್ಚಿರ ನಿಧಿ, ಚೊಟ್ಟೇರ ಪವಿತ್ರ, ನಂದೇಟಿರ ರವಿ, ಬಡುವಂಡ ವಿಜಯ, ಮೂರ್ನಾಡು ಕೊಡವ ಸಮಾಜದ ಅಧ್ಯಕ್ಷ ಪುದಿಯೊಕ್ಕಡ ಕಾಶಿ, ಪೆಮ್ಮುಡಿಯಂಡ ವೇಣು, ಬೊಳ್ಳಚೆಟ್ಟಿರ ಸುರೇಶ್, ಡಾ.ಚೌರೀರ ಜಗತ್, ಮತ್ತಿತರರು ಮಾನವ ಸರಪಳಿಯಲ್ಲಿ ಪಾಲ್ಗೊಂಡು ಹೋರಾಟಕ್ಕೆ ಬೆಂಬಲ ಸೂಚಿಸಿದರು.

ಚೋಂದಮ್ಮ ನಿಧನ



ನಾಪೋಕ್ಲು: ಸ್ಥಳೀಯ ಗ್ರಾಮದ ಹಳೇ ತಾಲೂಕು ನಿವಾಸಿ ಪಾಡಿಯಮ್ಮಂಡ ಮುತ್ತಮ್ಮಯ್ಯ ಅವರ ಧರ್ಮಪತ್ನಿ ಚೋಂದಮ್ಮ (78) ಶುಕ್ರವಾರ ನಿಧನರಾದರು. ಮೃತರ ಅಂತ್ಯಕ್ರಿಯೆಯು ಶುಕ್ರವಾರ ಕುಟುಂಬಸ್ಥರ ತೋಟದಲ್ಲಿ ನೆರವೇರಿಸಲಾಯಿತು. ದಿವಂಗತರು ಪತಿ ಮುತ್ತಮ್ಮಯ್ಯ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

ಇಂದು, ಸೆ.22ರಂದು ವಿದ್ಯುತ್ ವ್ಯತ್ಯಯ

ಮಡಿಕೇರಿ, ಸೆ.19– ಗಾಳಿಬೀಡು ಫೀಡರ್‌ನಲ್ಲಿ ದಸರಾ ಹಬ್ಬದ ಪ್ರಯುಕ್ತ ಫೀಡರ್ ನಿರ್ವಹಣಾ ಕಾಮಗಾರಿ ನಡೆಸಬೇಕಿರುವುದರಿಂದ ಸೆ.20 ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಸಂಪಿಗೆ ಕಟ್ಟೆ, ಕನ್ನಂಡಬಾಣೆ, ಎ.ವಿ ಶಾಲೆ, ಗದ್ದಿಗೆ, ಉಕ್ಕುಡ, ಅಜಾದ್‌ನಗರ, ತ್ಯಾಗರಾಜ ಕಾಲೋನಿ, ಅಬ್ಬಿಫಾಲ್ಸ್ ರಸ್ತೆ, ಭಗವತಿನಗರ, ಮಲ್ಲಿಕಾರ್ಜುನ ನಗರ, ರಾಣಿಪೇಟೆ, ಮಾರ್ಕೆಟ್, ಮಹದೇವಪೇಟೆ, ಕಾನ್ವೆಂಟ್ ಜಂಕ್ಷನ್, ಕೂರ್ಗ್ ಇಂಟರ್ ನ್ಯಾಷನಲ್, ಐ.ಟಿಐ ಹಿಂಭಾಗ, ಕಾವೇರಿ ಬಡಾವಣೆ, ಟಿಜಾನ್ ಬಡಾವಣೆ, ಅಬ್ದುಲ್ ಕಲಾಂ ಬಡಾವಣೆ, ಹೆಬ್ಬೆಟ್ಟಗೇರಿ, ದೇವಸ್ತೂರು, ಕೆಬಾಡಗ, ಗಾಳಿಬೀಡು, ಕಾಲೂರು, ಸಿದ್ದಿಕಾಡು, ವಣಚಲು, ಕೆ.ನಿಡುಗಣೆ, ಕುಂಡಾಮೇಸ್ತ್ರಿ, ಕುಡಿಯುವ ನೀರು, ಕೂಟುಹೊಳೆ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ದಸರಾ ಹಬ್ಬದ ಪ್ರಯುಕ್ತ ನಿರ್ವಹಣಾ ಕಾಮಗಾರಿ ನಿಮಿತ್ತ ಸೆ.20 ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಶಾಂತಿನಗರ, ಗಣಪತಿನಗರ, ಜೋಡುಬೀಟ್ಟೆ, ಕಾಫಿ ಬೋರ್ಡ್, ಅರುವತೋಕ್ಲು, ಗೋಣಿಕೊಪ್ಪಲು ನಗರ, ಕೊಪ್ಪ, ಪಟೇಲನಗರ, ನೇತಾಜಿ ಲೇಔಟ್, ಉಮಾ ಮಹೇಶ್ವರಿ ಲೇಔಟ್, ಗೋಣಿಕೊಪ್ಪಲು ಬಸ್ ನಿಲ್ದಾಣ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ತಿತಿಮತಿ ಫೀಡರ್‌ನಲ್ಲಿ ಸೆ.22 ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಬಾಲಾಜಿ, ರುದ್ರಬೀಡು, ಮಾಯಮುಡಿ, ಬೆಮ್ಮತ್ತಿ, ಕೋಣನಕಟ್ಟೆ ದೇವರಪುರ, ಅಂಬುಕೋಟೆ, ಕಲ್ಲಳ, ಭದ್ರಗೋಳ, ನೋಕ್ಯ, ತಿತಿಮತಿ, ಹೆಡತೊರೆ, ರೇಷ್ಮೆ, ಹೆಬ್ಬಾಲೆ, ಮರೂರು, ದೇವಮಚ್ಚಿ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಮಡಿಕೇರಿ ನಗರಸಭಾ ಕಚೇರಿ ಮೇಲೆ ಲೋಕಾಯುಕ್ತ ದಿಢೀರ್ ದಾಳಿ

● ಅಧಿಕಾರಿ, ಸಿಬ್ಬಂದಿ ವಿಚಾರಣೆ ● ದಾಖಲಾತಿಗಳ ಪರಿಶೀಲನೆ
● ಸಾರ್ವಜನಿಕರ ವ್ಯಾಪಕ ದೂರಿನ ಹಿನ್ನೆಲೆಯಲ್ಲಿ ದಾಳಿ

ಮಡಿಕೇರಿ,ಸೆ.19– ಮಡಿಕೇರಿ ನಗರ ಸಭೆ ಕಚೇರಿ ಮೇಲೆ ಲೋಕಾಯುಕ್ತ ಅಧಿಕಾರಿಗಳ ಎರಡು ತಂಡ ಶುಕ್ರವಾರ ಬೆಳಗಿನ ವೇಳೆ ದಿಢೀರ್ ದಾಳಿ ನಡೆಸಿತು. ನಗರ ಸಭೆಯಲ್ಲಿ ಕಡತಗಳ ವಿಳಂಬ, ಸಕಾಲದಲ್ಲಿ ಸಾರ್ವಜನಿಕ ಸೇವೆಗಳು ಅಲಭ್ಯ, ಸಹಿತ ಭ್ರಷ್ಟಾಚಾರದ ಬಗ್ಗೆ ಹಲವು ಸಮಯಗಳಿಂದ ಸಾರ್ವಜನಿಕರಿಂದ ದೂರುಗಳು ಕೇಳಿ ಬಂದಿದ್ದವು. ಈ ಹಿನ್ನೆಲೆಯಲ್ಲಿ ಮೈಸೂರು ಮತ್ತು ಕೊಡಗು ಲೋಕಾಯುಕ್ತ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ನಗರ ಸಭೆ ಮೇಲೆ ಏಕಾಏಕಿ ದಾಳಿ ನಡೆಸಿದರು.

ಅಧಿಕಾರಿ, ಸಿಬ್ಬಂದಿ ವಿಚಾರಣೆ: ಕೋರ್ಟ್ ಮೂಲಕ ಸರ್ಚ್ ವಾರೆಂಟ್ ಪಡೆದು ನಗರ ಸಭೆ ಕಚೇರಿಗೆ ಆಗಮಿಸಿದ ಮೈಸೂರು ಲೋಕಾಯುಕ್ತ ಡಿವೈಎಸ್‌ಪಿ ವೆಂಕಟೇಶ್ ಮತ್ತು ಕೊಡಗು ಲೋಕಾಯುಕ್ತ ಡಿವೈಎಸ್‌ಪಿ ದಿನಕರ ಶೆಟ್ಟಿ ನೇತೃತ್ವದಲ್ಲಿ ಲೋಕಾಯುಕ್ತ ಸಿಬ್ಬಂದಿಗಳು ಮೊದಲಿಗೆ ಎಲ್ಲಾ ಸಿಬ್ಬಂದಿಗಳನ್ನು ನಗರ ಸಭೆಯ ಸಭಾಂಗಣಕ್ಕೆ ಕರೆಸಿದರು. ಬಳಿಕ ಕಂದಾಯ ವಿಭಾಗ, ಆರೋಗ್ಯ, ಇಂಜಿನಿಯರಿಂಗ್ ವಿಭಾಗ, ಹಣಕಾಸು ಸೇರಿದಂತೆ ವಿವಿಧ ವಿಭಾಗಗಳ ಸಿಬ್ಬಂದಿಗಳನ್ನು ಪ್ರತ್ಯೇಕವಾಗಿ ಕರೆದು ಕಡತಗಳ ಪರಿಶೀಲನೆ ನಡೆಸಿದರು.



ದಾಖಲೆಗಳನ್ನು ಪರಿಶೀಲಿಸುತ್ತಿರುವ ಲೋಕಾಯುಕ್ತ ಅಧಿಕಾರಿಗಳು.

ಸಾರ್ವಜನಿಕರು ವಿವಿಧ ಸೇವೆಗಳಿಗೆ ನೀಡಿರುವ ಅರ್ಜಿಗಳು, ನಗರ ಸಭೆಯಿಂದ ಒದಗಿಸಲಾಗುತ್ತಿರುವ ಸೇವೆ, ತೆರಿಗೆ ಸಂಗ್ರಹ, ಸರಕಾರದ ಅನುದಾನ ವಿನಿಯೋಗ, ಅಂಗಡಿ ಮಳಿಗೆ ಬಾಡಿಗೆ, ಉದ್ದಿಮೆ ಪರವಾನಗಿ ವಿತರಣೆ, ಕಡತಗಳ ವಿಲೇವಾರಿ ವಿಳಂಬಕ್ಕೆ ಕಾರಣ ಮತ್ತಿತ್ತರ ವಿಚಾರಗಳ ಕುರಿತು ಪೌರಾಯುಕ್ತ ರಮೇಶ್ ಮತ್ತು ವಿವಿಧ ವಿಭಾಗಗಳ ಉಸ್ತುವಾರಿ ಅಧಿಕಾರಿಗಳನ್ನು ವಿಚಾರಣೆ ನಡೆಸಿದರು.

ಕಚೇರಿಗೆ ಸದಸ್ಯರ ದೌಡು: ನಗರ ಸಭೆ ಕಚೇರಿ ಮೇಲೆ ಲೋಕಾಯುಕ್ತ ದಾಳಿ ವಿಚಾರ ತಿಳಿಯುತ್ತಿದ್ದಂತೆಯೇ ನಗರಸಭಾ ಸದಸ್ಯರು ಕಚೇರಿಗೆ ಆಗಮಿಸುತ್ತಿದ್ದುದು ಕಂಡು ಬಂತು. ಆದರೆ ಮೊದಲೇ ಲೋಕಾಯುಕ್ತ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ನಗರಸಭೆ ಕಚೇರಿ ಸಿಬ್ಬಂದಿಗಳನ್ನು ಮಾತ್ರವೇ ಒಳ ಬಿಟ್ಟು ಸಾರ್ವಜನಿಕರನ್ನು ಕಚೇರಿಯಿಂದ ಹೊರ ಕಳುಹಿಸಿದ್ದರು. ಮಾತ್ರವಲ್ಲದೇ ಕಚೇರಿ ಪ್ರವೇಶಿಸುವ ಎಲ್ಲಾ ದ್ವಾರಗಳನ್ನು ಬಂದ್ ಮಾಡಿದ್ದ ಹಿನ್ನೆಲೆಯಲ್ಲಿ ಸದಸ್ಯರು ಕೂಡ ಕಚೇರಿ ಆವರಣದಲ್ಲೇ ಕಾದು ಕುಳಿತಿದ್ದು ಕಂಡು ಬಂತು. ಶುಕ್ರವಾರ ಸಂತೆ ದಿನವಾದ ಹಿನ್ನೆಲೆಯಲ್ಲಿ ಸಾರ್ವಜನಿಕರು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ನಗರ ಸಭೆಗೆ ತಮ್ಮ ಕೆಲಸ ಕಾರ್ಯಕ್ಕೆ ಆಗಮಿಸಿದ್ದರು.

ರೋಗಿಗಳನ್ನು ಅತ್ಯಂತ ಕಾಳಜಿಯಿಂದ ಪರೀಕ್ಷಿಸಿ

ಆಸ್ಪತ್ರೆಯ ಆರೋಗ್ಯ ರಕ್ಷಾ ಸಮಿತಿ ಸಭೆಯಲ್ಲಿ ಶಾಸಕರ ಖಡಕ್ ಸೂಚನೆ



ಆರೋಗ್ಯ ರಕ್ಷಾ ಸಮಿತಿ ಸಭೆ ಶಾಸಕ ಪೊನ್ನಣ್ಣ ಅಧ್ಯಕ್ಷತೆಯಲ್ಲಿ ನಡೆಯಿತು.

ವಿರಾಜಪೇಟೆ: ತಮ್ಮ ಬಳಿಗೆ ಬರುವ ಎಲ್ಲಾ ರೋಗಿಗಳನ್ನು ಅತ್ಯಂತ ಕಾಳಜಿಯಿಂದ ಪರೀಕ್ಷಿಸಿ, ಸೂಕ್ತ ವೈದ್ಯಕೀಯ ಚಿಕಿತ್ಸೆ ನೀಡುವಂತೆ ಶಾಸಕ ಅಜ್ಜಿಕುಟ್ಟಿರ ಎಸ್ ಪೊನ್ನಣ್ಣ ವೈದ್ಯರಿಗೆ ಸೂಚಿಸಿದ್ದಾರೆ.

ಸಾರ್ವಜನಿಕ ಆಸ್ಪತ್ರೆಯಲ್ಲಿ ಬುಧವಾರ ನಡೆದ ಆರೋಗ್ಯ ರಕ್ಷಾ ಸಮಿತಿ ಸಭೆಯಲ್ಲಿ ವೈದ್ಯಾಧಿಕಾರಿಗಳೊಂದಿಗೆ ಮಾತನಾಡಿ ತಮ್ಮ ಬಳಿಗೆ ಬರುವ ಎಲ್ಲಾ ರೋಗಿಗಳನ್ನು ಅತ್ಯಂತ ಕಾಳಜಿಯಿಂದ ಪರೀಕ್ಷಿಸಿ ಸೂಕ್ತ ವೈದ್ಯಕೀಯ ಚಿಕಿತ್ಸೆ ಹಾಗೂ ಸಲಹೆಗಳನ್ನು ನೀಡಬೇಕೆಂದು ಆದೇಶಿಸಿದರು. ಆಸ್ಪತ್ರೆಯಲ್ಲಿ ಕಳೆದ ಎರಡು ವರ್ಷಗಳಿಂದ ಸ್ತ್ರೀ ರೋಗ ತಜ್ಞರು, ಕಳೆದ ಒಂದು ವರ್ಷಗಳಿಂದ ಮಕ್ಕಳ ತಜ್ಞರು, ಹಾಗೂ ಮೂಳೆ ತಜ್ಞರು ಇಲ್ಲದೆ ರೋಗಿಗಳನ್ನು ಬೇರೆ ಬೇರೆ ಆಸ್ಪತ್ರೆಗೆ ಕಳುಹಿಸುತ್ತಿರುವ ಬಗ್ಗೆ ಮಾಹಿತಿ ಬಯಸಿದರು.

ಆಸ್ಪತ್ರೆ ಮುಖ್ಯ ವೈದ್ಯಾಧಿಕಾರಿ ವಿಶ್ವನಾಥ ಸಿಂಪಿ ಮಾಹಿತಿ ನೀಡಿ ಈ ಆಸ್ಪತ್ರೆಗೆ ಅನೇಕ ವೈದ್ಯರು ಬಂದು ಕೆಲವು ದಿನಗಳ ಕಾಲ ಇದ್ದು ತಕ್ಷಣ ಬೇರೆ ಆಸ್ಪತ್ರೆಗೆ ಹೋಗುತ್ತಿದ್ದಾರೆ. ಖಾಯಂ ಆಗಿ ಕಾರ್ಯ ನಿರ್ವಹಿಸಲು ವೈದ್ಯ ನೇಮಕ ಮಾಡಬೇಕು. ಅಲ್ಲದೆ ಸುಮಾರು ಇಪ್ಪತ್ತು ವರ್ಷಗಳ ಕಾಲ ಈ ಕೇಂದ್ರದಲ್ಲಿ ಕಾರ್ಯ ನಿರ್ವಹಿಸಿದ ಎಲ್ಲಾ ಸಿಬ್ಬಂದಿಗಳನ್ನು ಬೇರೆ ಕಡೆಗೆ ವರ್ಗಾವಣೆ ಮಾಡುವ ಸರಕಾರದ ಆದೇಶದಿಂದ ಉತ್ತಮ ರೀತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಶುಶ್ರೂಕಿಯರನ್ನು ಕೂಡ ವರ್ಗಾವಣೆ ಮಾಡಲಾಗಿದೆ ಎಂದು ತಿಳಿಸಿದರು.

ತಾಲೂಕು ವೈದ್ಯಾಧಿಕಾರಿ ಯತಿರಾಜ್, ಆಸ್ಪತ್ರೆಯ ಎಲ್ಲಾ ವೈದ್ಯರು, ಪುರಸಭೆ ಅಧ್ಯಕ್ಷೆ ಎಂ.ಕೆ.ದೇಚಮ್ಮ, ಮುಖ್ಯಾಧಿಕಾರಿ ನಾಚಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಜಿ ಪೂಣಚ್ಚ, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ತಿತೀರ ಧರ್ಮಜ ಉತ್ತಪ್ಪ, ರಕ್ಷಾ ಸಮಿತಿಯ ಸದಸ್ಯರಾದ ಕುಂಡಚೀರ ಮಂಜು ದೇವಯ್ಯ, ಮಂಡೆಟೀರ ಅನಿಲ್ ಅಯ್ಯಪ್ಪ, ಸಂತೋಷ್ ಕುಮಾರ್, ಶೀಬಾ ಪೃಥ್ವಿನಾಥ್, ಸೈಯದ್ ಶಬೀರ್, ಅನಿತಾ, ಕಿಶೋರ್, ಅನಿತಾ ಪ್ರಸನ್ನ, ಜಿಲ್ಲಾ ಆರೋಗ್ಯ ಅಧಿಕಾರಿ, ತಾಲೂಕು ಅಧಿಕಾರಿ, ಪುರಸಭೆ ಸದಸ್ಯ ಮತೀನ್, ವೈದ್ಯರು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

ಸೆ.28, ಮಡಿಕೇರಿಯಲ್ಲಿ ಮಹಿಳಾ ದಸರಾ ಸಂಭ್ರಮ

ಮಡಿಕೇರಿ: ಮಡಿಕೇರಿ ನಗರ ದಸರಾ ಸಾಂಸ್ಕೃತಿಕ ಸಮಿತಿ ವತಿಯಿಂದ 8ನೇ ವರ್ಷದ ಮಹಿಳಾ ದಸರಾ ಆಯೋಜಿಸಲಾಗಿದ್ದು, ಸೆ.28 ರಂದು ನಡೆಯಲಿದೆ. ವೈವಿಧ್ಯಮಯ ಸ್ಪರ್ಧೆಗಳನ್ನು ಜಿಲ್ಲೆಯ ಮಹಿಳೆಯರಿಗಾಗಿ ಆಯೋಜಿಸಲಾಗಿದೆ ಎಂದು ಸಮಿತಿ ಅಧ್ಯಕ್ಷ ಕುಡೆಕಲ್ ಸಂತೋಷ್ ತಿಳಿಸಿದ್ದಾರೆ.

ಮಹಿಳಾ ದಸರಾ ಅಂಗವಾಗಿ ಜಿಲ್ಲೆಯ ಮಹಿಳೆಯರಿಗಾಗಿಯೇ ವೈವಿಧ್ಯಮಯ ಸ್ಪರ್ಧೆಗಳು, ಕಾರ್ಯಕ್ರಮಗಳು ನಗರದ ಗಾಂಧಿ ಮೈದಾನದ ಕಲಾಸಂಭ್ರಮ ಸಭಾಂಗಣದಲ್ಲಿ ಮಡಿಕೇರಿ ದಸರಾ ಸಮಿತಿ, ಮಡಿಕೇರಿ ನಗರ ಸಭೆ ಅಧ್ಯಕ್ಷರು, ಸದಸ್ಯೆಯರು, ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗದಲ್ಲಿ ಆಯೋಜಿಸಲಾಗಿದೆ.

ಆಸಕ್ತರು ಸಬಿತಾ (8660180251), ಸವಿತಾ(9483785810) ಅವರನ್ನು ಸಂಪರ್ಕಿಸಬಹುದಾಗಿದೆ ಈ ಸಂಬಂಧ ನಡೆದ ಪೂರ್ವಭಾವಿ ತಯಾರಿ ಸಭೆಯಲ್ಲಿ ನಗರಸಭೆ ಹಾಗೂ ನಗರ ದಸರಾ ಸಮಿತಿ ಅಧ್ಯಕ್ಷೆ ಪಿ.ಕಲಾವತಿ, ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಸಂತೋಷ್, ದಸರಾ ಸಮಿತಿ ಖಜಾಂಚಿ ಸಬಿತಾ, ಮಹಿಳಾ ದಸರಾ ಸದಸ್ಯೆಯರಾದ ಪವಿತ್ರ ಗಿರೀಶ್, ಪ್ರೇಮ, ಜಶ್ಮಿತಾ, ನೇತ್ರ ಇದ್ದರು.

ಶಿಕ್ಷಕ ವೃತ್ತಿ ಬಹಳ ಶ್ರೇಷ್ಠ, ಮಹತ್ವವಾದದ್ದು

ಚಾಮರಾಜನಗರ ಜಿಲ್ಲೆಯ ಅತ್ಯುತ್ತಮ ಶಿಕ್ಷಕರುಗಳಿಗೆ ಪ್ರಶಸ್ತಿ ಪ್ರದಾನ



ಚಾಮರಾಜನಗರ ಜಿಲ್ಲೆಯ ಸಾಧಕ ಶಿಕ್ಷಕರಿಗೆ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಚಾಮರಾಜನಗರ, ಸೆ19– ದೇಶದ ಭವಿಷ್ಯದ ಸತ್ಪ್ರಜೆಗಳನ್ನು ರೂಪಿಸುವ ಶಿಕ್ಷಕ ವೃತ್ತಿ ಬಹಳ ಶ್ರೇಷ್ಠ ಹಾಗೂ ಮಹತ್ವವಾದದ್ದು ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಅಭಿಪ್ರಾಯಪಟ್ಟರು.

ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಜಿಲ್ಲಾ ಮತ್ತು ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಹಾಗೂ ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಉದ್ಘಾಟಿಸಿ, ಡಾ. ಎಸ್.ರಾಧಾಕೃಷ್ಣನ್ ಹಾಗೂ ಸಾವಿತ್ರಿ ಬಾಪುಲೆ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಅವರು ಮಾತನಾಡಿದರು.

ಶಿಕ್ಷಕರು ಶಾಲೆಗಳಲ್ಲಿ ಪಾಠ, ಪ್ರವಚನ ಮಾಡಬಲ್ಲರು, ಹಾಗೆಯೇ ಶಿಕ್ಷಕರಾಗಿದ್ದ ಮಾಜಿ ರಾಷ್ಟ್ರಪತಿ ಡಾ. ರಾಧಾಕೃಷ್ಣನ್ ರಂತೆ ದೇಶದ ಆಡಳಿತದ ಚುಕ್ಕಾಣಿ ಹಿಡಿಯಬಲ್ಲರು. ಮಹಾತ್ಮ ಜ್ಯೋತಿ ಬಾಪುಲೆ ಅವರು ಮಹಿಳೆಯರಿಗೆ ದೇಶದಲ್ಲಿಯೇ ಮೊದಲಬಾರಿಗೆ ಶಾಲೆಗಳನ್ನು ತೆರೆದು ಶಿಕ್ಷಣ ನೀಡಿದರು. ಅವರ ಪತ್ನಿ ಸಾವಿತ್ರಿ ಬಾಪುಲೆ ದೇಶದ ಮೊದಲ ಶಿಕ್ಷಕಿಯಾಗಿ ಶಿಕ್ಷಕ ವೃತ್ತಿಯ ಶ್ರೇಷ್ಠತೆಯನ್ನು ಸಾರಲು ಧೈರ್ಯದಿಂದ ಮುನ್ನುಗ್ಗಿದರು. ಭಾವಿ ಸತ್ಪ್ರಜೆಗಳನ್ನು ರೂಪಿಸುವ ಜವಾಬ್ದಾರಿ ಎಲ್ಲಾ ಶಿಕ್ಷಕರಿಗೂ ಇದೆ ಎಂದು ಶಾಸಕ ಸಿ. ಪುಟ್ಟರಂಗಶೆಟ್ಟಿ ತಿಳಿಸಿದರು.

ಶಾಸಕ ಎ.ಆರ್.ಕೃಷ್ಣಮೂರ್ತಿ, ಮೈಸೂರು ಮಹಾರಾಜ ಕಾಲೇಜಿನ ಪ್ರಾಧ್ಯಾಪಕ ಡಾ. ಬಿಪಿನ್ ನಾಗರಾಜು, ಕರ್ನಾಟಕ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಎಚ್.ವಿ.ಚಂದ್ರು ಹಾಗೂ ನಗರಸಭಾ ಸದಸ್ಯ ಎಂ.ಮಹೇಶ್, ಶಿಕ್ಷಕರ ದಿನ ಆಚರಣೆಯ ಪ್ರಾಮುಖ್ಯತೆ ಕುರಿತು ಕಾರ್ಯಕ್ರಮದಲ್ಲಿ ಮಾತನಾಡಿದರು.

ಇದೇ ವೇಳೆ ಕಿರಿಯ ಪ್ರಾಥಮಿಕ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿಭಾಗದಲ್ಲಿ ಆಯ್ಕೆಯಾದ ಶಿಕ್ಷಕರಿಗೆ ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಅಲ್ಲದೆ, ನಿವೃತ್ತ ಶಿಕ್ಷಕರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು. ಕಾರ್ಯಕ್ರಮದ ಆರಂಭದಲ್ಲಿ ಮೃತ ಶಿಕ್ಷಕರ ಗೌರವಾರ್ಥ ಒಂದು ನಿಮಿಷಗಳ ಕಾಲ ಮೌನ ಆಚರಿಸಲಾಯಿತು.

ಕಾವೇರಿ ಜಲಾನಯನ ಯೋಜನೆಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಿ.ಮರಿಸ್ವಾಮಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನಾ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಸ್. ಚಂದ್ರ ಪಾಟೀಲ್, ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಶೆಟ್ಟಿ, ಜಿಲ್ಲಾ ಹಾಗೂ ತಾಲೂಕು ಮಟ್ಟದ ಎಲ್ಲಾ ಶಿಕ್ಷಕರ ಸಂಘಗಳು, ಬೋಧಕ, ಬೋಧಕೇತರ ಸಂಘಗಳು, ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆಯ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ವೇದಿಕೆ ಕಾರ್ಯಕ್ರಮಕ್ಕೂ ಮೊದಲು ನಗರದ ಜಿಲ್ಲಾಡಳಿತ ಭವನದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಗಣ್ಯರು ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು. ಬಳಿಕ ಪೇಟೆ ಪ್ರೈಮರಿ ಶಾಲೆಯಿಂದ ಡಾ. ಬಿ.ಆರ್. ಅಂಬೇಡ್ಕರ್ ಭವನದವರೆಗೆ ಡಾ. ಎಸ್. ರಾಧಾಕೃಷ್ಣನ್ ಹಾಗೂ ಸಾವಿತ್ರಿ ಬಾಪುಲೆ ಅವರ ಭಾವಚಿತ್ರಗಳ ಮೆರವಣಿಗೆ ಆಕರ್ಷಕ ಕಲಾತಂಡಗಳೊಂದಿಗೆ ನಡೆಯಿತು.

ಚರಂಡಿ ಸ್ವಚ್ಛ ಮಾಡಿಸದ, ರಸ್ತೆ ಗುಂಡಿ ಮುಚ್ಚದ ಅಜ್ಜಿಪುರ ಗ್ರಾಪಂ ಕಚೇರಿಗೆ ಮುಳ್ಳಾಕಿದ ಗ್ರಾಮಸ್ಥ

ಸ್ಥಳಕ್ಕೆ ಪೊಲೀಸರ ಭೇಟಿ, ಮುಳ್ಳಾಕಿದ ವ್ಯಕ್ತಿಯಿಂದ ತಪ್ಪೊಪ್ಪಿಗೆ, ಲಿಖಿತ ದೂರು ನೀಡಲು ಸೂಚನೆ

ಹನೂರು: ಗ್ರಾಮದ ಚರಂಡಿಯ ಕಸ ಕಡ್ಡಿಗಳನ್ನು ತೆರವುಗೊಳಿಸದೆ ಇರುವುದು, ರಸ್ತೆಯ ಗುಂಡಿಗಳನ್ನು ಮುಚ್ಚಿಸಿಲ್ಲ ಎಂದು ಆರೋಪಿಸಿ ವ್ಯಕ್ತಿಯೋರ್ವ ಗ್ರಾಮ ಪಂಚಾಯಿತಿ ಕಚೇರಿಗೆ ಮುಳ್ಳು ಹಾಕಿರುವ ಘಟನೆ ತಾಲೂಕಿನ ಅಜ್ಜಿಪುರ ಗ್ರಾಮದಲ್ಲಿ ಜರುಗಿದೆ.

ಹನೂರು ತಾಲೂಕಿನ ಅಜ್ಜಿಪುರ ನಿವಾಸಿ ಮನ್ನಾದೇಗೌಡ ಎಂಬುವರು ಗ್ರಾಪಂ ಕಚೇರಿ ಮುಂಭಾಗ ಮುಳ್ಳು ಹಾಕಿ ಗ್ರಾಮ ಪಂಚಾಯಿತಿ ಕಾರ್ಯವೈಖರಿಯ ಬಗ್ಗೆ ಹೀಗೂ ಆಕ್ರೋಶ ವ್ಯಕ್ತಪಡಿಸಬಹುದು ಎಂದು ತೋರಿಸಿಕೊಟ್ಟಿದ್ದಾರೆ.



ಗ್ರಾಪಂ ಕಚೇರಿಯ ಬಾಗಿಲಿಗೆ ಮುಳ್ಳು ಹಾಕಿ ಮುಚ್ಚಿರುವುದು.

ಅಜ್ಜೀಪುರ ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನದ ವನ್ನಿ ಕುಲ ಕ್ಷತ್ರಿಯ ಬಡಾವಣೆಯಲ್ಲಿನ ಚರಂಡಿಗಳೆಲ್ಲ ಕಸ ಕಡ್ಡಿಗಳಿಂದ ತುಂಬಿಕೊಂಡು ಗಬ್ಬುನಾರುತ್ತಿದೆ. ಇದರಿಂದ ನೀರು ಸರಾಗವಾಗಿ ಮುಂದೆ ಹೋಗದೆ ಇರುವುದರಿಂದ ಕೊಳಚೆ ನೀರಿನಲ್ಲಿ ಸೊಳ್ಳೆಗಳು ಹಾಗೂ ಇನ್ನಿತರ ಕ್ರಿಮಿಕೀಟಗಳು ಉತ್ಪತ್ತಿಯಾಗುತ್ತಿರುವುದರಿಂದ ಈ ಭಾಗದ ಜನ ಸಾಂಕ್ರಾಮಿಕ ರೋಗದ ಭೀತಿಯಲ್ಲಿದ್ದಾರೆ. ಚರಂಡಿ ಸ್ವಚ್ಛಗೊಳಿಸುವಂತೆ ಹಾಗೂ ಗ್ರಾಮದ ಮುಖ್ಯ ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ಅದನ್ನು ಮುಚ್ಚಿ ವಿದ್ಯಾರ್ಥಿಗಳು ಹಾಗೂ ವಯೋವೃದ್ಧರಿಗೆ ಅನುಕೂಲ ಕಲ್ಪಿಸುವಂತೆ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಈ ನಿಟ್ಟಿನಲ್ಲಿ ಬೇಸತ್ತು ಮುಳ್ಳು ಹಾಕಿರುವುದಾಗಿ ತಿಳಿಸಿದ್ದಾರೆ.

ಗ್ರಾಮ ಪಂಚಾಯಿತಿ ಕಚೇರಿಗೆ ಮುಳ್ಳು ಹಾಕಿರುವ ವಿಚಾರ ತಿಳಿಯುತ್ತಿದ್ದಂತೆ ಗ್ರಾಮಸ್ಥರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಬಂದ 112 ಪೊಲೀಸರು ಮುಳ್ಳು ಹಾಕಿದ್ದ ವ್ಯಕ್ತಿಯಿಂದ ಮಾಹಿತಿ ಪಡೆದುಕೊಂಡಿದ್ದಾರೆ. ಈ ವೇಳೆ ಪೊಲೀಸರು ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಲಿಖಿತವಾಗಿ ಗ್ರಾಮ ಪಂಚಾಯಿತಿಗೆ ದೂರು ನೀಡಬೇಕು. ಅದನ್ನು ಬಿಟ್ಟು ಇಂತಹ ಕೆಲಸವನ್ನು ಮಾಡಬಾರದು. ಇದು ಮತ್ತೊಮ್ಮೆ ಮುಂದುವರೆದರೆ ನಿಮ್ಮ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಗ್ರಾಮ ಪಂಚಾಯಿತಿಯವರು ಯಾವುದೇ ದೂರು ನೀಡದೇ ಇರುವುದರಿಂದ ಮುಳ್ಳು ಹಾಕಿದ್ದ ವ್ಯಕ್ತಿ ಇನ್ನು ಮುಂದೆ ಇಂತಹ ಕೆಲಸಗಳನ್ನು ಮಾಡುವುದಿಲ್ಲ ಎಂದು ತಪ್ಪೊಪ್ಪಿಗೆ ಬರೆದುಕೊಟ್ಟ ನಂತರ ಪೊಲೀಸರು ವಾಪಸ್ ತೆರಳಿದ್ದಾರೆ.

ಜಾತಿಗಣತಿಯಲ್ಲಿ ಮರಾಠ ಎಂದು ನಮೂದಿಸಲು ವೆಂಕಟರಾವ್ ಸಾಠೆ ಮನವಿ



ಸುದ್ದಿಗೋಷ್ಠಿಯಲ್ಲಿ ಮರಾಠ ಪರಿಷತ್ ಜಿಲ್ಲಾಧ್ಯಕ್ಷ ವೆಂಕಟರಾವ್ ಸಾಠೆ ಮಾತನಾಡಿದರು.

ಚಾಮರಾಜನಗರ: ರಾಜ್ಯ ಸರ್ಕಾರ ಹಿಂದುಳಿದ ವರ್ಗದ ಆಯೋಗದ ಮೂಲಕ ನಡೆಸುವ ಜಾತಿಗಣತಿ ಸಮೀಕ್ಷೆಯಲ್ಲಿ ಮರಾಠ ಜನಾಂಗದವರು ಜಾತಿ ಕಾಲಂನಲ್ಲಿ ಮರಾಠ ಎಂದು ನಮೂದಿಸುವಂತೆ ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ ಜಿಲ್ಲಾಧ್ಯಕ್ಷ ವೆಂಕಟರಾವ್ ಸಾಠೆ ಮನವಿ ಮಾಡಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಸೆ.22 ರಿಂದ ನಡೆಯುವ ಜಾತಿಗಣತಿ ಸಮೀಕ್ಷೆಯಲ್ಲಿ ಸೂಕ್ತ ಮಾಹಿತಿ ನೀಡಬೇಕು. ಜಿಲ್ಲೆಯಲ್ಲಿ 250ಕ್ಕೂ ಹೆಚ್ಚು ಮರಾಠ ಕುಟುಂಬಗಳಿದ್ದು 150 ಒಳಪಂಗಡಗಳಿವೆ. ಜನಾಂಗವು 3ಬಿ ಇದ್ದು 2 ಎಗೆ ಸೇರಿಸುವಂತೆ ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮರಾಠ ಪರಿಷತ್ತು ಜಿಲ್ಲಾ ಉಪಾಧ್ಯಕ್ಷ ಚಂದ್ರಶೇಖರರಾವ್, ಮಮತಬಾಯಿ, ಸಹ ಕಾರ್ಯದರ್ಶಿ ಶ್ರೀನಿವಾಸರಾವ್ ಹಾಜರಿದ್ದರು.

ಸೆ.23, ವಿದ್ಯುತ್ ಸಂಬಂಧಿತ ಜನಸಂಪರ್ಕ ಸಭೆ

ಚಾಮರಾಜನಗರ: ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ವಿದ್ಯುತ್ ಸಂಬಂಧ ಜನಸಂಪರ್ಕ ಸಭೆಯನ್ನು ಕಾರ್ಯ ಮತ್ತು ಪಾಲನಾ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಅಧ್ಯಕ್ಷತೆಯಲ್ಲಿ ಸೆ.23ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 12 ಗಂಟೆಯವರೆಗೆ ನಗರ ಉಪವಿಭಾಗ ಕಚೇರಿ ಆವರಣದಲ್ಲಿ ನಡೆಸಲಾಗುವುದು.

ಜಾನಪದ ಕಲೆಯ ಮೂಲಕ ಎಲ್ಲವನ್ನೂ ಸಾಧಿಸಬಹುದು

ಚಾಮರಾಜನಗರ: ಜಿಲ್ಲೆಯು ಜಾನಪದ ತವರೂರಾಗಿದ್ದು, ಕಲೆಯ ಮೂಲಕ ಎಲ್ಲವನ್ನು ಸಾಧಿಬಹುದು ಎಂದು ತಿ.ನರಸೀಪುರ ನಳಂದ ಭೌದ್ಧ ವಿಹಾರದ ಭೋಧಿ ರತ್ನ ಬಂತೇಜಿ ಹೇಳಿದರು.

ನಗರದ ವರನಟ ಡಾ. ರಾಜ್‌ಕುಮಾರ್ ರಂಗಮಂದಿರದಲ್ಲಿ ಜ್ಞಾನದೀಪ ಟ್ರಸ್ಟ್ ವತಿಯಿಂದ 2 ದಿನಗಳ ಕಾಲ ಆಯೋಜಿಸಿರುವ ಜಿಲ್ಲಾ ಮಟ್ಟದ ಭಾವಗೀತೆ ಹಾಗೂ ಜಾನಪದ ಗೀತೆಗಳ ಗಾಯನ ಸ್ಪರ್ಧೆ ಕಾರ್ಯಕ್ರಮವನ್ನು ಉದ್ಘಾಟಿಸಿ, ಸಾನಿಧ್ಯ ವಹಿಸಿ ಮಾತನಾಡಿದರು.

ಜ್ಞಾನದೀಪ ಟ್ರಸ್ಟ್ ಜಿಲ್ಲಾ ಮಟ್ಟದ ಭಾವಗೀತೆ ಹಾಗೂ ಜಾನಪದ ಗೀತೆಗಳ ಗಾಯನ ಸ್ಪರ್ಧೆ ಅಯೋಜಿಸುವ ಮೂಲಕ ಪ್ರತಿಭೆಗಳಿಗೆ ಒಂದು ವೇದಿಕೆ ಕಲ್ಪಿಸಿಕೊಟ್ಟಿರುವುದು ಒಳ್ಳೆಯ ಕಾರ್ಯಕ್ರಮವಾಗಿದೆ. ವಿದ್ಯಾರ್ಥಿಗಳು ಕಲೆಯ ಮೂಲಕ ಏನನ್ನು ಬೇಕಾದರೂ ಸಾಧಿಸಬಹುದಾಗಿದೆ. ಕಲೆಯು ಯಾರ ಮನೆ ಸೊತ್ತಲ್ಲ. ಬಡವ–ಶ್ರೀಮಂತ ಎಂಬ ಭೇಧಭಾವ ಇಲ್ಲ. ಕಲೆಯು ಎಲ್ಲರಲ್ಲೂ ಅಡಗಿದೆ ಅದನ್ನು ಗುರುತಿಸಲು ಒಂದು ವೇದಿಕೆ ಅವಶ್ಯಕವಾಗಿದೆ ಎಂದರು.



ಜಿಲ್ಲಾ ಮಟ್ಟದ ಭಾವಗೀತೆ ಹಾಗೂ ಜಾನಪದ ಗೀತೆಗಳ ಗಾಯನ ಸ್ಪರ್ಧೆ ಕಾರ್ಯಕ್ರಮವನ್ನು ಉದ್ಘಾಟಿಸಿದ ಗಣ್ಯರು.

ಡಾ.ರಾಜ್‌ಕುಮಾರ್ ಅವರು ಜಿಲ್ಲೆಯ ಸಿಂಗನಲ್ಲೂರಿನಲ್ಲಿ ಹುಟ್ಟಿ ಗಾಜನೂರಿನಲ್ಲಿ ಬೆಳೆದು ಚಿತ್ರರಂಗದಲ್ಲಿ ಉನ್ನತ ಮಟ್ಟದಲ್ಲಿ ಬೆಳೆದು ಇಡೀ ವಿಶ್ವದಲ್ಲಿ ಗುರುತಿಸಿಕೊಂಡಿದ್ದರು. ಅವರು ಹುಟ್ಟಿನಿಂದ ಎಲ್ಲವನ್ನು ಪಡೆದುಕೊಂಡು ಬಂದರವಲ್ಲ. ಕಲೆ ಮೂಲಕ ಗುರುತಿಸಿಕೊಂಡವರು. ಅಲ್ಲದೆ ಅನೇಕ ಕಲಾವಿದರು ಕಲೆಯ ಮೂಲಕವೇ ಜಿಲ್ಲೆ, ರಾಜ್ಯ, ದೇಶ, ವಿದೇಶದಲ್ಲಿ ಗುರುತಿಸಿಕೊಂಡಿದ್ದಾರೆ ಎಂದರು.

ಸ್ಪರ್ಧೆ ಎಂದ ಮೇಲೆ ಸೋಲು, ಗೆಲುವು ಸಹಜವಾದದ್ದು, ಸ್ಪರ್ಧೆಯಲ್ಲಿ ಸೋತವರು ಮುಂದಿನ ದಿನಗಳಲ್ಲಿ ಗೆದ್ದೇಗೆಲ್ಲುತ್ತೇನೆ ಎಂಬ ಆತ್ಮ ವಿಶ್ವಾಸದೊಂದಿಗೆ ಮುನ್ನಡೆಯಬೇಕು. ವಿದ್ಯಾರ್ಥಿಗಳು ಕಲೆಯಲ್ಲಿ ಭಾಗವಹಿಸುವ ಜೊತೆಗೆ ವಿದ್ಯಾಭ್ಯಾಸ ಮುಂಚೂಣಿಯಲ್ಲಿ ಹೋಗಬೇಕು ಎಂದು ಸಲಹೆ ನೀಡಿದರು.

ಜ್ಞಾನದೀಪ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷರು, ನಗರಸಭಾ ಸದಸ್ಯ ಆರ್.ಪಿ.ನಂಜುಂಡಸ್ವಾಮಿ ಪ್ರಾಸ್ತಾವಿಕ ಮಾತನಾಡಿದರು.

ಟ್ರಸ್ಟ್ ಅಧ್ಯಕ್ಷ ಪಿ.ಜಯರಾಮ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಜಯ ಕರ್ನಾಟಕ ಜನಪರ ವೇದಿಕೆ ರಾಜ್ಯ ಕಾರ್ಯಾಧ್ಯಕ್ಷ ರಾಮಚಂದ್ರ, ರಾಜ್ಯ ಉಪಾಧ್ಯಕ್ಷ ಕೆ.ಎನ್.ಜಗದೀಶ್, ರಾಜ್ಯ ಸಂಘಟನಾ ಕಾರ್ಯದರ್ಶಿ ಗೋಪಿ, ಜಿಲ್ಲಾಧ್ಯಕ್ಷ ಜಕಾವುಲ್ಲಾ, ನಗರಸಭಾ ಉಪಾಧ್ಯಕ್ಷೆ ಮಮತ ಬಾಲ ಸುಬ್ರಹ್ಮಣ್ಯಂ, ಸದಸ್ಯರಾದ ನೀಲಮ್ಮ, ಕುಮುದಾ ಕೇಶವ ಮೂರ್ತಿ, ಕರ್ನಾಟಕ ಸೇನಾ ಪಡೆ ಅಧ್ಯಕ್ಷ ಶ್ರೀನಿವಾಸಗೌಡ, ಉಮ್ಮತ್ತೂರು ಚಂದ್ರು, ಟ್ರಸ್ಟಿನ ಕಾರ್ಯದರ್ಶಿ ಜಯಲಕ್ಷ್ಮಿ, ಸಂಯೋಜಕ ಜೆ.ವಿ.ವೀರಭದ್ರಪ್ಪ, ತೀರ್ಪುಗಾರರಾದ ಜಾನಪದ ಕಲಾವಿದ ನರಸಿಂಹಮೂರ್ತಿ, ಗಾಯಕರಾದ ರವೀಂದ್ರ, ಜೆ.ವಿ.ಮಹೇಶ್, ಮಂಜು ನಾಥ್ ಇತರರು ಹಾಜರಿದ್ದರು. 150ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಿದ್ದರು.

ಅಪ್ರಾಪ್ತೆ ಮೇಲೆ ಲೈಂಗಿಕ ದೌರ್ಜನ್ಯ: ಅಪರಾಧಿಗೆ ಮೂರು ವರ್ಷ ಜೈಲು

ಚಾಮರಾಜನಗರ: ಅಪ್ರಾಪ್ತ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪಿಗೆ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ 3 ವರ್ಷ ಜೈಲು ಶಿಕ್ಷೆ ವಿಧಿಸಿ ತೀರ್ಪು ನೀಡಿದೆ.

ತಾಲೂಕಿನ ಗ್ರಾಮವೊಂದರ ಪದ್ಮನಾಭ(ಪದ್ಮ) ಶಿಕ್ಷೆಗೊಳಗಾದ ಅಪರಾಧಿ. ಈತ 2021 ನವೆಂಬರ್ 13 ರಂದು ಬಹಿರ್ದೆಸೆಗೆ ತೆರಳಿದ್ದ ಬಾಲಕಿಗೆ ಲೈಂಗಿಕ ದೌರ್ಜನ್ಯ ಎಸಗಿದ್ದ. ಬಳಿಕ ನೊಂದ ಬಾಲಕಿಯ ತಾಯಿ ಇದನ್ನು ಪ್ರಶ್ನಿಸಿದಾಗ ಅವರನ್ನು ಅವಾಚ್ಯ ಪದಗಳಿಂದ ನಿಂದಿಸಿದ್ದಲ್ಲದೇ ಅವರ ಮೇಲೆ ಹಲ್ಲೆ ಮಾಡಿದ್ದ. ಈ ವೇಳೆ ಬಾಲಕಿಯ ಸಹೋದರ ತಡೆಯಲು ಹೋದಾಗ ಆತನ ಮೇಲೂ ಹಲ್ಲೆ ನಡೆಸಿದ್ದ.

ಈ ಸಂಬಂಧ ಮಹಿಳಾ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು ವಿಚಾರಣೆ ನಡೆಸಿದ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಎಸ್.ಜಿ.ಕೃಷ್ಣ ಅವರು ಶುಕ್ರವಾರ ತೀರ್ಪು ಪ್ರಕಟಿಸಿದರು. ಪ್ರಾಸಿಕ್ಯೂಷನ್ ಪರವಾಗಿ ವಿಶೇಷ ಸರಕಾರಿ ಅಭಿಯೋಜಕ ಕೆ.ಯೋಗೇಶ್ ವಾದ ಮಂಡಿಸಿದ್ದರು.

ಧರ್ಮಸ್ಥಳದ ಸಾಮೂಹಿಕ ಅಂತ್ಯಕ್ರಿಯೆ ಪ್ರಕರಣ

ಸ್ವತಂತ್ರ ಮಾಹಿತಿ ನೀಡುವಂತೆ ಹೈಕೋರ್ಟ್ ಆದೇಶ



ಬೆಂಗಳೂರು, ಸೆ.19– ಧರ್ಮಸ್ಥಳದಲ್ಲಿ ನಡೆದ ಸಾಮೂಹಿಕ ಅಂತ್ಯಕ್ರಿಯೆ ಪ್ರಕರಣದಲ್ಲಿ ಮೂಲ ದೂರುದಾರ, ಆರೋಪಿಯಾಗಿದ್ದವರು ಹೊಂದಿದ್ದಕ್ಕಿಂತ ಹೆಚ್ಚಿನ ಮಾಹಿತಿಯನ್ನು ತಮ್ಮ ಬಳಿ ಹೊಂದಿರುವ ಬಗ್ಗೆ ಸೆಪ್ಟೆಂಬರ್ 26 ರಂದು ನ್ಯಾಯಾಲಯಕ್ಕೆ ಸ್ವತಂತ್ರ ಮಾಹಿತಿಯನ್ನು ಹಾಜರುಪಡಿಸುವಂತೆ ಹೈಕೋರ್ಟ್, ಧರ್ಮಸ್ಥಳದ ಇಬ್ಬರು ಅರ್ಜಿದಾರರಿಗೆ ನಿರ್ದೇಶನ ನೀಡಿದೆ.

ಅರ್ಜಿದಾರರಾದ ಪುರಂದರ ಗೌಡ ಮತ್ತು ತುಕಾರಾಂ ಗೌಡ ಅವರ ಪರವಾಗಿ ಹಿರಿಯ ವಕೀಲ ದೀಪಕ್ ಖೋಸ್ಲಾ ಮತ್ತು ವಿಶೇಷ ಸಾರ್ವಜನಿಕ ಅಭಿಯೋಜಕ (SPP) ಬಿ.ಎನ್.ಜಗದೀಶ ಅವರ ವಾದವನ್ನು ಆಲಿಸಿದ ನಂತರ ನ್ಯಾಯಮೂರ್ತಿ ಎಂ ನಾಗಪ್ರಸನ್ನ ಈ ಆದೇಶ ಹೊರಡಿಸಿದರು.

ಮೂಲ ದೂರುದಾರರು ತೋರಿಸಿದ್ದಕ್ಕಿಂತ ಹೆಚ್ಚಿನ ಸಂಖ್ಯೆಯ ಶವಗಳನ್ನು ಹೊರತೆಗೆಯಲು ಸ್ಥಳಗಳನ್ನು ತೋರಿಸಲು ಸಿದ್ಧರಿರುವ ಅರ್ಜಿದಾರರ ಪ್ರಾತಿನಿಧ್ಯವನ್ನು ಪರಿಗಣಿಸಲು ಈ ವಿಷಯದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡಕ್ಕೆ (SIT) ನಿರ್ದೇಶನ ನೀಡಬೇಕೆಂದು ಖೋಸ್ಲಾ ವಾದಿಸಿದರು.

ನಂತರ ನ್ಯಾಯಾಲಯವು ದೂರುದಾರ, ನೈರ್ಮಲ್ಯ ಕಾರ್ಮಿಕ ಅವರನ್ನು ಈಗ ಆರೋಪಿಯನ್ನಾಗಿ ಮಾಡಲಾಗಿದೆ, ಅವರನ್ನು ಹೊರತುಪಡಿಸಿ ಅರ್ಜಿದಾರರು ಬೇರೆ ಯಾವ ಸ್ವತಂತ್ರ ಮಾಹಿತಿಯನ್ನು ಹೊಂದಿದ್ದಾರೆ ಎಂಬುದನ್ನು ತಿಳಿಸಲು ಕೇಳಿತು.

ದೂರುದಾರರು ಬಹಿರಂಗಪಡಿಸಿದ 14 ಸ್ಥಳಗಳಿಗಿಂತ ಶವಗಳನ್ನು ಹೂಳಲು ಹೆಚ್ಚಿನ ಸ್ಥಳಗಳಿವೆ ಎಂದು ಹಿರಿಯ ವಕೀಲ ಖೋಸ್ಲಾ ಹೇಳಿದರು. ಆದರೆ ಸಾಕ್ಷ್ಯಾಧಾರಗಳನ್ನು ತಿರುಚುವ ಭಯದಿಂದ ಅವರು ಪ್ರಾತಿನಿಧ್ಯದಲ್ಲಿ ಅದನ್ನು ಬಹಿರಂಗಪಡಿಸಲಿಲ್ಲ. ಆದಾಗ್ಯೂ, ನ್ಯಾಯಾಲಯವು ಸೆಪ್ಟೆಂಬರ್ 26ರಂದು ನ್ಯಾಯಾಲಯದ ಮುಂದೆ ಹಾಜರುಪಡಿಸುವಂತೆ ಕೇಳಿತು, ಇದರಿಂದಾಗಿ ಅರ್ಜಿಗಳ ಕುರಿತು ಅಗತ್ಯ ಆದೇಶಗಳನ್ನು ರವಾನಿಸಬಹುದು ಎಂದಿತು.

ಈ ಮಧ್ಯೆ, ದೂರುದಾರರು ಒದಗಿಸಿದ ಮಾಹಿತಿಯ ಆಧಾರದ ಮೇಲೆ 13 ಸ್ಥಳಗಳನ್ನು ಅಗೆಯಲಾಯಿತು, ಆದರೆ ಒಂದು ಸ್ಥಳದಲ್ಲಿ ಮಹಿಳೆಯ ತಲೆಬುರುಡೆ ಕಂಡುಬಂದಿದೆ ಎಂದು ಎಸ್‌ಪಿಪಿ ಜಗದೀಶ ವಿವರಿಸಿದರು. ಆದಾಗ್ಯೂ, ಎಫ್‌ಎಸ್‌ಎಲ್ ವರದಿಯು ಅದು ಪುರುಷನದ್ದಾಗಿದೆ ಎಂದು ಬಹಿರಂಗಪಡಿಸಿದೆ. ದೂರುದಾರರು ತಪ್ಪಾದ ಮತ್ತು ಸುಳ್ಳು ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದು ತನಿಖೆಯು ಬಹಿರಂಗಪಡಿಸಿದೆ. ದೂರುದಾರರ ಹೇಳಿಕೆಯನ್ನು ದಾಖಲಿಸುವಲ್ಲಿನ ವಿಳಂಬದ ಬಗ್ಗೆ ಅಚ್ಚರಿ ವ್ಯಕ್ತಪಡಿಸಿದ ನ್ಯಾಯಾಲಯವು ದೂರುದಾರರ ಹಿಂದೆ ಯಾವ ಪಿತೂರಿ ಇದೆ ಎಂದು ಕೇಳಿತು. ಎಸ್‌ಪಿಪಿ ಅವರು ಅದನ್ನು ಬಯಲು ಮಾಡಬೇಕು ಎಂದರು.

ಸೌಜನ್ಯ ಮಾವ ವಿಠಲ್ ಗೌಡ ವಿರುದ್ಧ ದೂರು ದಾಖಲು

ಮಂಗಳೂರು, ಸೆ.19– 2012ರಲ್ಲಿ ಅತ್ಯಾಚಾರ ಮತ್ತು ಕೊಲೆಯಾದ ಸೌಜನ್ಯಾಳ ಮಾವ ವಿಠಲ್ ಗೌಡ ವಿರುದ್ಧ ಧರ್ಮಸ್ಥಳದ ಗ್ರಾಮಸ್ಥರಿಂದ ವಿಶೇಷ ತನಿಖಾ ದಳ (ಎಸ್‌ಐಟಿ)ಕ್ಕೆ ದೂರು ನೀಡಿದ್ದಾರೆ.



ವಿಠಲ್ ಗೌಡ

ಧರ್ಮಸ್ಥಳ ಗ್ರಾಮದ ನಿವಾಸಿ ಸಂದೀಪ್ ರೈ ಎಂಬುವವರು ಬೆಳ್ತಂಗಡಿಯಲ್ಲಿರುವ ಎಸ್‌ಐಟಿ ಕಚೇರಿಗೆ ಭೇಟಿ ನೀಡಿ ವಿಠಲ್ ಗೌಡ ವಿರುದ್ಧ ದೂರು ದಾಖಲಿಸಿದ್ದಾರೆ.

ಶ್ರೀ ಕ್ಷೇತ್ರ ಧರ್ಮಸ್ಥಳದ ಸುತ್ತಲಿನ ಪವಿತ್ರ ವಾತಾವರಣವನ್ನು ಕಲುಷಿತಗೊಳಿಸಲಾಗುತ್ತಿದೆ. ಸಾಮಾಜಿಕ ಜಾಲತಾಣಗಳಲ್ಲಿ ಧರ್ಮಸ್ಥಳ ಕುರಿತು ಭಕ್ತಿಯ ಬದಲು ಅಸ್ಥಿಪಂಜರಗಳು, ಅಪರಾಧಗಳು ಮತ್ತು ಪಿತೂರಿಗಳ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಧರ್ಮಸ್ಥಳದ ಶಾಂತಿ ಮತ್ತು ಪಾವಿತ್ರ್ಯವನ್ನು ಹಾಳು ಮಾಡಲಾಗುತ್ತಿದೆ. ಎಸ್‌ಐಟಿಯಿಂದ ಬಂಗ್ಲೆಗುಡ್ಡೆಯಲ್ಲಿ ಎರಡು ಬಾರಿ ಮಹಜರುಗಾಗಿ ಕರೆದೊಯ್ಯಲ್ಪಟ್ಟ ವ್ಯಕ್ತಿಗಳಲ್ಲಿ ಒಬ್ಬರಾದ ವಿಠಲ್ ಗೌಡ, ತನಿಖೆ ನಡೆಯುತ್ತಿರುವ ಸಮಯದಲ್ಲಿ ಅಸ್ಥಿಪಂಜರಗಳು ಮತ್ತು ಮಾಟಮಂತ್ರದ ಬಗ್ಗೆ ಪದೇ ಪದೇ ಸಂವೇದನಾಶೀಲ ಹೇಳಿಕೆಗಳನ್ನು ನೀಡುತ್ತಿದ್ದಾರೆ.

ವಿಠಲ ಗೌಡ ಅವರು ಎಸ್‌ಐಟಿ ವಿಚಾರಣೆ ಮುಗಿಸಿ ಹೊರಬಂದ ನಂತರ ಯೂಟ್ಯೂಬ್‌ಗಳಿಗೆ ಸಂದರ್ಶನ ನೀಡಿ ವಿಡಿಯೋಗಳನ್ನು ಹರಡಿದ್ದಾರೆ. ಈ ವಿಡಿಯೋಗಳಲ್ಲಿ ಅವರು ತನಿಖೆಯ ವಿವರಗಳನ್ನು ಬಹಿರಂಗಪಡಿಸಿ, ಸಾಕ್ಷ್ಯಗಳನ್ನು ನಾಶ ಮಾಡಲು ಪ್ರಯತ್ನಿಸಿದ್ದಾರೆ. ಎಸ್‌ಐಟಿ ಯಾವುದೇ ಮಾಹಿತಿ ನೀಡದಿರುವ ಸಂದರ್ಭದಲ್ಲೂ, ವಿಠಲ ಗೌಡ ಅವರು ಸಾರ್ವಜನಿಕವಾಗಿ ಹೇಳಿಕೆಗಳನ್ನು ನೀಡಿ ತನಿಖೆಯ ಹಾದಿಯನ್ನು ತಪ್ಪಿಸಲು ಬಯಸುತ್ತಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಸಾಕ್ಷಿ–ದೂರುದಾರ ಗಿರೀಶ್ ಮಟ್ಟಣ್ಣವರ್, ಮಹೇಶ್ ಶೆಟ್ಟಿ ತಿಮರೋಡಿ ಮತ್ತು ಜಯಂತ್ ಟಿ ಸೇರಿದಂತೆ ಇತರರು, ಕುಡ್ಲ ರಾಂಪೇಜ್ ಯೂಟ್ಯೂಬ್ ಚಾನೆಲ್‌ನೊಂದಿಗೆ ವಿಠಲ್ ಗೌಡ ಸಂಪರ್ಕ ಕುರಿತು ತನಿಖೆ ಮಾಡಬೇಕೆಂದು ಸಂದೀಪ್ ರೈ ಎಸ್‌ಐಟಿಯನ್ನು ಒತ್ತಾಯಿಸಿದ್ದಾರೆ.

ಜೈಲಿನಲ್ಲಿ ಕನಿಷ್ಠ ಸೌಲಭ್ಯ ನೀಡಲು ಮನವಿ

ನಟ ದರ್ಶನ್ ಅರ್ಜಿ ವಿಚಾರಣೆ ಸೆ.22ಕ್ಕೆ ಮುಂದೂಡಿಕೆ



ಬೆಂಗಳೂರು, ಸೆ.19– ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ಮತ್ತೆ ಪರಪ್ಪನ ಅಗ್ರಹಾರ ಜೈಲು ಪಾಲಾಗಿರುವ ನಟ ದರ್ಶನ್ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ನ್ಯಾಯಾಲಯ ಸೆ22ಕ್ಕೆ ಮುಂದೂಡಿದೆ.

ಕೊಲೆ ಕೇಸ್‌ನಲ್ಲಿ ಎರಡನೇ ಬಾರಿ ಪರಪ್ಪನ ಅಗ್ರಹಾರ ಜೈಲು ಸೇರಿರುವ ನಟ ದರ್ಶನ್‌ಗೆ ಈ ಬಾರಿ ಜೈಲಿನಲ್ಲಿ ಯಾವುದೇ ಸೌಲಭ್ಯ, ರಾಜಾತಿಥ್ಯ ನೀಡಿಲ್ಲ. ಸುಪ್ರೀಂಕೋರ್ಟ್ ಆದೇಶದ ಮೇರೆಗೆ ಜೈಲಿನಲ್ಲಿ ಕಟ್ಟುನಿಟ್ಟಿನ ನಿಯಮ ಜಾರಿಗೆ ತರಲಾಗಿದೆ. ಆರೋಪಿಗಳು, ಕೈದಿಗಳಿಗೆ ಯಾವುದೇ ರಾಜಾತಿಥ್ಯ, ಸೌಲಭ್ಯಗಳನ್ನು ನೀಡುವಂತಿಲ್ಲ.

ಆದರೆ ಕನಿಷ್ಠ ಮೂಲಭೂತ ಸೌಕರ್ಯ ನೀಡಬೇಕೆಂದು ನಿಯಮಗಳಿದ್ದು ಅದನ್ನು ಕೂಡ ಜೈಲಿನಲ್ಲಿ ನೀಡುತ್ತಿಲ್ಲ, ಜೈಲಿನಲ್ಲಿ ಹಾಸಿಗೆ, ದಿಂಬಿನಂತಹ ಕನಿಷ್ಠ ಸೌಲಭ್ಯವನ್ನೂ ನೀಡಬೇಕೆಂದು ಒತ್ತಾಯಿಸಿ ನಟ ದರ್ಶನ್ ಅರ್ಜಿ ಸಲ್ಲಿಸಿದ್ದರು.

ಬೆನ್ನು ನೋವಿನ ಸಮಸ್ಯೆಯಿರುವ ನಟ ದರ್ಶನ್ ಜೈಲಿನಲ್ಲಿ ಹಾಸಿಗೆ, ದಿಂಬು ಸೇರಿದಂತೆ ಕೆಲ ಸೌಲಭ್ಯ ನೀಡುವಂತೆ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ್ದ ಕೋರ್ಟ್ ಹಾಸಿಗೆ, ತಲೆದಿಂಬು ಒದಗಿಸುವಂತೆ ಜೈಲಧಿಕಾರಿ ಗಳಿಗೆ ಆದೇಶ ಹೊರಡಿಸಿತ್ತು.

ಕೋರ್ಟ್ ಆದೇಶ ನೀಡಿ ಹಲವು ದಿನಗಳು ಕಳೆದರೂ ದರ್ಶನ್‌ಗೆ ಯಾವುದೇ ಹಾಸಿಗೆ, ತಲೆದಿಂಬುಗಳನ್ನು ಜೈಲಾಧಿಕಾರಿಗಳು ಒದಗಿಸಿಲ್ಲ. ಇದರಿಂದ ದರ್ಶನ್ ಮತ್ತೆ ಕೋರ್ಟ್ ಮೆಟ್ಟಿಲೇರಿದ್ದಾರೆ. ಕೋರ್ಟ್ ಆದೇಶವನ್ನು ಜೈಲಿ ಅಧಿಕಾರಿಗಳು ಉಲ್ಲಂಘಿಸುತ್ತಿದ್ದಾರೆ. ತನಗೆ ಯಾವುದೇ ಸೌಲಭ್ಯ ಒದಗಿಸಿಲ್ಲ ಎಂದು ದೂರಿದ್ದಾರೆ.

ಇಂದು 57ನೇ ಸಿಸಿಹೆಚ್ ಕೋರ್ಟ್‌ನಲ್ಲಿ ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆಗೆ ಹಾಜರಾಗಿದ್ದರು. ನ್ಯಾಯಾಲಯ ಅರ್ಜಿ ವಿಚಾರಣೆಯನ್ನು ಇಂದು ಸೆ.22ಕ್ಕೆ ಮುಂದೂಡಿದೆ.

ರೈತರ ಅನುಕೂಲಕ್ಕಾಗಿ ಬೃಹತ್ ಉಗ್ರಾಣ ನಿರ್ಮಾಣ

ವಾರ್ಷಿಕ ಸಭೆಯಲ್ಲಿ ಟಿಎಪಿಸಿಎಂಎಸ್ ಅಧ್ಯಕ್ಷ ಟಿ.ಪಿ.ಸುಬ್ರಹ್ಮಣ್ಯ ಮಾಹಿತಿ

ತಿ.ನರಸೀಪುರ, ಸೆ.19– ತಾಲೂಕಿನ ರೈತರ ಅನುಕೂಲಕ್ಕಾಗಿ ಭತ್ತ ಸಂಗ್ರಹಿಸಿಡಲು ಬೃಹತ್ ಉಗ್ರಾಣ ನಿರ್ಮಿಸುವ ಗುರಿ ಹೊಂದಲಾಗಿದೆ ಎಂದು ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಅಧ್ಯಕ್ಷ ಟಿ.ಪಿ.ಸುಬ್ರಹ್ಮಣ್ಯ ತಿಳಿಸಿದರು.

ಪಟ್ಟಣದ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಆವರಣದಲ್ಲಿ ಶುಕ್ರವಾರ ನಡೆದ 2024–2025ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಹಕಾರ ಸಂಘದ ಆವರಣದಲ್ಲಿ ನಿರ್ಮಿಸಲು ಉದ್ದೇಶಿಸಿರುವ ವೇರ್‌ಹೌಸ್ ಅತಿದೊಡ್ಡ ಯೋಜನೆಯಾಗಿದ್ದು, ಮುಂದಿನ ಆಡಳಿತ ಮಂಡಳಿ ಸಭೆಯಲ್ಲಿ ವಿಷಯ ಮಂಡನೆ ಮಾಡಿ ನಿರ್ದೇಶಕರ ಅನುಮತಿ ಪಡೆದು ಉಗ್ರಾಣ ನಿರ್ಮಾಣಕ್ಕೆ ಚಾಲನೆ ನೀಡಲಾಗುತ್ತದೆ ಎಂದರು.

ತಾಲೂಕಿನ ರೈತರಿಗೆ ಇದರಿಂದ ಸಾಕಷ್ಟು ಅನುಕೂಲವಾಗಲಿದೆ. ರೈತರು ತಾವು ಬೆಳೆದ ಭತ್ತವನ್ನು ಮನೆಯಲ್ಲಿಡಲು ಜಾಗದ ಕೊರತೆಯಿಂದ ತೊಂದರೆ ಅನುಭವಿಸುತ್ತಿದ್ದು, ಬೆಲೆ ಇಲ್ಲದಿದ್ದರೂ ಸಿಕ್ಕ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ. ಹಾಗಾಗಿ ನಮ್ಮ ಸಹಕಾರ ಸಂಘದಲ್ಲಿ ಕಟ್ಟಡ ಇದೆ. ಇರುವ ಕಟ್ಟಡ ನವೀಕರಣ ಮಾಡುವ ಮೂಲಕ ದೊಡ್ಡದಾದ ಗೋಡೌನ್ ನಿರ್ಮಿಸಿದರೆ ರೈತರು ಭತ್ತವನ್ನು ಇಲ್ಲಿ ಶೇಖರಣೆ ಮಾಡಿ ಸೂಕ್ತ ಬೆಲೆ ಸಿಕ್ಕಾಗ ಮಾರಾಟ ಮಾಡಲು ಅನುಕೂಲವಾಗುತ್ತದೆ ಎಂದರು.

ಕಳೆದ ವಾರ್ಷಿಕ ಸಭೆಯಲ್ಲಿ ಶವ ಸಾಗಿಸುವ ವಾಹನದ ಬಗ್ಗೆ ಚರ್ಚಿಸಲಾಗಿತ್ತು. ಆದರೆ ತಾಂತ್ರಿಕ ತೊಂದರೆಯಿಂದ ವಾಹನ ಬರುವುದು ತಡವಾಗುತ್ತಿದೆ. ವಾಹನಕ್ಕೆ ಎಫ್‌ಸಿಯಾಗಿಲ್ಲ. ಶವ ಸಾಗಿಸುವ ವಾಹನಕ್ಕೆ ಅನುಮತಿ ಪಡೆಯಲು ಸಾಕಷ್ಟು ಸಮಸ್ಯೆಗಳಿವೆ. ಈಗಾಗಲೇ ವಾಹನ ತಂಯಾರಿಕಾ ಕಾರ್ಯ ಅಂತಿಮ ಹಂತದಲ್ಲಿದ್ದು, ಶೀಘ್ರ ಸಾರ್ವಜನಿಕ ಸೇವೆಗೆ ಸಮರ್ಪಣೆ ಮಾಡಲಾಗುತ್ತದೆ ಎಂದರು.

ಸಹಕಾರ ಸಂಘದ ಪೂರ್ವ ಭಾಗದಲ್ಲಿ ಮಳಿಗೆ ಕಟ್ಟಬೇಕೆಂಬ ಉದ್ದೇಶ ಹೊಂದಲಾಗಿತ್ತು. ಆದರೆ ಕಂದಾಯ ಕಟ್ಟುವ ವಿಚಾರದಲ್ಲಿ ಇರುವ ಗೊಂದಲದಿಂದ ಕಾರ್ಯ ವಿಳಂಬವಾಗುತ್ತಿದೆ ಎಂದರು.

ಕಳೆದ ವಾರ್ಷಿಕ ಮಹಾಸಭೆಯಲ್ಲಿ ಷೇರುದಾರರ ಮರಣ ನಿಧಿಯನ್ನು 5 ಸಾವಿರ ರೂ.ಗಳಿಗೆ ಏರಿಕೆ ಮಾಡುವ ಭರವಸೆ ನೀಡಲಾಗಿತ್ತು. ಆದರೆ 3 ಸಾವಿರ ರೂಗಳನ್ನೇ ನೀಡುವ ಮೂಲಕ ಷೇರುದಾರರ ಕುಟುಂಬಗಳಿಗೆ ನೆರವು ನೀಡಲು ಮುಂದಾಗಿಲ್ಲ ಎಂದು ಷೇರುದಾರರೊಬ್ಬರ ಆಕ್ಷೇಪಕ್ಕೆ ಉತ್ತರಿಸಿದ ಅಧ್ಯಕ್ಷರು ಮರಣ ನಿಧಿಯನ್ನು ಇಷ್ಟಪಟ್ಟಂತೆ ಏರಿಕೆ ಮಾಡಲು ಅಥವಾ ಷೇರುದಾರರು ಬೇಡಿಕೆ ಇಟ್ಟಿದ್ದಾರೆ ಎಂಬ ಕಾರಣಕ್ಕೆ ಹೆಚ್ಚಿಸಲು ಸಾಧ್ಯವಿಲ್ಲ. ಸಹಕಾರ ಸಂಘದಲ್ಲಿ ಆಗುವ ಉತ್ಪತ್ತಿಯನ್ನು ಗಮನದಲ್ಲಿರಿಸಿಕೊಂಡು ಮರಣ ನಿಧಿ ನಿಗದಿಪಡಿಸಲಾಗುತ್ತದೆ ಎಂದರು.



ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಸಂಘದ ಅಧ್ಯಕ್ಷ ಟಿ.ಪಿ.ಸುಬ್ರಹ್ಮಣ್ಯ ಉದ್ಘಾಟಿಸಿದರು.

ಸಂಘವು 2024–25ನೇ ಸಾಲಿನಲ್ಲಿ ಎಲ್ಲಾ ಶಾಖೆಗಳಿಂದ ಒಟ್ಟು ಖರ್ಚು–ವೆಚ್ಚ ಕಳೆದು 12.68 ಲಕ್ಷ ರೂಗಳ ನಿವ್ವಳ ಲಾಭ ಗಳಿಸಿದ್ದು, ಪ್ರಸ್ತ ಸಾಲಿನಲ್ಲಿ 'ಎ' ತರಗತಿಯಲ್ಲಿ ಮುಂದುವರೆದಿದೆ. ಸಂಘದಲ್ಲಿ ಎ, ಬಿ, ಸಿ, ಡಿ ತರಗತಿಯಿಂದ ಒಟ್ಟಾರೆ 6707 ಮಂದಿ ಷೇರುದಾರರಿದ್ದು, 36,93,750 ರೂ.ಗಳ ಷೇರು ಬಂಡವಾಳವನ್ನು ಸಂಘ ಹೊಂದಿದೆ.

– ಜಿ.ರಘುನಂದನ್, ಕಾರ್ಯದರ್ಶಿ.

ಸಭೆ ಹಿನ್ನೆಲೆಯಲ್ಲಿ ವಾಸನ್ ಕಣ್ಣಿನ ಆಸ್ಪತ್ರೆಯಿಂದ ಸದಸ್ಯರಿಗೆ ಉಚಿತ ಕಣ್ಣಿನ ತಪಾಸಣಾ ಶಿಬಿರ ಏರ್ಪಡಿಸಲಾಗಿತ್ತು. ಸಭೆಯಲ್ಲಿ ಉಪಾಧ್ಯಕ್ಷ ಡಣಾಯಕನಪುರ ಮಲ್ಲಣ್ಣ, ನಿರ್ದೇಶಕರಾದ ಟಿ.ವಾಸುದೇವ, ಬಿ.ಎಸ್.ಮಹೇಶ್, ವೈ.ಎನ್.ಶಂಕರೇಗೌಡ, ಎಂ.ಎಸ್.ಬಸವರಾಜು, ಎಂ.ಎಂ.ಜಯಣ್ಣ ವೈ.ಎಸ್.ರಾಮಸ್ವಾಮಿ, ಎಂಕೆ.ಮಹೇಶ್, ಕೆ.ಎಂ.ಸುನೀಲ್, ಡಿ.ಕೋಮಲ, ಎಸ್.ನಿರ್ಮಲ, ಶಿವಲಿಂಗೇಗೌಡ, ನಿವೃತ್ತ ಅಧಿಕಾರಿ ಶಿವಸ್ವಾಮಿ, ತಾಪಂ ಮಾಜಿ ಸದಸ್ಯ ಚಂದ್ರಶೇಖರ್, ಸಿ.ಮಹದೇವು, ಫ್ರಾನ್ಸಿ ಮೋಹನ್, ಅಂಗಡಿ ಶೇಖರ್, ಸಾಲೂರು ಸ್ವಾಮಿ, ಡಿ.ಎಲ್.ಮಹದೇವಪ್ಪ, ಗುರುಪ್ರಸಾದ್, ರವಿ, ಸಹಕಾರ ಸಂಘದ ಟಿ.ಜಿ.ಸುಮಿತ್ರ, ಎನ್.ಮಹೇಶ್, ಡಿ.ಪಿ.ಸಂದೇಶ್, ಶ್ರೀಧರಸ್ವಾಮಿ ಸೇರಿದಂತೆ ಷೇರುದಾರರು, ಸದಸ್ಯರು ಹಾಜರಿದ್ದರು.

ಅಧ್ಯಕ್ಷರ ಚುನಾವಣೆ ವೇಳೆ ವಿಪ್ ಉಲ್ಲಂಘನೆ

ಇಬ್ಬರು ನಗರಸಭೆ ಸದಸ್ಯರ ಸದಸ್ಯತ್ವ ಅಸಿಂಧು: ಡಿಸಿ ಆದೇಶ



ಗೀತಾ



ಶ್ವೇತಾ

ಹುಣಸೂರು, ಸೆ.19– ಹುಣಸೂರು ನಗರಸಭೆ ಅಧ್ಯಕ್ಷರ ಚುನಾವಣೆ ವೇಳೆ ಕಾಂಗ್ರೆಸ್ ಪಕ್ಷದ ವಿಪ್ ಉಲ್ಲಂಘಿಸಿದ್ದ ನಗರಸಭೆಯ ಇಬ್ಬರು ಸದಸ್ಯರ ಸದಸ್ಯತ್ವ ಅಸಿಂಧುಗೊಳಿಸಿ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ ಆದೇಶ ಹೊರಡಿಸಿದ್ದಾರೆ.

ನಗರಸಭೆ ವಾರ್ಡ್ ನಂ.24ರ ಸದಸ್ಯೆ ಗೀತಾ ನಿಂಗರಾಜು ಹಾಗೂ ವಾರ್ಡ್ ಸಂಖ್ಯೆ 28ರ ಸದಸ್ಯೆ ಶ್ವೇತಾ ಮಂಜುನಾಥ್ ಅಸಿಂಧುಗೊಂಡವರು. ಇವರಿಬ್ಬರು ಮೇ 3ರಂದು ನಡೆದ ಹುಣಸೂರು ನಗರಸಭೆ ಅಧ್ಯಕ್ಷರ ಚುನಾವಣೆ ವೇಳೆ ಕಾಂಗ್ರೆಸ್ ಪಕ್ಷದಿಂದ ನೀಡಿದ್ದ ವಿಪ್ ಉಲ್ಲಂಘಿಸಿ, ಪಕ್ಷದ ಅಭ್ಯರ್ಥಿಗೆ ಮತ ಹಾಕದೇ, ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಪಕ್ಷದ ಅಭ್ಯರ್ಥಿಗೆ ಮತ ಹಾಕಿ ಪಕ್ಷದ ನಿಯಮಗಳಿಗೆ ವಿರುದ್ಧವಾಗಿ ನಡೆದುಕೊಂಡಿದ್ದರು. ಹೀಗಾಗಿ ನಗರಸಭೆ ಸದಸ್ಯರಾದ ಗೀತಾ, ಶ್ವೇತಾ ಅವರ ಸದಸ್ಯತ್ವ ರದ್ದುಪಡಿಸುವಂತೆ ಹುಣಸೂರು ನಗರಸಭೆಯ ಅಧ್ಯಕ್ಷ ಸ್ಥಾನದ ಪರಾಜಿತ ಅಭ್ಯರ್ಥಿ 4ನೇ ವಾರ್ಡ್ ಸದಸ್ಯೆ ಭವ್ಯ ಎಸ್.ಸಿ. ಚಂದ್ರಶೇಖರ್ ದೂರು ಸಲ್ಲಿಸಿದ್ದರು.

ಕಾಂಗ್ರೆಸ್ ಪಕ್ಷದ ವಿಪ್ ಉಲ್ಲಂಘಿಸಿರುವುದು ಸಾಬೀತಾದ ಹಿನ್ನಲೆಯಲ್ಲಿ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ಅಧಿನಿಯಮ, 1987 ಸೆಕ್ಷನ್ 3(1)(b) ಉಲ್ಲಂಘನೆಯ ಆಧಾರದ ಮೇಲೆ ಗೀತಾ, ಶ್ವೇತಾ ಅವರನ್ನು ನಗರಸಭೆ ಸದಸ್ಯತ್ವದಿಂದ ಅಸಿಂಧುಗೊಳಿಸಿ ಜಿಲ್ಲಾಧಿಕಾರಿ ಜಿ. ಲಕ್ಷ್ಮಿಕಾಂತರೆಡ್ಡಿ ಆದೇಶ ಹೊರಡಿಸಿದ್ದಾರೆ. 4ನೇ ವಾರ್ಡ್ ಸದಸ್ಯೆ ಭವ್ಯ ಎಸ್.ಸಿ ಚಂದ್ರಶೇಖರ್ ಅವರ ಪರ ಹುಣಸೂರಿನ ವಕೀಲ ಚಂದ್ರಶೇಖರ್ ವಾದ ಮಂಡಿಸಿದ್ದರು.

ಸಾಲ ಮರುಪಾವತಿಸಿ ಸಂಘದ ಅಭಿವೃದ್ಧಿಗೆ ಸಹಕರಿಸಿ

ಹೆಡಿಯಾಲ ಪಿಎಸಿಎಸ್ ಅಧ್ಯಕ್ಷ ಎಂ.ಕೆ.ಮಂಜುನಾಥ್ ಮನವಿ



ಸಭೆಯಲ್ಲಿ ಸಂಘದ ಅಧ್ಯಕ್ಷ ಎಂ.ಕೆ.ಮಂಜುನಾಥ್ ಮಾತನಾಡಿದರು.

ಮಲ್ಲುಂಡಿ, ಸೆ.19– ರೈತರು ಪಡೆದ ಸಾಲವನ್ನು ಸಕಾಲಕ್ಕೆ ಮರುಪಾವತಿಸಿ ಸಂಘದ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಹೆಡಿಯಾಲ ಪಿಎಸಿಎಸ್ ಅಧ್ಯಕ್ಷ ಎಂ.ಕೆ.ಮಂಜುನಾಥ್ ತಿಳಿಸಿದರು.

ನಂಜನಗೂಡು ತಾಲೂಕಿನ ಹೆಡಿಯಾಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ನಿರ್ದೇಶಕರು ಹಾಗೂ ಸದಸ್ಯರ ಸಹಕಾರದಿಂದ ಸಂಘ ಉತ್ತಮವಾಗಿ ನಡೆಯುತ್ತಿದೆ. ಹೀಗಾಗಿ ರೈತರು ಸಂಘದಲ್ಲಿ ಪಡೆದ ಸಾಲವನ್ನು ಸಕಾಲಕ್ಕೆ ಮರುಪಾವತಿಸಬೇಕು. ಆ ಮೂಲಕ ಸಂಘ ಮತ್ತಷ್ಟು ಅಭಿವೃದ್ಧಿ ಹೊಂದಲು ಸಹಕರಿಸಬೇಕು ಎಂದರು.

ಸಿಇಓ ಹೆಚ್.ಡಿ.ಶಿವಕುಮಾರ್ 2024–25ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸಿದರು. ಈ ವೇಳೆ ಉಪಾಧ್ಯಕ್ಷ ಶಿವರುದ್ರಪ್ಪ, ನಿರ್ದೇಶಕರಾದ ಬಸವಣ್ಣ, ಅನ್ವರ್, ಶಿವರುದ್ರಪ್ಪ, ಶಿವಮ್ಮ, ರಂಗನಾಯಕ, ಶಿವಯ್ಯ, ಬ್ಯಾಂಕ್ ಮೇಲ್ವಿಚಾರಕ ನಿರಂಜನ್, ಮುಖಂಡರಾದ ಪ್ರಭುಸ್ವಾಮಿ, ಗ್ರಾಪಂ ಸದಸ್ಯ ಸತೀಶ್, ಅಫ್ರತ್ ಅಲಿ, ಗುಮಾಸ್ತ ತಾಜುದ್ದೀನ್ ಸೇರಿದಂತೆ ಇತರರಿದ್ದರು.

ಧರ್ಮದ ಕಾಲಂನಲ್ಲಿ 'ಬೌದ್ಧ' ಎಂದು ಬರೆಸಲು ಮನವಿ



ಸುದ್ದಿಗೋಷ್ಠಿಯಲ್ಲಿ ಸಿ.ಆರ್.ಮಹದೇವು ಮಾತನಾಡಿದರು.

ನಂಜನಗೂಡು, ಸೆ.19– ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಆಯೋಗ ನಡೆಸುವ ಸಾಮಾಜಿಕ ಹಾಗೂ ಆರ್ಥಿಕ ಜಾತಿ ಸಮೀಕ್ಷೆಯಲ್ಲಿ ಪರಿಶಿಷ್ಟ ಜಾತಿ ಬಂಧುಗಳು ಧರ್ಮದ ಕಾಲಂನಲ್ಲಿ 'ಬೌದ್ಧ' ಎಂದು ಜಾತಿ ಕಾಲಂನಲ್ಲಿ 'ಹೊಲಯ' ಎಂದು ಬರೆಸುವಂತೆ ತಥಾಗತ ಬುದ್ಧ ವಿಹಾರದ ಅಧ್ಯಕ್ಷ ಚಿನ್ನಂಬಳ್ಳಿ ಸಿ.ಆರ್. ಮಹದೇವು ಮನವಿ ಮಾಡಿದರು.

ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೆ.22ರಿಂದ ಜಾತಿ ಸಮೀಕ್ಷೆ ನಡೆಸಲಾಗುತ್ತಿದ್ದು, ಅಂಬೇಡ್ಕರ್ ಅವರು ಹಿಂದೂ ಧರ್ಮ ತ್ಯಜಿಸಿ ನಮ್ಮ ಮೂಲ ಧರ್ಮವಾದ ಬೌದ್ಧ ಧರ್ಮ ಅಪ್ಪಿಕೊಂಡರು. ಹೀಗಾಗಿ ಅಂಬೇಡ್ಕರ್ ಅವರ ಅನುಯಾಯಿಗಳಾದ ನಾವೆಲ್ಲರೂ ಅವರ ಮಾರ್ಗದಲ್ಲಿ ಸಾಗುತ್ತಾ ಅವರ ಆಶಯದಂತೆ ನಮ್ಮ ಧರ್ಮಕ್ಕೆ ಮರಳಿ ಹೋಗಬೇಕಿದೆ. ಈ ಹಿಂದೆ ನಡೆದ ಸಮೀಕ್ಷೆಯಲ್ಲಿ ಗೊಂದಲ ಉಂಟಾಗಿತ್ತು. ಜಾಗೃತಿ ಮೂಡಿಸುವಲ್ಲಿ ವಿಫಲರಾಗಿದ್ದೆವು. ಮುಂದೆ ನಡೆಯುವ ಸಮೀಕ್ಷೆಯಲ್ಲಿ ಧರ್ಮದ ಕಾಲಂ ನಂಬರ್ 6ರಲ್ಲಿ 'ಬೌದ್ಧ' ಎಂದು ಜಾತಿ ಕಾಲಂನಲ್ಲಿ 'ಹೊಲಯ' ಎಂದು ದಾಖಲಿಸಬೇಕು ಎಂದರು.

ಅವರು ಸೆ.21ರಂದು ನಗರದ ಅಂಬೇಡ್ಕರ್ ಭವನದಲ್ಲಿ ವಿಚಾರ ಸಂಕೀರ್ಣ ಆಯೋಜಿಸಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಿದರು.

ದಸಂಸ ಜಿಲ್ಲಾ ಸಂಚಾಲಕ ಚುಂಚನಹಳ್ಳಿ ಮಲ್ಲೇಶ್ ಮಾತನಾಡಿ, ಈ ಹಿಂದೆ ನಡೆದ ಪ.ಜಾತಿ ಸಮೀಕ್ಷೆಯಲ್ಲಿ ನಮಗೆ ಅನ್ಯಾಯವಾಗಿದೆ. ರಾಜ್ಯದಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಬಲಗೈ ಸಮಾಜ ವಾಸಿಸುತ್ತಿದೆ. ಪಟ್ಟಣದ ಜನತೆ ತಮ್ಮ ಜಾತಿ ಹೇಳಲು ಹಿಂಜರಿದ ಪರಿಣಾಮ ದಾಖಲೆಯಲ್ಲಿ ಬಲಗೈ ಸಮುದಾಯದ ಜನಸಂಖ್ಯೆ ಕಡಿಮೆ ಬಂದಿದೆ. ಈ ಸಮೀಕ್ಷೆಯಲ್ಲಿ ಹಾಗಾಗಬಾರದು. ಈ ಹಿಂದೆ ಹಿಂದೂ ಧರ್ಮ ಎಂದು ಬರೆಸಿದ್ದರು. ಈ ಬಾರಿ ಧರ್ಮದ ಕಾಲಂನಲ್ಲಿ ಬೌದ್ಧ ಧರ್ಮ ಎಂದು ಬರೆಸಬೇಕು. ಇದರಿಂದ ಯಾವುದೇ ತೊಂದರೆಯಾಗುವುದಿಲ್ಲ. ಸರ್ಕಾರದಿಂದ ಸಿಗುವ ಸೌಲಭ್ಯಗಳು, ಮೀಸಲಾತಿ ಮುಂದುವರೆಯುತ್ತವೆ. ಆದ್ದರಿಂದ ಕಡ್ಡಾಯವಾಗಿ ಧರ್ಮದ ಕಾಲಂನಲ್ಲಿ ಬೌದ್ಧ ಧರ್ಮ ಎಂದು ಬರೆಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಜನಸಂಗ್ರಾಮ ಪರಿಷತ್ ರಾಜ್ಯ ಗೌರವಾಧ್ಯಕ್ಷ ನಗರ್ಲೆ ಎಂ.ವಿಜಯಕುಮಾರ್, ದಸಂಸ ಜಿಲ್ಲಾ ಸಂಯೋಜಕ ಕಾರ್ಯ ಬಸವಣ್ಣ ಸಂಚಾಲಕ ಶಂಕರಪುರ ಸುರೇಶ್, ಕಾರ್ಯ ಬಸವಣ್ಣ, ಸಿ.ಎಂ.ಅಂಕಯ್ಯ, ಸಿ.ಆರ್.ಮಹದೇವು, ವಾಸುದೇವ ಮೂರ್ತಿ ಇನ್ನಿತರರಿದ್ದರು.

ಹಾವು ಕಚ್ಚಿ ಮಹಿಳೆ ಸಾವು

ಹೆಚ್.ಡಿ.ಕೋಟೆ, ಸೆ.19– ಹಾವು ಕಚ್ಚಿ ಮಹಿಳೆ ಸಾವನ್ನಪ್ಪಿರುವ ಘಟನೆ ತಾಲೂಕಿನ ಶಿರಮಳ್ಳಿಯಲ್ಲಿ ಗುರುವಾರ ನಡೆದಿದೆ.



ತಾಲೂಕಿನ ನೇರಳೆ ಗಣೇಶನ ಗುಡಿ ಗ್ರಾಮದ ನಿವಾಸಿ ತಾಯಮ್ಮ (53) ಸಾವನ್ನಪ್ಪಿದವರು. ಈಕೆ ಶಿರಮಳ್ಳಿ ಗ್ರಾಮದ ಜಮೀನಿನಲ್ಲಿ ಮುಸುಕಿನ ಜೋಳ ಮುರಿಯಲು ಕೂಲಿ ಕೆಲಸಕ್ಕೆ ಆಗಮಿಸಿದ್ದ ವೇಳೆ ಹಾವು ಕಚ್ಚಿದೆ. ತಕ್ಷಣ ಅವರನ್ನು ಹೆಚ್.ಡಿ.ಕೋಟೆ ಸಾರ್ವಜನಿಕ ಆಸ್ಪತ್ರೆಗೆ ಕರೆತಂದು ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ವೈದ್ಯರ ಸಲಹೆ ಮೇರೆಗೆ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ಅಂತರಸಂತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್‌ಗೆ ಕಾರು ಡಿಕ್ಕಿ: ಸವಾರ ಸ್ಥಳದಲ್ಲೇ ಸಾವು

ಹೆಚ್.ಡಿ.ಕೋಟೆ, ಸೆ.19– ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ನಂಜನಾಯಕನಹಳ್ಳಿ ಬಳಿ ಗುರುವಾರ ರಾತ್ರಿ ನಡೆದಿದೆ.



ಪಟ್ಟಣದ ಹನುಮಂತ ನಗರ ನಿವಾಸಿ, ಟೊಬ್ಯಾಕೋ ಬೋರ್ಡ್ ನೌಕರ ಮಂಜುನಾಥ್(42) ಸಾವನ್ನಪ್ಪಿದವರು. ಈತ ಹುಣಸೂರು ಕಡೆಯಿಂದ ಹೆಚ್.ಡಿ.ಕೋಟೆ ಕಡೆಗೆ ಬೈಕ್‌ನಲ್ಲಿ ಬರುತ್ತಿದ್ದ ವೇಳೆ ನಂಜನಾಯಕನಹಳ್ಳಿ ಬಳಿ ವೇಗವಾಗಿ ಬಂದ ಕಾರು ಹಿಂಬದಿಯಿಂದ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಮಂಜುನಾಥ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಈ ವೇಳೆ ಕಾರು ಪಲ್ಟಿಯಾಗಿ ಚಾಲಕನಿಗೂ ತೀವ್ರ ಗಾಯಗಳಾಗಿದ್ದು, ಮೈಸೂರಿನ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿದೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪೊಲೀಸರು ಪರಿಶೀಲನೆ ನಡೆಸಿ ಮಂಜುನಾಥ್ ಶವವನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿದರು.

ಈ ಸಂಬಂಧ ಹೆಚ್.ಡಿ.ಕೋಟೆ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಠದ ಮೇಲ್ಛಾವಣಿ ಕಾಮಗಾರಿಗೆ ಗುದ್ದಲಿ ಪೂಜೆ



ಮೇಲ್ಛಾವಣಿ ಕಾಮಗಾರಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಹಾಗೂ ಶ್ರೀ ಸಾಂಬಸದಾಶಿವ ಸ್ವಾಮೀಜಿ ಗುದ್ದಲಿ ಪೂಜೆ ನೆರವೇರಿಸಿದರು.

ಹುಣಸೂರು, ಸೆ.19– ತಾಲೂಕಿನ ಉಕ್ಕಿನ ಕಂತೆ ಮಾದಳ್ಳಿ ಮಠದ ಆವರಣದಲ್ಲಿ ಮೇಲ್ಛಾವಣಿ ಕಾಮಗಾರಿಗೆ ಶಾಸಕ ಜಿ.ಡಿ.ಹರೀಶ್ ಗೌಡ ಹಾಗೂ ಶ್ರೀ ಸಾಂಬಸದಾಶಿವ ಸ್ವಾಮೀಜಿ ಗುದ್ದಲಿ ಪೂಜೆ ನೆರವೇರಿಸಿದರು.

ಶಾಸಕ ಜಿ.ಡಿ.ಹರೀಶ್‌ಗೌಡ ಮಾತನಾಡಿ, ಉಕ್ಕಿನ ಕಂತೆ ಮಾದಳ್ಳಿ ಮಠವು 700 ವರ್ಷಗಳ ಇತಿಹಾಸವುಳ್ಳ ಧಾರ್ಮಿಕ ಸ್ಥಳವಾಗಿದ್ದು, ಮಠದಿಂದ ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತಿವೆ. ಹೀಗಾಗಿ ನಮ್ಮೆಲ್ಲರ ಸಹಕಾರ ಮಠಕ್ಕೆ ಅಗತ್ಯವಾಗಿದೆ. ಈ ಮೇಲ್ಛಾವಣಿ ಕಾಮಗಾರಿ ಶಾಶ್ವತವಾಗಿ ಉಳಿಯಬೇಕು. ಮಠದ ಅಭಿವೃದ್ಧಿಗೆ ಎಲ್ಲರೂ ಕೈಜೋಡಿಸೋಣ. ನಾನು ಶಾಸಕನಾಗಿ ಪಕ್ಷಭೇದ ಮರೆತು ಕೆಲಸ ಮಾಡುವೆ. ಮಠವು ಶಕ್ತಿ ಕೇಂದ್ರವಾಗಿ ಕೆಲಸ ಮಾಡಲಿ. ನನ್ನ ಸಹಕಾರ ಇರುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷ ಗೋವಿಂದನಾಯಕ, ಎಪಿಎಂಸಿ ಮಾಜಿ ಅಧ್ಯಕ್ಷ ಗೋವಿಂದೇಗೌಡ, ಗ್ರಾಪಂ ಸದಸ್ಯರಾದ ಚಂದ್ರಶೇಖ, ಬಿ.ಹೆಚ್. ಲೋಕೇಶ್, ಚಂದ್ರೇಗೌಡ, ಚಂದ್ರಶೇಖರ, ತಾಲೂಕು ಬಸವ ಸಮಿತಿ ಅಧ್ಯಕ್ಷ ವೀರಭದ್ರಪ್ಪ, ಸಮಾಜ ಸೇವಕ ಹರವೆ ಶ್ರೀಧರ್, ಜಿಪಂ ಮಾಜಿ ಸದಸ್ಯ ರಮೇಶ್ ಕುಮಾರ್, ಮಾಜಿ ಅಧ್ಯಕ್ಷ ಬಸವರಾಜಪ್ಪ, ಹಾಲು ಒಕ್ಕೂಟದ ನಿರ್ದೇಶಕ ಕೆಂಪನಹಳ್ಳಿ ಕುಮಾರ್, ಡಾ.ವೃಷಭೇಂದ್ರಪ್ಪ ಮತ್ತು ತಾಲೂಕಿನ ವೀರಶೈವ ಘಟಕದ ಪದಾಧಿಕಾರಿಗಳು ಭಾಗವಹಿಸಿದ್ದರು.

ಹೊಸಹಳ್ಳಿ ಡೇರಿ ವಾರ್ಷಿಕ ಮಹಾಸಭೆ

ಮೂಗೂರು ಸಮೀಪದ ಹೊಸಹಳ್ಳಿ ಡೇರಿ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅಧ್ಯಕ್ಷ ರಮೇಶ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ವೇಳೆ ಮಾರ್ಗ ವಿಸ್ತರಣಾಧಿಕಾರಿ ಕೆ.ಎನ್.ಶೃತಿ, ಸಂಘದ ಉಪಾಧ್ಯಕ್ಷ ರೇವಣ್ಣ, ನಿರ್ದೇಶಕರಾದ ಬಂದಪ್ಪ, ಲಿಂಗಣ್ಣ, ಮಹೇಶ್, ಮದೇಗೌಡ, ಮಹದೇವ, ಮಹದೇವಶೆಟ್ಟಿ, ನಾಗಮ್ಮ, ನಿಂಗರಾಜಮ್ಮ, ಸಿಇಓ ಬಸವರಾಜು, ಸಿಬ್ಬಂದಿ ಹಾಜರಿದ್ದರು.



ಹೈನುಗಾರಿಕೆಯಿಂದ ರೈತರ ಆರ್ಥಿಕಾಭಿವೃದ್ಧಿ ಸಾಧ್ಯ



ಸಭೆಯಲ್ಲಿ ಮೈಮುಲ್ ನಿರ್ದೇಶಕ ಪ್ರಕಾಶ್ ಮಾತನಾಡಿದರು.

ಕಂಪಲಾಪುರ, ಸೆ.19– ರೈತರು ಹೈನುಗಾರಿಕೆಯಿಂದ ಆರ್ಥಿಕವಾಗಿ ಅಭಿವೃದ್ಧಿ ಹೊಂದಬಹುದು ಎಂದು ಮೈಮುಲ್ ನಿರ್ದೇಶಕ ಪ್ರಕಾಶ್ ತಿಳಿಸಿದರು.

ಇಲ್ಲಿನ ಬಿಎಂಸಿ ಕೇಂದ್ರದಲ್ಲಿ 2024–25ನೇ ಸಾಲಿನ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ರೈತರು ಕೃಷಿಯನ್ನು ಅವಲಂಬಿಸದೇ, ಹೈನುಗಾರಿಕೆಯನ್ನು ಉಪ ಕಸುಬಾಗಿ ಮಾಡಿದಾಗ ಆರ್ಥಿಕವಾಗಿ ಅಭಿವೃದ್ಧಿ ಹೊಂದಬಹುದು ಎಂದರು. ಸಿಇಓ ಕಿಶೋರ್ ವಾರ್ಷಿಕ ವರದಿ ಮಂಡಿಸಿ ಮಾತನಾಡಿ, ಸಂಘದಲ್ಲಿ 260 ಷೇರುದಾರರು, 300 ಹಾಲು ಉತ್ಪಾದಕರಿದ್ದು, ನಿತ್ಯ 1800 ಲೀಟರ್ ಹಾಲು ಶೇಖರಣೆಯಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಸಂಘ 7.86 ಲಕ್ಷ ಲಾಭ ಗಳಿಸಿದೆ ಎಂದರು.

ಈ ವೇಳೆ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ಹಾಲು ಉತ್ಪಾದಕರ ಮಕ್ಕಳಿಗೆ ನಗದು ಪುರಸ್ಕಾರ ನೀಡಿ ಗೌರವಿಸಲಾಯಿತು. ಅಲ್ಲದೇ ಅತೀ ಹೆಚ್ಚು ಹಾಲು ಸರಬರಾಜು ಮಾಡಿದ್ದ ಖರೀದಿ ಮಾಡಿದವರನ್ನು ಸನ್ಮಾನಿಸಲಾಯಿತು.

ಮೈಮುಲ್ ವಿಸ್ತರಣಾಧಿಕಾರಿ ಬಿ.ಎಸ್.ನಿಶ್ಚಿತ್, ನಂದಿನಿ, ಉಪಾಧ್ಯಕ್ಷೆ ಸುನಂದಮ್ಮ, ನಿರ್ದೇಶಕರಾದ ಕರಿಗೌಡ, ರವಿ, ನಜೀಬ್, ಗಣೇಶ್, ತಮ್ಮಯ್ಯ, ರಾಜೇಗೌಡ, ರಾಮಕೃಷ್ಣ, ಲಕ್ಷ್ಮಿ, ಹಾಲು ಪರೀಕ್ಷಕ ಮಂಜು, ರೇವಣ್ಣ ಸೇರಿದಂತೆ ಹಲವರಿದ್ದರು.

ವಾರ್ಷಿಕ ಮಹಾಸಭೆ

ಮಲ್ಲುಂಡಿ, ಸೆ.19– ಇಲ್ಲಿಗೆ ಸಮೀಪದ ಹಲ್ಲರೆ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಸೆ.22 ರಂದು ಅಧ್ಯಕ್ಷ ಹೆಚ್.ಎನ್.ಬಸವರಾಜ್ ಅವರ ಅಧ್ಯಕ್ಷತೆಯಲ್ಲಿ ಮಧ್ಯಾಹ್ನ 12.30ಕ್ಕೆ ನಡೆಯಲಿದೆ. ರೈತರು ತಪ್ಪದೇ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸಭೆಯನ್ನು ಯಶಸ್ವಿಗೊಳಿಸಬೇಕು ಎಂದು ಸಿಇಓ ಹೆಚ್.ಡಿ.ಕುಮಾರಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀಕ್ಷೇತ್ರ ಧರ್ಮಸ್ಥಳ ಯೋಜನೆಯಿಂದ ಸಮಾಜಮುಖಿ ಕಾರ್ಯಕ್ರಮ

ಮಾಜಿ ಸಚಿವ ಸಾ.ರಾ.ಮಹೇಶ್ ಪುತ್ರ, ವೈದ್ಯ ಡಾ.ಸಾ.ರಾ.ಧನುಷ್

ಸಾಲಿಗ್ರಾಮ, ಸೆ.19– ಡಾ.ವೀರೇಂದ್ರ ಹೆಗ್ಗಡೆ ಅವರು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿ ಗ್ರಾಮಾಭ್ಯುದಯ, ಆರ್ಥಿಕ ಸಬಲತೆ, ಕೃಷಿ, ಶಿಕ್ಷಣ, ಆರೋಗ್ಯ, ಸಾಮಾಜಿಕ ಕ್ಷೇತ್ರ ಒಳಗೊಂಡಂತೆ ಸಮಾಜಮುಖಿ ಕಾರ್ಯಕ್ರಮಗಳನ್ನು ರಾಜ್ಯದ ಜನತೆಗೆ ನಿರಂತರವಾಗಿ ನೀಡುತ್ತಿದ್ದಾರೆ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ಅವರ ಪುತ್ರ ಡಾ.ಸಾ.ರಾ.ಧನುಷ್ ತಿಳಿಸಿದರು.

ಸಾಲಿಗ್ರಾಮದ ಬಾಹುಬಲಿ ಸಭಾ ಭವನದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಆಯೋಜಿಸಿದ್ದ ನವ ಜೀವನೋತ್ಸವ ಹಾಗೂ ಸುಜ್ಞಾನ ನಿಧಿ ಶಿಷ್ಯವೇತನ ಮಂಜೂರಾತಿ ಪತ್ರ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಯಾವುದೇ ಹವ್ಯಾಸಗಳು ಅತಿರೇಕಗೊಂಡಾಗ ಅದು ಆರೋಗ್ಯ, ಕುಟುಂಬ ಮತ್ತು ಸಮಾಜದ ಮೇಲೆ ದುಷ್ಪರಿಣಾಮ ಬೀರುತ್ತದೆ. ನಾವು ತಪ್ಪು ಮಾಡಿ ದೇವರ ಮೊರೆ ಹೋದರೆ ಸಾಲದು. ನಮ್ಮ ಮನಸ್ಸನ್ನು ಶುದ್ಧ ಮಾಡಿಕೊಂಡು ಬೇರೆಯವರಿಗೆ ಕೆಟ್ಟದ್ದನ್ನು ಮಾಡದೆ ಕಾಯಕವೇ ಕೈಲಾಸ ಎಂಬ ಆದರ್ಶ ಮೈಗೂಡಿಸಿಕೊಂಡಾಗ ದೇವರು ತಾನಾಗಿಯೇ ಒಲಿಯುತ್ತಾನೆ ಎಂದರು.

ವಿದ್ಯಾರ್ಥಿಗಳು ದೇಶದ ಸತ್ಪ್ರಜೆಯಾಗಿ ಬಾಳಬೇಕು. ಸತ್ತ ಪ್ರಜೆಗಳಾಗಿ ಬಾಳುವುದು ಬೇಡ. ಸಮಾಜ ಮತ್ತು ದೇಶವನ್ನು ಕಟ್ಟುವ ನಾವು ಒಳ್ಳೆಯ ಕೆಲಸ ಮಾಡಿ ಬೇರೆಯವರಿಗೆ ಮಾದರಿಯಾಗಬೇಕು. ಆಗ ಮಾತ್ರ ಒಳ್ಳೆಯ ಜೀವನ ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದರು.

ಡಾ.ವೀರೇಂದ್ರ ಹೆಗ್ಗಡೆ ಹಾಗೂ ಹೇಮಾವತಿಯವರು ಗ್ರಾಮಾಭಿವೃದ್ಧಿ ಸಂಸ್ಥೆ ಸ್ಥಾಪಿಸಿ, ಸರ್ಕಾರ ಮಾಡದ ಕೆಲಸವನ್ನು ಮಾಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ ಅವರು, ಇದಕ್ಕೆ ನಾವು ಸಹಕಾರ ನೀಡಬೇಕೇ ವಿನಹ ಯಾರೂ ತೊಂದರೆ ಕೊಡಬಾರದು ಎಂದರು.



ಮಾಜಿ ಸಚಿವ ಸಾ.ರಾ.ಮಹೇಶ್ ಪುತ್ರ, ವೈದ್ಯ ಡಾ.ಸಾ.ರಾ.ಧನುಷ್ ಕಾರ್ಯಕ್ರಮ ಉದ್ಘಾಟಿಸಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಶಿಷ್ಯ ವೇತನದ ಮೂಲಕ ಸಾಕಷ್ಟು ಬಡ ಹಾಗೂ ಆರ್ಥಿಕವಾಗಿ ಹಿಂದುಳಿದ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗುತ್ತಿದ್ದು, ಉನ್ನತ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿ ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡಲು ಪ್ರೇರೇಪಿಸುತ್ತಿದೆ.ಶಿಷ್ಯ ವೇತನ ಪಡೆಯುತ್ತಿರುವ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆದು ತಂದೆ ತಾಯಿಗಳಿಗೆ ಆಸರೆಯಾಗಬೇಕು ಎಂದರು.

ಜಿಲ್ಲಾ ನಿರ್ದೇಶಕಿ ಮಮತಾ ಹಾಗೂ ತಾಲೂಕು ಯೋಜನಾ ಧಿಕಾರಿ ಉಮೇಶ್ ಪೂಜಾರಿ ಮಾತನಾಡಿದರು. ತಾಲೂಕಿನಲ್ಲಿ ಒಟ್ಟು 225 ವಿದ್ಯಾರ್ಥಿಗಳಿಗೆ ಸುಜ್ಞಾನ ನಿಧಿ ಶಿಷ್ಯ ವೇತನ ನೀಡಲಾಗುತ್ತಿದ್ದು, ಪ್ರಸ್ತುತ 125 ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ವಿತರಿಸಲಾಯಿತು.


ಈ ವೇಳೆ ತಾಲೂಕು ಜೆಡಿಎಸ್ ಅಧ್ಯಕ್ಷ ಮೆಡಿಕಲ್ ರಾಜಣ್ಣ ಜಿಪಂ ಮಾಜಿ ಸದಸ್ಯ ಎಂ.ಟಿ.ಕುಮಾರ್, ಜನ ಜಾಗೃತಿ ಸದಸ್ಯರಾದ ಬಾಲ ಮನೋಹರ್, ಲೋಕನಾಥ್, ಶಕುಂತಲಾ, ಮಧುಚಂದ್ರ, ಜೈನ್ ಪರಿಷತ್ ಅಧ್ಯಕ್ಷ ರಾಜೇಂದ್ರ ಪ್ರಸಾದ್, ರೈತ ಸಂಘದ ಅಧ್ಯಕ್ಷ ಎಸ್.ಬಿ.ಶೇಖರ್, ಗ್ರಾಪಂ ಮಾಜಿ ಅಧ್ಯಕ್ಷ ಎಸ್.ಆರ್. ಪ್ರಕಾಶ್, ಮಂಜುನಾಥ್, ಉಪನ್ಯಾಸಕ ನಾಗರಾಜು ಸೇರಿದಂತೆ ಸಂಸ್ಥೆಯ ಮಹಿಳಾ ಸದಸ್ಯರು, ಮದ್ಯವರ್ಜನ ಶಿಬಿರದ ಶಿಬಿರಾರ್ಥಿಗಳು ಮತ್ತಿತರರಿದ್ದರು.

ಮಾದೇಗೌಡನಹುಂಡಿ ಡೇರಿಗೆ 50,396 ರೂ. ಲಾಭ

ತಿ.ನರಸೀಪುರ, ಸೆ.19– ರೈತರು ಗುಣಮಟ್ಟದ ಹಾಲು ಸರಬರಾಜು ಮಾಡುವುದರಿಂದ ಹಾಲು ಉತ್ಪಾದಕರ ಸಹಕಾರ ಸಂಘಗಳ ಅಭಿವೃದ್ಧಿ ಸಾಧ್ಯ. ಇದರಿಂದ ರೈತರಿಗೂ ಹೆಚ್ಚಿನ ಅನುಕೂಲವಾಗಲಿದೆ ಎಂದು ಮಾದೇಗೌಡನ ಹುಂಡಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಪುನೀತ್ ಕುಮಾರ್ ತಿಳಿಸಿದರು.

ತಾಲೂಕಿನ ಮಾದೇಗೌಡನಹುಂಡಿ ಡೇರಿ ಆವರಣದಲ್ಲಿ ನಡೆದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಂಘ ಅಭಿವೃದ್ಧಿ ಹೊಂದಲು ಹೆಚ್ಚಿನ ಹಾಲು ಪೂರೈಕೆ ಹಾಗೂ ಗುಣಮಟ್ಟ ಹೆಚ್ಚಾಗಬೇಕು. ಶುದ್ಧ ಹಾಗೂ ಗುಣಮಟ್ಟದ ಹಾಲನ್ನು ಸರಬರಾಜು ಮಾಡಿದರೆ ಸಂಘವು ಉಳಿಯುತ್ತದೆ ಮತ್ತು ಸರ್ಕಾರದ ಪ್ರೋತ್ಸಾಹಧನ ರೈತರಿಗೆ ಬರಲು ಅನುಕೂಲವಾಗುತ್ತದೆ. ರೈತರು ಕೃಷಿಯೊಂದಿಗೆ ಹೈನುಗಾರಿಕೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ಹೈನುಗಾರಿಕೆ ಇಂದು ಉಪ ಕಸುಬಾಗಿ ಉಳಿದಿಲ್ಲ. ಅದೊಂದು ಉದ್ದಿಮೆಯಾಗಿ ಬೆಳೆಯುತ್ತಿದೆ. ಹಾಲು ಉತ್ಪಾದಕರ ಪರಿಶ್ರಮದಿಂದ ಗ್ರಾಮದ ಸಹಕಾರ ಸಂಘ 2024–25 ನೇ ಸಾಲಿನಲ್ಲಿ 50,396 ರೂ. ನಿವ್ವಳ ಲಾಭ ಗಳಿಸಿ ಯಶಸ್ವಿಯಾಗಿ ಮುನ್ನಡೆಯುತ್ತಿದೆ. ಇದಕ್ಕೆ ಕಾರಣರಾದ ರೈತರು, ಷೇರುದಾರರಿಗೆ ಅಭಿನಂದನೆ ಸಲ್ಲಿಸುವು ದಾಗಿ ತಿಳಿಸಿದರು. ಕಾರ್ಯದರ್ಶಿ ರಘು ಎಸ್.ಗೌಡ ವಾರ್ಷಿಕ ವರದಿ ಮಂಡಿಸಿ ಮಾತನಾಡಿ, ಸಹಕಾರ ಸಂಘದ ಲಾಭದಲ್ಲಿ ಷೇರುದಾರರಿಗೆ 20,613 ರೂ.ಗಳನ್ನು ಬೋನಸ್ ನೀಡಲಾಗಿದ್ದು, ಮುಂದಿನ ದಿನಗಳಲ್ಲಿ ಸಂಘವು ಮತ್ತಷ್ಟು ಲಾಭಾಂಶ ಗಳಿಸಲು ಹೈನುಗಾರರು ಡೈರಿಯೊಂದಿಗೆ ಉತ್ತಮ ಬಾಂಧವ್ಯ ಹೊಂದಬೇಕು. ಗುಣಮಟ್ಟದ ಹಾಲನ್ನೇ ಪೂರೈಕೆ ಮಾಡಬೇಕು ಎಂದರು.



ಹೆಚ್ಚು ಹಾಲು ಸರಬರಾಜು ಮಾಡಿದ ರೈತರನ್ನು ಸನ್ಮಾನಿಸಲಾಯಿತು.

ಪ್ರಸ್ತುತ ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳು ಹೊರ ರಾಜ್ಯವಲ್ಲದೇ ಪಾಶ್ಚಾತ್ಯ ದೇಶಗಳಲ್ಲೂ ಮಾರುಕಟ್ಟೆ ವಿಸ್ತರಿಸಿರುವುದು ನಂದಿನಿ ಹಾಲಿನ ಉತ್ಕೃಷ್ಟತೆಗೆ ಸಾಕ್ಷಿಯಾಗಿದೆ. ಆರೋಗ್ಯವಂತ ಹಸುವಿನ ಶುದ್ಧ ಗುಣಮಟ್ಟದ ಹಾಲನ್ನು ಮಾತ್ರ ಸಂಘವು ತೆಗೆದುಕೊಳ್ಳುತ್ತದೆ. ಕೆಚ್ಚಲು ಬಾವು ಇರುವ ಹಾಲನ್ನು ಸಂಘಕ್ಕೆ ಸರಬರಾಜು ಮಾಡಬಾರದು.

– ರಂಜಿತಾ, ವಿಸ್ತರಣಾಧಿಕಾರಿ.

ಸಂಘಕ್ಕೆ ಹೆಚ್ಚು ಹಾಲು ಸರಬರಾಜು ಮಾಡಿದ ನಾರಾಯಣ, ರಾಮೇಗೌಡ ಹಾಗೂ ಕೃಷ್ಣ ಅವರಿಗೆ ಬಹುಮಾನ ನೀಡಿ ಅಭಿನಂದಿಸಲಾಯಿತು. ಡೇರಿ ಮಾಜಿ ಅಧ್ಯಕ್ಷ ನರಸೇಗೌಡ, ಉಪಾಧ್ಯಕ್ಷ ಅಂಬಿಕಾ, ನಿರ್ದೇಶಕರಾದ ಚುಂಚೇಗೌಡ, ಎಂ.ಪಿ.ಪ್ರಭಾಕರ್, ಸಂಪತ್ ಕುಮಾರ್, ನವೀನ್, ನಾಗರಾಜು, ಗಣಪತಿಚಾರಿ, ರಾಮಚಂದ್ರ, ರತ್ನಮ್ಮ, ಹಾಲು ಪರೀಕ್ಷಕ ಪ್ರದೀಪ್, ರೈತರು ಹಾಜರಿದ್ದರು

ಮೈಸೂರು ದಸರಾ ಮಹೋತ್ಸವ ವಿಶೇಷ

ರಂಗಾಯಣದಲ್ಲಿ ಸೆ.22ರಿಂದ ಅ.1ರವರೆಗೆ ನವರಾತ್ರಿ ರಂಗೋತ್ಸವ

● ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಮಾಹಿತಿ ● ಪ್ರತಿನಿತ್ಯವೂ ಹೊರ ರಾಜ್ಯದ ಕಲಾತಂಡದಿಂದ ಜಾನಪದ ನೃತ್ಯ



ಮೈಸೂರಿನ ರಂಗಾಯಣ ಆವರಣದ ಬಿ.ವಿ.ಕಾರಂತ ರಂಗಚಾವಡಿ ಆವರಣದಲ್ಲಿ ರಂಗಭೀಷ್ಮ ಬಿ.ವಿ.ಕಾರಂತ ಕಾಲೇಜು ನವರಾತ್ರಿ ರಂಗೋತ್ಸವದ ಪೋಸ್ಟರ್ ಅನ್ನು ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಬಿಡುಗಡೆ ಮಾಡಿದರು.

ಮೈಸೂರು, ಸೆ.19(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದ ವೇಳೆ ಮೈಸೂರು ರಂಗಾಯಣದಲ್ಲಿ ಸೆ.22ರಿಂದ ಅ.1ರವರೆಗೆ ರಂಗಭೀಷ್ಮ ಬಿ.ವಿ.ಕಾರಂತ ಕಾಲೇಜು ನವರಾತ್ರಿ ರಂಗೋತ್ಸವನ್ನು ಹಮ್ಮಿಕೊಳ್ಳಲಾಗಿದೆ ಎಂದು ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ತಿಳಿಸಿದ್ದಾರೆ.

ಮೈಸೂರಿನ ರಂಗಾಯಣ ಅವರಣದ ಬಿ.ವಿ.ಕಾರಂತ ರಂಗಚಾವಡಿ ಮುಂಭಾಗದ ಆವರಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನವರಾತ್ರಿ ರಂಗೋತ್ಸವವನ್ನು ಸೆ.22 ರಂದು ಸಂಜೆ 5.30ಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ಎಸ್.ತಂಗಡಗಿ ಉದ್ಘಾಟಿಸಲಿದ್ದಾರೆ. ಕನ್ನಡ ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಡಾ.ಎಂ.ವಿ.ವೆಂಕಟೇಶ್ ರಂಗಾಯಣದ ನಾಟಕಗಳ ಭಿತ್ತಿಪತ್ರ ಪ್ರದರ್ಶನಕ್ಕೆ ಚಾಲನೆ ನೀಡಲಿದ್ದಾರೆ. ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿರುವ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾದ ಕೆ.ಎಂ.ಗಾಯಿತ್ರಿ, ಜಂಟಿ ಕಾರ್ಯದರ್ಶಿ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದು, ಇದೇ ವೇಳೆ ರಂಗ ಕಲಾವಿದ ಧರ್ಮೇಂದ್ರ ಅರಸ್ ಅವರಿಗೆ ನವರಾತ್ರಿ ರಂಗಗೌರವ ನೀಡಿ ಗೌರವಿಸಲಾಗುತ್ತಿದೆ ಎಂದರು.

ರಂಗಾಯಣದ ಭೂಮಿಗೀತದಲ್ಲಿ 10 ದಿನಗಳ ಕಾಲ ನಡೆಯುವ ನವರಾತ್ರಿ ರಂಗೋತ್ಸವದಲ್ಲಿ ವಿಭಿನ್ನ ನಾಟಕ ಪ್ರದರ್ಶನಗೊಳ್ಳಲಿದ್ದು, ರಂಗಾಸಕ್ತರಿಗೆ ರಸದೌತಣ ಉಣ ಬಡಿಸಲು ಕಲಾವಿದರು ಸಜ್ಜಾಗಿದ್ದಾರೆ. ಪ್ರತಿದಿನ ಸಂಜೆ 7ಕ್ಕೆ ನಾಟಕೋತ್ಸವ ಆರಂಭವಾಗಲಿದೆ. ಇದರ ಅಂಗವಾಗಿ ರಂಗಾಯಣದ ವನರಂಗದಲ್ಲಿ ಪ್ರತಿ ದಿನ ಸಂಜೆ 5.30ಕ್ಕೆ ಅಂತರರಾಜ್ಯ ಕಲಾತಂಡಗಳಿಂದ ಜಾನಪದ ನೃತ್ಯ ಪ್ರದರ್ಶನ ಜರುಗಲಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ರಂಗ ಸಮಾಜದ ಸದಸ್ಯ ಹೆಚ್.ಎಸ್.ಸುರೇಶ್ ಬಾಬು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ರಂಗಾಯಣ ಉಪ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ನಾಟಕೋತ್ಸವದ ಸಂಚಾಲಕರಾದ ಕೆ.ಆರ್.ನಂದಿನಿ, ಬಿ.ಎನ್.ಶಶಿಕಲಾ ಇದ್ದರು.

ಜಾನಪದ ನೃತ್ಯ ಪ್ರದರ್ಶನ

ನಾಟಕೋತ್ಸವದ ಅವಧಿಯಲ್ಲಿ ಪ್ರತಿದಿನ ಸಂಜೆ 5.30ಕ್ಕೆ ವಿವಿಧ ರಾಜ್ಯಗಳ ಜಾನಪದ ಕಲಾ ಪ್ರಕಾರಗಳ ಪ್ರದರ್ಶನ ಜರುಗಲಿದೆ. ತೆಲಂಗಾಣದ ಲಂಬಾಡಿ, ಮಾತುರಿ ನೃತ್ಯ, ಮಹಾರಾಷ್ಟ್ರದ ಲಾವಣಿ, ಹೋಲಿ ನೃತ್ಯ, ಗುಜರಾತ್‌ನ ಸಿದ್ದಿ ಢುಮಾಲ್ ನೃತ್ಯ, ಒರಿಸ್ಸಾದ ಸಂಬಲ್ ಪುರಿ ನೃತ್ಯ, ಕೇರಳದ ತಿರುವತ್ತುರಕಳಿ ಮತ್ತು ಒಪ್ಪಾನ ನೃತ್ಯ, ಅಸ್ಸಾಂನ ಬಿಹು, ಗುಸಾನ್ ನೃತ್ಯ, ಮಧ್ಯಪ್ರದೇಶದ ನೋರ್ತಾ ಮತ್ತು ಸೈತಾನ್ ನೃತ್ಯ, ಗುಜಾರಾತ್‌ನ ರಥ್ವಾ ನೃತ್ಯ, ಆಂಧ್ರಪ್ರದೇಶದ ತಪ್ಪಾಟ್ಟಗುಳು ನೃತ್ಯ, ತಮಿಳುನಾಡಿನ ಕರಗಂ, ಕಾವಾಡಿ, ತಪ್ಪಟ್ಟಮ್ ನೃತ್ಯ

ಪ್ರದರ್ಶಿತ ನಾಟಕಗಳು

● ಸೆ.22: ಜೆಎಸ್‌ಎಸ್ ಮಹಿಳಾ ಕಾಲೇಜಿನ ವಿದ್ಯಾರ್ಥಿಗಳಿಂದ 'ಶರೀಫ', ರಚನೆ: ಮಂಜುನಾಥ ಬಿಳಕೆರೆ, ನಿರ್ದೇಶನ : ಶಕುಂತಲಾ ಹೆಗಡೆ

● ಸೆ.23: ಕಾವಾ ವಿದ್ಯಾರ್ಥಿಗಳಿಂದ ನೇಮಿಚಂದ್ರ ಕಾದಂಬರಿ ಆಧಾರಿತ 'ನೋವಿಗದ್ದಿದ ಕುಂಚ', ರಂಗರೂಪ, ನಿರ್ದೇಶನ: ವಿನೋದ್ ರಂಗ

● ಸೆ.24: ಹಾರ್ಡ್ವಿಕ್ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಂದ 'ರಾಕ್ಷಸ'. ರಚನೆ: ಹೂಲಿ ಶೇಖರ್, ನಿರ್ದೇಶನ: ಅಂಕರಾಜು ಎನ್, ಕೊಳ್ಳೇಗಾಲ

● ಸೆ.25: ಹುಣಸೂರಿನ ಲಾ ಸಲೆಟ್ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಂದ 'ಚಿತ್ರಪಟ ರಾಮಾಯಣ'. ರಚನೆ: ಡಾ.ಹೆಚ್.ಎಸ್.ವೆಂಕಟೇಶ್ ಮೂರ್ತಿ, ನಿರ್ದೇಶನ: ಸುಭಾಷ್ ಎ.ಎಸ್

● ಸೆ.26: ಎಂಎಂಕೆ ಮತ್ತು ಎಸ್‌ಡಿಎಂ ಕಾಲೇಜಿನ ವಿದ್ಯಾರ್ಥಿಗಳಿಂದ ಬೀಚಿ ಬರಹಗಳನ್ನಾಧರಿಸಿದ 'ಶ್ರೀ ತಿಮ್ಮಾರ್ಪಣಮಸ್ತು'. ನಿರ್ದೇಶನ: ರಮೇಶ್ ಕೆ. ಬೆಣಕಲ್

● ಸೆ.27: ಮಳವಳ್ಳಿಯ ಶಾಂತಿ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ವಿದ್ಯಾರ್ಥಿಗಳಿಂದ 'ಕಲ್ಯಾಣದ ಬಾಗಿಲು'. ರಚನೆ: ಡಾ.ಎಸ್. ನಟರಾಜು ಬೂದಾಳ್, ನಿರ್ದೇಶನ: ಮಧು ಮಳವಳ್ಳಿ

● ಸೆ.28: ಮಹಾಜನ ಪದವಿ ಕಾಲೇಜಿನ ವಿದ್ಯಾರ್ಥಿಗಳಿಂದ 'ಚೂರಿಕಟ್ಟೆ ಅಥಾರ್ತ್ ಕಲ್ಯಾಣಪುರ'. ರಚನೆ: ಕೆ.ವಿ.ಅಕ್ಷರ, ನಿರ್ದೇಶನ: ಪ್ರವೀಣ್ ಬೆಳ್ಳಿ,

● ಸೆ.29: ಹುಣಸೂರಿನ ಜ್ಞಾನಧಾರ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳಿಂದ 'ಮಾದಾರಿ ಮಾದಯ್ಯ'. ರಚನೆ: ಡಾ.ಹೆಚ್.ಎಸ್.ಶಿವಪ್ರಕಾಶ, ನಿರ್ದೇಶನ: ಹುಣಸೂರ್ ಅರ್ಜುನ್

● ಸೆ.30: ಗೌತಮ ಸಾಂಸ್ಕೃತಿಕ ಸಂಸ್ಥೆಯಿಂದ 'ಜಾತ್ರೆ'. ರಚನೆ: ದ.ರಾ.ಬೇಂದ್ರೆ, ನಿರ್ದೇಶನ: ಕೃಷ್ಣಮೂರ್ತಿ

● ಅ.1: ನಿರಂತರ ಫೌಂಡೇಶನ್ ಕಲಾವಿದರಿಂದ 'ಜನ ಗಣ ಮನ'. ರಚನೆ, ನಿರ್ದೇಶನ ದೇವಕಿ ಧರ್ಮಿಷ್ಟೆ, ಸುಗುಣ ಎಂ.ಎಂ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ತನಲ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಿರಾಯ್(ಕ) + ಕಿಸ್ (ತ)	2+2 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಜಾಲಿ ಎಲ್‌ಎಲ್‌ಬಿ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಏಳುಮಲೈ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೂಲಿ (ಕ)	4 ಪ್ರದರ್ಶನಗಳು
ರಾಜಕಮಲ್	
ಶಕ್ತಿ ತಿರುಮಗನ್ (ತ)	4 ಪ್ರದರ್ಶನಗಳು
ಸಂಗಂ	
ಕಮಲ್ ಶ್ರೀದೇವಿ (ಕ)	4 ಪ್ರದರ್ಶನಗಳು
ಲಿಡೋ	
ಸು ಫ್ರಮ್ ಸೋ (ಕ) + ತನಾಲ್ (ತ)	2+2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಎಕ್ಕ(ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕೂಲಿ (ತ): ಬೆ.7ಕ್ಕೆ, ಮ.3ಕ್ಕೆ, ರಾ.10.15ಕ್ಕೆ, ವಾರ್ –2 (ಹಿಂ): ಬೆ.10.45ಕ್ಕೆ, ಸಂ.6.40ಕ್ಕೆ.
ಸ್ಕ್ರೀನ್ 2	ಕೂಲಿ (ತ): ಬೆ.7ಕ್ಕೆ, ಸು ಫ್ರಂ ಸೋ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7ಕ್ಕೆ, ವಾರ್ –2 (ಹಿಂ): ರಾ.9.50ಕ್ಕೆ.
ಸ್ಕ್ರೀನ್ 3	ಕೂಲಿ (ತ): ಬೆ.7.05ಕ್ಕೆ, ರಾ.8.15ಕ್ಕೆ, ಕೂಲಿ (ಕ): ಬೆ.10.30ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಮ.1.50ಕ್ಕೆ, ವಾರ್ –2 (ಹಿಂ): ಸಂ.4.35ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಬೆ.11.55ಕ್ಕೆ, ಮ.3.25ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಇಂದಿನಿಂದ ಮೈಸೂರಲ್ಲಿ ದಸರಾ ಜೆಮಿನಿ ಸರ್ಕಸ್

ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್‌ರಿಂದ ಚಾಲನೆ



ಮೈಸೂರಿನ ಮೃಗಾಲಯದ ಹಿಂಭಾಗದ ಕಾರಂಜಿ ಕೆರೆ ಬಳಿಯ ಕುದುರೆ ಉದ್ಯಾನವನದಲ್ಲಿ ದಸರಾ ಜೆಮಿನಿ ಸರ್ಕಸ್ ಪ್ರದರ್ಶನಕ್ಕೆ ಸಜ್ಜಾಗಿದೆ.

ಮೈಸೂರು,ಸೆ.19(ಜಿಎ)–ಮೈಸೂರಿನ ಮೃಗಾಲಯದ ಹಿಂಭಾಗದ ಕಾರಂಜಿ ಕೆರೆ ಬಳಿಯ ಕುದುರೆ ಉದ್ಯಾನವನದಲ್ಲಿ ದಸರಾ ಜೆಮಿನಿ ಸರ್ಕಸ್‌ಗೆ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಸೆ. 20ರಂದು ಸಂಜೆ 6.30ಕ್ಕೆ ಚಾಲನೆ ನೀಡಲಿದ್ದಾರೆ ಎಂದು ಸರ್ಕಸ್ ಅಭಿಮಾನಿ ಸದಸ್ಯ ನಾಗೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತ ನಾಡಿದ ಅವರು, ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಸಿ. ಮಹದೇವಪ್ಪ ಶಾಸಕರಾದ ತನ್ವೀರ್ ಸೇಠ್, ಟಿ.ಎಸ್.ಶ್ರೀವತ್ಸ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.

40 ದಿನ ನಡೆಯಲಿರುವ ಸರ್ಕಸ್‌ನಲ್ಲಿ ಪ್ರತಿ ದಿನ ಮಧ್ಯಾಹ್ನ 1 ಗಂಟೆಗೆ, ಸಂಜೆ 4 ಗಂಟೆಗೆ ಮತ್ತು ರಾತ್ರಿ 7ಗಂಟೆಗೆ ಮೂರು ಪ್ರದರ್ಶನಗಳು ಇರಲಿವೆ. ಪ್ರಾಣಿ ದಯಾ ಸಂಘದವರ ಕಾರಣದಿಂದಾಗಿ ಸರ್ಕಸ್‌ಗಳಲ್ಲಿ ಯಾವುದೇ ಪ್ರಾಣಿಗಳನ್ನು ಬಳಸುವಂತಿಲ್ಲ. ಹೀಗಾಗಿ ದೇಶದಲ್ಲಿ ಕೇವಲ 3 ಸರ್ಕಸ್ ಇವೆ. ಇವುಗಳಲ್ಲಿ ಜೆಮಿನಿ ಸರ್ಕಸ್ ಪ್ರಮುಖ ಆಕರ್ಷಣೆಗಳನ್ನು ಒಳ ಗೊಂಡಿದ್ದು, ಇಂದಿಗೂ ತನ್ನ ಛಾಪು ಉಳಿಸಿಕೊಂಡಿದೆ. ಸರ್ಕಸ್ ನಡೆಸುವುದರಿಂದ ಅಷ್ಟೇನೂ ಲಾಭ ಈಚೆಗೆ ಬರದಿದ್ದರೂ ಅದನ್ನೇ ನಂಬಿರುವ ಸುಮಾರು 300 ಮಂದಿಯ ಜೀವನಕ್ಕೆ ಅಡ್ಡಿಯಾಗಬಾರದೆಂಬ ಕಾರಣದಿಂದ ನಡೆಸಲಾಗುತ್ತಿದೆ ಎಂದರು.

ಎರಡು ಗಂಟೆ ನಡೆಯುವ ಪ್ರದರ್ಶನದಲ್ಲಿ ಆಫ್ರಿಕನ್ ತಂಡದಿಂದ ಸಾಹಸ ಪ್ರದರ್ಶನ, ವಿವಿಧ ಪ್ರಾಣಿಗಳ ರೋಬಾಟ್‌ಗಳು ಈ ಬಾರಿಯ ಪ್ರಮುಖ ಆಕರ್ಷಣೆ ಆಗಲಿವೆ. ಟಿಕೆಟ್ ದರ 150, 250 ಹಾಗೂ 350 ರೂ.ಗಳಾಗಿವೆ. ಬುಕ್ ಮೈ ಶೋ ಮೂಲಕ ಆನ್‌ಲೈನ್ ನಲ್ಲಿ ಮುಂಗಡವಾಗಿ ಟಿಕೆಟ್ ಖರೀದಿಸಲು ಅವಕಾಶವಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸರ್ಕಸ್ ವ್ಯವಸ್ಥಾಪಕ ಸುರೇಶ್, ಸಂಚಾಲಕ ಪ್ರೇಮನಾಥ್ ಉಪಸ್ಥಿತರಿದ್ದರು.

ಯತ್ನಾಳ್, ವಿಶ್ವನಾಥ್, ಪ್ರತಾಪ್ ಸಿಂಹರಿಂದ ರಾಜ್ಯದ ಮಾನ ಹಾನಿ

● ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಆರೋಪ ● ಕಲುಷಿತ ವಾತಾವರಣ ಸೃಷ್ಟಿಸುತ್ತಿರುವ ಇವರ ವಿರುದ್ಧ ಉಗ್ರ ಹೋರಾಟ ● ದಲಿತ ಅರ್ಚಕರಿಂದ ಚಾಮುಂಡೇಶ್ವರಿ ದೇವಿ ಪೂಜಿಸಲು ಆಗ್ರಹ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮ್ ಮಾತನಾಡಿದರು.

ಮೈಸೂರು,ಸೆ.19(ಜಿಎ)–ಶಾಸಕ ಬಸವಗೌಡ ಪಾಟೀಲ್ ಯತ್ನಾಳ್, ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್, ಮಾಜಿ ಸಂಸದ ಪ್ರತಾಪ ಸಿಂಹ ಅಸಂವಿಧಾನಿಕ ಪದ ಬಳಸಿ ರಾಜ್ಯದ ಮಾನಕ್ಕೆ ದಕ್ಕೆ ತರುತ್ತಿದ್ದಾರೆ ಎಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಆಕ್ರೋಶ ವ್ಯಕ್ತಪಡಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮ್ ಮಾತನಾಡಿ, ಈ ಮೂವರು ರಾಜಕಾರಣಿಗಳಿಂದ ರಾಜ್ಯದಲ್ಲಿ ಕಲುಷಿತ ವಾತಾವರಣ ಸೃಷ್ಟಿಯಾಗುತ್ತಿದೆ. ಮೈಸೂರು ದಸರಾ, ಧರ್ಮಸ್ಥಳ ಪ್ರಕರಣ, ಜಾತಿ ಸಮೀಕ್ಷೆ, ಗಣೇಶ ಉತ್ಸವಗಳಲ್ಲಿ ಕೋಮು ಭಾವನೆ ಬಿತ್ತಿ ಸ್ವಾಸ್ಥ್ಯ ಹಾಳು ಮಾಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಇದೆ ರೀತಿಯ ಭಾಷೆ ಪ್ರಯೋಗ ಮುಂದುವರಿಸಿದರೆ ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದರು.

ಸಂವಿಧಾನದ ಹುದ್ದೆಯಾದ ಮುಖ್ಯಮಂತ್ರಿ ಸ್ಥಾನದಲ್ಲಿರುವ ಸಿದ್ದರಾಮಯ್ಯನವರ ವಿರುದ್ಧ ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಮಾತನಾಡಿರುವುದು ಖಂಡನೀಯ. ಮುಂದಿನ ಪೀಳಿಗೆಗೆ ಯಾವ ಸಂದೇಶ ಕೊಡಲು ಹೊರಟಿದ್ದಾರೆ? ಎಂದು ಪ್ರಶ್ನಿಸಿದರು.

ದಸರಾ ಉದ್ಘಾಟನೆಯ ಸಂದರ್ಭದಲ್ಲಿ ದಲಿತ ಅರ್ಚರ ನೇಮಕ ಮಾಡಿ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಬೇಕು. ಸಂಸ್ಕೃತ ಹೇಳುವವರನ್ನೇ ನಾವು ಕರೆದುಕೊಂಡು ಬರುತ್ತೇವೆ. ನೀವು ನೇಮಕ ಮಾಡಿ. ಪ್ರತಾಪ್ ಸಿಂಹ ಹಿಂದುತ್ವ ಪ್ರತಿಪಾದಿಸುವುದಾದರೇ ಈ ಸವಾಲನ್ನು ಸ್ವೀಕರಿಸಿ ಎಂದ ಅವರು, ಪ್ರತಾಪ ಸಿಂಹ, ಯತ್ನಾಳ್ ನಕಲಿ ಹಿಂದುತ್ವವಾದಿಗಳು. ನೀವು ನಿಜವಾದ ಹಿಂದೂಗಳೇ ಆಗಿದ್ದರೆ ದಲಿತ ಅರ್ಚಕರಿಂದ ಪೂಜೆ ಸಲ್ಲಿಸಲು ಆಗ್ರಹಿಸಿ ಎಂದರು.

ಪ್ರಬಲ ಸಮುದಾಯಗಳು ರಾಜಕೀಯ ಅಸ್ತಿತ್ವ ಕಳೆದು ಹೋಗುವ ಭಯದಲ್ಲಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಮೀಕ್ಷೆಯನ್ನು ಜಾತಿ ಗಣತಿ ಎಂದು ಬಿಂಬಿಸಿ ಅಪಪ್ರಚಾರ ನಡೆಸಲಾಗುತ್ತಿದೆ. ಪಟ್ಟಭದ್ರರು ಈಗಾಗಲೇ ಮೊದಲ ವರದಿಯನ್ನು ಹಳ್ಳ ಹಿಡಿಸಿದ್ದಾರೆ. ಈಗ ಮತ್ತೊಂದು ವರದಿಯನ್ನು ಹಳ್ಳ ಹಿಡಿಸಲು ಹುನ್ನಾರ ನಡೆಸಲಾಗುತ್ತಿದೆ. ವಿರೋಧ ಪಕ್ಷಗಳ ಕುತಂತ್ರದ ಆರೋಪಕ್ಕೆ ಹೆದರಿ ಸಮೀಕ್ಷೆ ವಿರೋಧಿಸಬಾರದು. ಸಣ್ಣ–ಪುಟ್ಟ ಲೋಪ ದೋಷಗಳನ್ನು ಸರಿಪಡಿಸಿ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಯಾರಿಗೂ ಜಗ್ಗದೆ–ಬಗ್ಗದೆ ಸಮೀಕ್ಷೆ ನಡೆಸಿ ಅನುಷ್ಠಾನಗೊಳಿಸಬೇಕು. ಕಾಂಗ್ರೆಸ್‌ನ ಕೆಲವು ಜನಪ್ರತಿನಿಧಿಗಳು, ಸಚಿವರು ಬಿಜೆಪಿ ಮನಸ್ಥಿತಿಯಲ್ಲಿ ಸಮೀಕ್ಷೆಗೆ ವಿರೋಧ ವ್ಯಕ್ತಪಡಿಸುವವರ ವಿರುದ್ಧ ಕ್ರಮ ಜರುಗಿಸಬೇಕು. ತಾವು ಹೇಳಿರುವಂತೆ ಅಂತಹವರನ್ನು ಪಕ್ಷದಿಂದ ಹೊರ ಹಾಕಬೇಕು ಎಂದು ಕೇಂದ್ರದ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಪತ್ರ ಬರೆಯಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಲೋಕೇಶ್ ಮಾದಾಪುರ, ಹೆಚ್.ಎಸ್.ಪ್ರಕಾಶ್, ರಘುನಂದನ್ ಉಪಸ್ಥಿತರಿದ್ದರು.

'ಆಯುರ್ಪಥ' ಜಾಗೃತಿ ಜಾಥಾ



ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ವತಿಯಿಂದ 10ನೇ ಆಯುರ್ವೇದ ದಿನಾಚರಣೆ ಅಂಗವಾಗಿ 'ಆಯುರ್ಪಥ' ಜಾಗೃತಿ ಜಾಥಾ ನಡೆಸಲಾಯಿತು.

ಮೈಸೂರು, ಸೆ.19(ಎಂಕೆ)– ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ವತಿಯಿಂದ 10ನೇ ಆಯುರ್ವೇದ ದಿನಾಚರಣೆ ಅಂಗವಾಗಿ 'ಆಯುರ್ಪಥ' ಜಾಗೃತಿ ಜಾಥಾ ನಡೆಸಲಾಯಿತು.

'ವೈದ್ಯರ ನಡಿಗೆ ಔಷಧ ಸಸ್ಯದ ಕಡೆಗೆ', 'ಜನರಿಗಾಗಿ ಮತ್ತು ಜಗತ್ತಿಗಾಗಿ ಆಯುರ್ವೇದ' ಎಂಬಿತ್ಯಾದಿ ಘೋಷಣೆಗಳೊಂದಿಗೆ ಕಾಲೇಜು ಆವರಣದಿಂದ ಪ್ರಾರಂಭವಾದ ಜಾಥಾ, ನ್ಯೂ ಸಯ್ಯಾಜಿರಾವ್ ರಸ್ತೆ, ಇರ್ವಿನ್ ರಸ್ತೆ, ರೈಲ್ವೆ ನಿಲ್ದಾಣ, ಮೆಟ್ರೋಪೋಲ್ ವೃತ್ತ, ಕಲಾಮಂದಿರ ಮಾರ್ಗವಾಗಿ ಬೋಗಾದಿ ರಸ್ತೆಯಲ್ಲಿರುವ ಆಯುರ್ವೇದ ಕಾಲೇಜಿನ ಸಸ್ಯೋಧ್ಯಾನ 'ಚಂದ್ರವನ'ದಲ್ಲಿ ಮುಕ್ತಾಯಗೊಂಡಿತು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮಂಡಿ ಪೊಲೀಸ್ ಠಾಣೆ ಪಿಎಸ್‌ಐ ಟಿ.ಎಸ್.ಮಹೇಂದ್ರ ಜಾಥಾಗೆ ಚಾಲನೆ ನೀಡಿದರು. ಕಾಲೇಜು ಪ್ರಾಂಶುಪಾಲ ಡಾ.ಕೆ.ಎಸ್.ರಾಧಾಕೃಷ್ಣ ರಾಮರಾವ್, ಆರ್‌ಎಂಒ ಡಾ.ಶಶಿರೇಖಾ, ಎನ್‌ಎಸ್‌ಎಸ್ ಅಧಿಕಾರಿ ಡಾ.ಸುನೀತಾ ಸಿದ್ದೇಶ್, ವಿದ್ಯಾರ್ಥಿ ಮುಖಂಡರಾದ ಬಸವರಾಜು, ರಮೇಶ್, ಸಿಬ್ಬಂದಿ ಸೇರಿದಂತೆ ಸುಮಾರು 400 ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು ಜಾಥಾದಲ್ಲಿ ಪಾಲ್ಗೊಂಡಿದ್ದರು.

ಇಂದು ಜಾನಪದ, ಚಲನಚಿತ್ರ ಗೀತೆಗಳ ಲೈವ್ ಕಾರ್ಯಕ್ರಮ

ಮೈಸೂರು,ಸೆ.19(ಜಿಎ)–ಗಹನ ಮೈಸೂರು ತಂಡದ ವತಿಯಿಂದ ಸೆ. 20 ರ ಸಂಜೆ 5ಕ್ಕೆ ನಗರದ ಜೆ.ಕೆ. ಮೈದಾಣದಲ್ಲಿನ ಪ್ಲಾಟಿನಂ ಜ್ಯೂಬಿಲಿ ಸಭಾಂಗಣದಲ್ಲಿ ಜಾನಪದ, ಚಲನಚಿತ್ರ ಗೀತೆಗಳ ಲೈವ್ ಕಾರ್ಯಕ್ರಮ ಗಾನ ಪರ್ವ–2 ಆಯೋಜಿಸಲಾಗಿದೆ ಎಂದು ತಂಡದ ಮುಖ್ಯಸ್ಥ ಶಿವರಾಜು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ಜಾನಪದ ಗೀತೆಗಳನ್ನು ಮೂಲ ಧಾಟಿಯೊಡನೆ ಅತ್ಯಾಧುನಿಕ ವಾದ್ಯಗಳೊಡನೆ ಪ್ರಸ್ತುತಪಡಿಸಲಾಗುವುದು. ಚಲನಚಿತ್ರ ಗೀತೆಗಳೂ ಇರಲಿವೆ. ಸುಮಾರು 18 ಹಾಡು ಹಾಡಲಾಗುವುದು. ಕಿರುತೆರೆ ನಟ ಅಶ್ವಿನ್, ರೈತ ಹೋರಾಟಗಾರ ಹೊನ್ನೂರು ಪ್ರಕಾಶ್, ಹಿನ್ನೆಲೆ ಗಾಯಕ ವೀನ್ ಸಜ್ಜು, ಚಿತ್ರನಟ ಆದಿ ಲೋಕೇಶ್, ಕಾಮಿಡಿ ಕಿಲಾಡಿಗಳು ಖ್ಯಾತಿಯ ಮನೋಹರ್, ಯಶ್ವಂತ್ ಶೆಟ್ಟಿ, ಜೀವಾ ವಿನಯ್, ಅವತಾರ್ ಶಿವು, ಪ್ರಸಾದ್ ಜಾಕಿ ಮತ್ತಿತರರು ಆಗಮಿಸಲಿದ್ದಾರೆ. ಇದು ಲೈವ್ ಕಾರ್ಯಕ್ರಮವಾಗಿದ್ದು, ಪ್ರವೇಶ ಉಚಿತವಾಗಿದೆ. ಸಂಗೀತ ಪ್ರೇಮಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪ್ರೋತ್ಸಾಹಿಸಬೇಕು ಎಂದರು.

ನಾಲ್ವಡಿಯವರ ಕೊಡುಗೆ ಸ್ಮರಿಸುವ ಸಲುವಾಗಿ ಸೆ.23ರಿಂದ ದಸರಾ ಕೇಕ್ ಶೋ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಒನ್ ಪಾಯಿಂಟ್ ಸಲ್ಯೂಷನ್ಸ್ ಮುಖ್ಯಸ್ಥ ಎಸ್. ಶ್ರೀಕಾಂತ್ ಮಾತನಾಡಿದರು.

ಮೈಸೂರು,ಸೆ.19(ಜಿಎ)–ದಸರಾ ಮಹೋತ್ಸವದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಕೊಡುಗೆಗಳನ್ನು ಸಾರುವ ನಿಟ್ಟಿನಲ್ಲಿ ಡಿನಿ ಸಿನಿ ಕ್ರಿಯೇಷನ್ಸ್, ಒನ್ ಪಾಯಿಂಟ್ ಸಲ್ಯೂಷನ್ ವತಿಯಿಂದ ಸೆ.23ರಿಂದ ಅ.7ರವರೆಗೆ ದಸರಾ ಕೇಕ್ ಶೋ ಆಯೋಜಿಸಲಾಗುತ್ತಿದೆ ಎಂದು ಒನ್ ಪಾಯಿಂಟ್ ಸಲ್ಯೂಷನ್ಸ್ ಮುಖ್ಯಸ್ಥ ಎಸ್. ಶ್ರೀಕಾಂತ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಾಮರಾಜಪುರಂ ಕೆ.ಆರ್. ಬುಲೇವಾರ್ಡ್ ರಸ್ತೆಯ ಜಯ ಚಾಮರಾಜ ಅರಸು ಎಜುಕೇಷನ್ ಟ್ರಸ್ಟ್‌ನಲ್ಲಿ ದಸರಾ ಕೇಕ್ ಶೋ ಆಯೋಜಿಸಲಾಗಿದ್ದು, ಸೆ.23ರಂದು ನಟಿ ರಚಿತ ರಾಮ್ ಇದಕ್ಕೆ ಚಾಲನೆ ನೀಡಲಿದ್ದಾರೆ. ಶೋನಲ್ಲಿ ಮೈಸೂರಿನ ಪರಂಪರೆ, ಶ್ರೀಮಂತಿಕೆ, ಸಾಂಸ್ಕೃತಿಕತೆ ಪ್ರದರ್ಶಿಸುವ ಉದ್ದೇಶವಿದ್ದು, ಪ್ರಸಿದ್ಧ ಸ್ಮಾರಕ, ಪೌರಾಣಿಕ ವ್ಯಕ್ತಿತ್ವ, ಸಾಮಾಜಿಕ ವಿಷಯ, ಜನಪ್ರಿಯ ಸಂಸ್ಕೃತಿ ಬಿಂಬಿಸುವ ಕೇಕ್‌ಗಳು ಇರಲಿದ್ದು, ಪ್ರಮುಖವಾಗಿ ನಾಲ್ವಡಿ ಅವರ ಕೊಡುಗೆಗಳನ್ನು ಪ್ರದರ್ಶಿಸಲಾಗುತ್ತದೆ ಎಂದರು.

ಪ್ರಮುಖ ಆಕರ್ಷಣೆ : ನಾಲ್ವಡಿ ಅವರ ಪ್ರತಿಮೆ, ಕೆಆರ್‌ಎಸ್ ಡ್ಯಾಂ, ಮೈಸೂರು ಅಂಬಾವಿಲಾಸ ಅರಮನೆ, ಅಂಬಾರಿ ಹೊತ್ತಿರುವ ಆನೆ ಜೊತೆ ಎರಡು ಕುಮಕ್ಕಿ ಆನೆ ಇರುವಂತೆ ಕೇಕ್‌ಗಳನ್ನು ನಿರ್ಮಿಸಲಾಗುತ್ತಿದೆ. ನಾಲ್ವಡಿ ಅವರ ಪ್ರತಿಮೆಯನ್ನು ಚಾಕಲೇಟ್‌ನಿಂದ ನಿರ್ಮಾಣ ಮಾಡಲಾಗುತ್ತಿದೆ. ಬೇರೆಡೆ ಈ ರೀತಿ ಮಾಡುವಾಗ ಥರ್ಮಕೋಲ್ ಬಳಸುತ್ತಾರೆ. ಆದರೆ, ಸಂಪೂರ್ಣವಾಗಿ 3 ಸಾವಿರಕ್ಕೂ ಅಧಿಕ ಕೇಕ್ ಬಳಸಿಕೊಂಡು ನಿರ್ಮಿಸಲಾಗುತ್ತಿದೆ ಎಂದು ತಿಳಿಸಿದರು.

ಕೇಕ್ ಶೋ ದಸರಾ ಮಹೋತ್ಸವಕ್ಕೆ ಮತ್ತೊಂದು ಮೆರಗು ನೀಡಲಿದ್ದು, ಪ್ರವಾಸಿಗರು ಮತ್ತು ಸ್ಥಳೀಯರ ಗಮನ ಸೆಳೆಯಲಿದೆ. ಸೆ.23ರಿಂದ ಅ.7ರವರೆಗೆ ನಡೆಯುವ ಪ್ರದರ್ಶನಕ್ಕೆ ಬೆಳಗ್ಗೆ 10 ರಿಂದ ರಾತ್ರಿ 9 ರವರೆಗೆ ಪ್ರವೇಶವಿದೆ. ಟಿಕೆಟ್ ದರ 60 ರೂ.,ಗಳಾಗಿವೆ ಎಂದರು. ಸುದ್ದಿಗೋಷ್ಠಿಯಲ್ಲಿ ಆಯೋಜಕರಾದ ದಿನೇಶ್, ಪ್ರಶಾಂತ್ ಉಪಸ್ಥಿತರಿದ್ದರು.

ಕೇಂದ್ರ ಸರ್ಕಾರದ ಉದ್ಯೋಗಗಳಲ್ಲಿ ಹಿಂದುಳಿದ ವರ್ಗದವರಿಗೆ ಮೀಸಲಾತಿ ದೊರೆಯಲು ಬಿ.ಪಿ.ಮಂಡಲ್ ಕಾರಣ

ಶಾಸಕ ಕೆ.ಹರೀಶ್‌ಗೌಡ ಅಭಿಮತ



ಬಿ.ಪಿ. ಮಂಡಲ್ ಅವರ 107ನೇ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಶಾಸಕ ಕೆ.ಹರೀಶ್ ಗೌಡ ಉದ್ಘಾಟಿಸಿದರು. ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ.ರಂಗೇಗೌಡ ಮತ್ತಿತರರಿದ್ದರು.

ಮೈಸೂರು, ಸೆ.19(ಎಂಕೆ)– ಕೇಂದ್ರದಲ್ಲಿ ಹಿಂದುಳಿದ ವರ್ಗಗಳಿಗೆ ಉದ್ಯೋಗ, ಶಿಕ್ಷಣ ಮೊದಲಾದವುಗಳಲ್ಲಿ ಮೀಸಲಾತಿ ಕಲ್ಪಿಸಿದ ಬಿ.ಪಿ.ಮಂಡಲ್ ಸದಾ ಸ್ಮರಣೀಯರು ಎಂದು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಹೇಳಿದರು.

ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ರೈಲ್ವೆ ಕಲ್ಯಾಣ ಮಂಟಪದಲ್ಲಿ ಎಐಒಬಿಸಿ ನೈರುತ್ಯ ರೈಲ್ವೆ ನೌಕರರ ಸಂಘದ ವತಿಯಿಂದ ಆಯೋಜಿಸಿದ್ದ ಬಿ.ಪಿ. ಮಂಡಲ್ ಅವರ 107ನೇ ಜನ್ಮ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಹಿಂದುಳಿದ ವರ್ಗಗಳಿಗೆ ಕೇಂದ್ರ ಸರ್ಕಾರಿ ಉದ್ಯೋಗಗಳಲ್ಲಿ ಶೇ.27 ರಷ್ಟು ಮೀಸಲಾತಿ ದೊರೆಯಲು ಬಿ.ಪಿ. ಮಂಡಲ್ ಕಾರಣ ಎಂದರು.

ಮಂಡಲ್ ಆಯೋಗ 1980ರಲ್ಲಿ ಸಲ್ಲಿಸಿದ ವರದಿ, 1990ರಲ್ಲಿ ಜಾರಿಗೆ ಬಂತು. ಇದರಿಂದ ಹಿಂದುಳಿದ ವರ್ಗದ ಅಭ್ಯರ್ಥಿಗಳು ಐಎಎಸ್, ಐಪಿಎಸ್ ಮತ್ತು ಇತರ ಸರ್ಕಾರಿ ಹುದ್ದೆಗಳಲ್ಲಿ ಮೀಸಲಾತಿ ಪಡೆಯಲು ಸಾಧ್ಯವಾಯಿತು ಎಂದು ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ.ರಂಗೇಗೌಡ ಮಾತನಾಡಿ, ಇವತ್ತು ದೇಶದ ಎಲ್ಲಾ ರಾಜ್ಯಗಳಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನಿಗದಿಪಡಿಸಲು ಮಂಡಲ್ ಆಯೋಗ ನೀಡಿದ ವರದಿ ಆಧಾರವಾಗಿದೆ ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನ ನೀಡುವ ಮೂಲಕ ಇಡೀ ದೇಶದ ಜನರಿಗೆ ಬೆಳಕಾಗಿದ್ದಾರೆ. ಶೋಷಿತರು, ಬಡವರು, ದಲಿತ ಸಮುದಾಯ ಅವರನ್ನು ಸದಾ ಆರಾಧಿಸುತ್ತೆ ಆದರೆ ಹಿಂದುಳಿದ ವರ್ಗಗಳು ಮಂಡಲ್ ಅವರನ್ನು ಸ್ಮರಿಸುವುದೇ ಇಲ್ಲ ಎಂದು ವಿಷಾದಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಘದ ಗೌರವಾಧ್ಯಕ್ಷರೂ ಆದ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್. ರಂಗಪ್ಪ ಮಾತನಾಡಿ, ಮೊದಲೆಲ್ಲಾ ಹಿಂದುಳಿದವರನ್ನು ಕೇಳುವವರೇ ಇರಲಿಲ್ಲ. ಆದರೆ ಮಂಡಲ್ ಆಯೋಗದ ವರದಿ ಜಾರಿ ಮಾಡಿದ ನಂತರ ಸಾಕಷ್ಟು ಮಂದಿ ಉದ್ಯೋಗಾವಕಾಶ ಪಡೆದುಕೊಂಡಿದ್ದಾರೆ. ನೊಬೆಲ್ ಬಹುಮಾನ ಪಡೆದವರಲ್ಲಿ ಕೂಡ ಸಾಕಷ್ಟು ಮಂದಿ ಹಿಂದುಳಿದ ವರ್ಗದವರಿದ್ದಾರೆ. ಇದನ್ನೆಲ್ಲಾ ಇಂದಿನ ಮಕ್ಕಳಿಗೆ ತಿಳಿ ಹೇಳಬೇಕು ಎಂದರು.

ಇದೇ ವೇಳೆ ಅತ್ಯುತ್ತಮ ಶಿಕ್ಷಕರನ್ನು ಸನ್ಮಾನಿಸಲಾಯಿತು. ಮಾಜಿ ಶಾಸಕ ನೆ.ಲ.ನರೇಂದ್ರ ಬಾಬು ಮಾತನಾಡಿ, ರೈಲ್ವೆ ವಿಭಾಗೀಯ ವ್ಯವಸ್ಥಾಪಕ ಮುದಿತ್ ಮಿಟ್ಟಲ್, ಹಿರಿಯ ಪತ್ರಕರ್ತರಾದ ಅಂಶಿ ಪ್ರಸನ್ನಕುಮಾರ್, ಸಿ.ಕೆ. ಮಹೇಂದ್ರ, ಎಐಒಬಿಸಿ ನೈರುತ್ಯ ರೈಲ್ವೆ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ವೈ.ಗೋವರ್ಧನ್, ಲೋಹಿತೇಶ್ವರ, ಬಿಜೆಪಿ ರಾಜ್ಯ ಒಬಿಸಿ ಮೋರ್ಚಾದ ಸುರೇಶ್‌ಬಾಬು, ವಕೀಲ ಉಮೇಶ್, ಮದನ್, ಮಹದೇಶ್, ಪೆಮ್ಮಡಿ ರಾಜೇಶ್, ಸಂಘದ ವಿಭಾಗೀಯ ಅಧ್ಯಕ್ಷ ಸಿ.ವೈಶಾಖ್, ಹೆಚ್.ಸಿ. ಸಂತೋಷ್, ಕಾರ್ಯದರ್ಶಿಗಳಾದ ಜಗದೀಶ, ಕೆ.ಮರುಗನ್ ಮತ್ತಿತರರಿದ್ದರು.

ಇಂದು ವಾರ್ಷಿಕ ಮಹಾ ಸಭೆ

ಮೈಸೂರು: ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಇಲಾಖಾ ನೌಕರರ ಪತ್ತಿನ ಸಹಕಾರ ಸಂಘದ 2024–25ನೇ ಸಾಲಿನ ವಾರ್ಷಿಕ ಮಹಾಸಭೆಯು ಸೆಪ್ಟೆಂಬರ್ 20ರಂದು ಸಂಜೆ 4.30ಗಂಟೆಗೆ ಸಂಘದ ಅಧ್ಯಕ್ಷ ರಾಜಣ್ಣ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದ್ದು, ಎಲ್ಲಾ ಸದಸ್ಯರು ಸಭೆಯಲ್ಲಿ ಭಾಗವಹಿಸುವಂತೆ ಸಂಘದ ಮುಖ್ಯ ಕಾರ್ಯನಿರ್ವಾಹಕರಾದ ಹೆಚ್.ಎಸ್.ಮಹದೇವಸ್ವಾಮಿ ಕೋರಿದ್ದಾರೆ.

ಮೈ ಮೈಸೂರು ಐಡಿಯಾಥಾನ್‌ಗೆ ಅಭೂತಪೂರ್ವ ಸ್ಪಂದನೆ: ಇಂದು ಅಂತಿಮ ಆಯ್ಕೆ

ಮೈಸೂರು, ಸೆ.19– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದರ ಕಚೇರಿ ವತಿಯಿಂದ ಆಯೋಜಿಸಲಾಗುತ್ತಿರುವ 'ಮೈ ಮೈಸೂರು ಐಡಿಯಾಥಾನ್–ಐಡಿಯಾಸ್ ಫಾರ್ ಫ್ಯೂಚರ್, ವಿಷನ್(ಭವಿಷ್ಯದ ಕಲ್ಪನೆಗಳು, ದೃಷ್ಟಿಕೋನ) 2030'ಕ್ಕೆ ಅಭೂತಪೂರ್ವ ಪ್ರತಿಕ್ರಿಯೆ ದೊರೆತಿದ್ದು, ಶನಿವಾರ ಮಧ್ಯಾಹ್ನ ಅಂತಿಮ ಆಯ್ಕೆ ಪ್ರಕ್ರಿಯೆ ನಡೆಸಿದ ವಿಜೇತರನ್ನು ಘೋಷಣೆ ಮಾಡಲಾಗುವುದು.

ಈ ಬಗ್ಗೆ ಮಾಹಿತಿ ನೀಡಿರುವ ಆಯೋಜಕರು, ಮೈ ಮೈಸೂರು ಐಡಿಯಾಥಾನ್‌ಗೆ ಆಗಸ್ಟ್ 22 ರಂದು ಅರ್ಜಿ ಆಹ್ವಾನಿಸಲಾಗಿತ್ತು. ಅದರಂತೆ 2500ಕ್ಕೂ ಹೆಚ್ಚು ಕ್ರಿಯಾಶೀಲ ಅರ್ಜಿಗಳು ಬಂದಿದ್ದು, ಅವುಗಳಲ್ಲಿ ನೂರನ್ನು ಅಂತಿಮ ಆಯ್ಕೆ ಸುತ್ತಿಗೆ ಪರಿಗಣಿಸಲಾಗಿದೆ. ಶನಿವಾರ ಮಧ್ಯಾಹ್ನ 3 ಗಂಟೆ ನಂತರ ಅಂತಿಮ ಹಂತದ ಪರಿಶೀಲನೆ ನಡೆಸಿ, ಮೊದಲ 10 ಉತ್ತಮ ಯೋಜನೆಗಳನ್ನು ಆಯ್ಕೆ ಮಾಡಲಾಗುವುದು. ಸಂಜೆ 5.15ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಮೊದಲ ಮೂವರನ್ನು ವಿಜೇತರೆಂದು ಘೋಷಿಸಿ, ಮೊದಲ ಬಹುಮಾನ 25,000 ರೂ., ಎರಡನೇ ಬಹುಮಾನ 17,500 ರೂ. ಹಾಗೂ ಮೂರನೇ ಬಹುಮಾನ 12,000 ರೂ. ನೀಡಿ, ಅಭಿನಂದಿಸಲಾಗುವುದು.

ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಮೈಸೂರಿನ ಪ್ರಮುಖ ಗಣ್ಯರು ಆಯ್ಕೆ ಸಮಿತಿಯಲ್ಲಿದ್ದು, ಈ ಸಮಿತಿಯು ಮೂರು ಅತ್ಯುತ್ತಮ ಐಡಿಯಾಗಳನ್ನು ಆಯ್ಕೆ ಮಾಡಲಿದೆ. ಕೆಲವು ಐಡಿಯಾಗಳನ್ನು ಮೈಸೂರಿನ ಅಭಿವೃದ್ಧಿ ಹಾಗೂ ಸೌಂದರ್ಯೀಕರಣಕ್ಕೆ ಪೂರಕವಾಗಿ ಅನುಷ್ಠಾನಕ್ಕೆ ತರಲಾಗುವುದು ಎಂದು ತಿಳಿಸಿದ್ದಾರೆ.

ಒಮನ್ ವಿರುದ್ಧ ಭಾರತಕ್ಕೆ ಜಯ



ಅಬುಧಾಬಿ, ಸೆ.19(ವಿವಿಹೆಚ್)– ಏಷ್ಯಾಕಪ್–2025ರ ಟೂರ್ನಿಯ ಕೊನೆಯ ಲೀಗ್ ಪಂದ್ಯದಲ್ಲಿ ಭಾರತ ತಂಡ ಒಮನ್ ವಿರುದ್ಧ 21 ರನ್‌ಗಳ ಗೆಲುವು ದಾಖಲಿಸಿದೆ.

ಇಲ್ಲಿನ ಶೇಖ್ ಝಯೇದ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಭಾರತ ಮತ್ತು ಒಮನ್ ನಡುವಣ ಔಪಚಾರಿಕ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಭಾರತ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 188 ರನ್ ಗಳಿಸಿತು. ಈ ಮೊತ್ತ ಬೆನ್ನತ್ತಿದ ಒಮನ್ 20 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 167 ರನ್ ಗಳಿಸಿ 21 ರನ್ ಗಳಿಂದ ಸೋಲನುಭವಿಸಿತು.

ಟೀಂ ಇಂಡಿಯಾ ಇನ್ನಿಂಗ್ಸ್: ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಭಾರತ ತಂಡಕ್ಕೆ ನಿರೀಕ್ಷಿತ ಆರಂಭ ಸಿಗಲಿಲ್ಲ. ಆರಂಭಿಕ ಬ್ಯಾಟ್ಸ್‌ಮನ್ ಗಿಲ್ 5 ರನ್ ಗಳಿಸಿ ಬೌಲ್ಡ್ ಆಗಿ ಪೆವಿಲಿಯನ್ ಸೇರಿದರು. ಭರ್ಜರಿಯಾಗಿ ಬ್ಯಾಟ್ ಬೀಸಿದ ಅಭಿಷೇಕ್ ಶರ್ಮಾ ಕೇವಲ 15 ಎಸೆತಗಳಲ್ಲಿ 38 ರನ್ ಗಳಿಸಿ ಜಿತೇನ್‌ಗೆ ವಿಕೆಟ್ ಒಪ್ಪಿಸಿ ಹೊರ ನಡೆದರು. ಬಳಿಕ ಬಂದ ಹಾರ್ದಿಕ್ ಪಾಂಡ್ಯ 1 ರನ್ ಗಳಿಸಿದ್ದ ವೇಳೆ ಇಲ್ಲದ ರನ್ ಕದಿಯಲು ಹೋಗಿ ರನ್‌ಔಟ್ ಆದರು.

ಒಂದೆಡೆ ವಿಕೆಟ್ ಬೀಳುತ್ತಿದ್ದರೂ ಮತ್ತೊಂದೆಡೆ ಭದ್ರವಾಗಿ ನಿಂತು ಬ್ಯಾಟ್ ಬೀಸಿದ ಸಂಜು ಸ್ಯಾಮ್ಸನ್ 45 ಎಸೆತಗಳಲ್ಲಿ 3 ಬೌಂಡರಿ, 3 ಸಿಕ್ಸರ್ ಸಹಿತ 56 ರನ್ ಗಳಿಸಿ ಔಟಾದರು. ಉಳಿದಂತೆ ಅಕ್ಷರ್ ಪಟೇಲ್ 26(13), ಶಿವಂ ದುಬೆ 5(8), ತಿಲಕ್ ವರ್ಮಾ 29(18), ಅರ್ಶ್‌ದೀಪ್ 1(1) ರನ್ ಗಳಿಸಿ ಪೆವಿಲಿಯನ್ ಸೇರಿದರು. ಹರ್ಷಿತ್ ರಾಣಾ ಅಜೇಯ 13(8) ರನ್ ಕಲೆಹಾಕಿದರೇ, ಕುಲ್ದೀಪ್ ಅಜೇಯ 1(3) ರನ್‌ಗಳಿಸಿ ಸ್ಕ್ರೀಜ್‌ನಲ್ಲಿದ್ದರು. ಒಮನ್ ಪರ ಶಾ ಫೈಸಲ್, ಜಿತೇನ್ ರಾಮನಂದಿ ಹಾಗೂ ಅಮೀರ್ ಕಲೀಂ ತಲಾ ಎರಡು ವಿಕೆಟ್ ಕಬಳಿಸಿ ಗಮನ ಸೆಳೆದರು.

ಒಮನ್ ಇನ್ನಿಂಗ್ಸ್: ಭಾರತ ನೀಡಿದ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ಒಮನ್‌ಗೆ ಉತ್ತಮ ಆರಂಭ ದೊರೆಯಿತು. ನಾಯಕ ಜತಿಂದರ್ ಸಿಂಗ್ 32(33) ರನ್‌ಗಳಿಸಿ ಔಟಾದರು. ಅಮೀರ್ ಕಲೀಂ ಉತ್ತಮವಾಗಿ ಬ್ಯಾಟ್ ಮಾಡಿ 46 ಎಸೆತಗಳಲ್ಲಿ 7 ಬೌಂಡರಿ, 2 ಸಿಕ್ಸರ್ ಸಹಿತ 64 ರನ್ ಬಾರಿಸಿ ಗಮನ ಸೆಳೆದರು. ಇವರಿಗೆ ಸಾಥ್ ನೀಡಿದ ಹಮ್ಮದ್ ಮಿರ್ಜಾ 33 ಎಸೆತಗಳಲ್ಲಿ 5 ಬೌಂಡರಿ, 2 ಸಿಕ್ಸರ್ ಸಹಿತ 51 ರನ್ ಕಲೆಹಾಕಿ ಭಾರತ ವಿರುದ್ಧ ಕಡಿಮೆ ಎಸೆತದಲ್ಲಿ ಅರ್ಧಶತಕ ದಾಖಲಿಸಿದ ಆಟಗಾರ ಎಂದು ದಾಖಲೆ ಬರೆದರು.

ಬಳಿಕ ಬಂದ ವಿನಾಯಕ್ ಶುಕ್ಲಾ 1(2) ರನ್ ಗಳಿಸಿ ಔಟಾಗಿ ಹೊರನಡೆದರು. ಜಿತೇನ್ ರಾಮನಂದಿ ಅಜೇಯ 12(5) ರನ್ ಗಳಿಸಿ ಸ್ಕ್ರೀಜ್‌ನಲಿದ್ದರು. 148 ರನ್‌ಗಳಿಗೆ ಕೇವಲ ಒಂದೇ ವಿಕೆಟ್ ಕಳೆದುಕೊಂಡು ಉತ್ತಮವಾಗಿ ಆಡುತ್ತಿದ್ದ ಒಮನ್ ದಿಢೀರ್ ಕುಸಿತ ಕಂಡಿತು. 19 ರನ್ ಗಳಿಸುವಷ್ಟರಲ್ಲಿ ಪ್ರಮುಖ 3 ವಿಕೆಟ್ ಕಳೆದುಕೊಂಡು ಸೋಲಿನ ಸುಳಿಗೆ ಸಿಲುಕಿತು. ಆ ಮೂಲಕ 21 ರನ್ ಗಳಿಂದ ಸೋಲೊಪ್ಪಿಕೊಂಡಿತು.

ಟೀಂ ಇಂಡಿಯಾ ಪರ ಹಾರ್ದಿಕ್ ಪಾಂಡ್ಯ, ಹರ್ಷಿತ್ ರಾಣಾ, ಅರ್ಶ್‌ದೀಪ್ ಸಿಂಗ್ ಮತ್ತು ಕುಲ್ದೀಪ್ ಯಾದವ್ ತಲಾ ಒಂದೊಂದು ವಿಕೆಟ್ ಪಡೆದರು.

ನಂಜನಗೂಡು ತಾಲೂಕು ಗಾಣಿಗರ ಸೌಹಾರ್ದ ಸಹಕಾರಿ ಸಂಘ ನಿ., ನಂಜನಗೂಡು
ನಂ. 3647, C/O ಬಸವಣ್ಣ, 7ನೇ ಕ್ರಾಸ್, ಎಕ್ಸ್‌ಟೆನ್ಷನ್, ನಂಜನಗೂಡು–571 301

ಸಹಕಾರಿ ಬಂಧುಗಳೇ

ನಮ್ಮ ಸಂಘದ 2024–2025ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯು ದಿನಾಂಕ: 24–09–2025 ರಂದು ಬುಧವಾರ ಬೆಳಿಗ್ಗೆ 10.00 ಘಂಟೆಗೆ, ಸ್ಥಳ: ಹಾಸನಾಂಬ ಫಂಕ್ಷನ್ ಹಾಲ್ ಆರ್.ಪಿ ರಸ್ತೆ, 2ನೇ ಕ್ರಾಸ್, ಕೆ.ಇ.ಬಿ ಎದುರು, ನಂಜನಗೂಡು. ಇಲ್ಲಿ ಏರ್ಪಡಿಸಲಾಗಿದೆ. ಈಗಾಗಲೇ ನಮ್ಮ ಸೊಸೈಟಿಯ ಎಲ್ಲಾ ಸದಸ್ಯರುಗಳಿಗೆ ಅಂಚೆಯ ಮೂಲಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಕಳುಹಿಸಲಾಗಿದೆ. ಆದರೂ ಅನೇಕ ಕಾರಣಗಳಿಂದಾಗಿ ಯಾರಿಗಾದರೂ ಆಹ್ವಾನ ಪತ್ರಿಕೆಯು ತಲುಪದಿದ್ದಲ್ಲಿ ಇದನ್ನೇ ಆಹ್ವಾನ ಪತ್ರಿಕೆ ಎಂದು ತಿಳಿದು ಮೇಲೆ ತಿಳಿಸಿರುವ ದಿನಾಂಕದಂದು ಮಹಾ ಸಭೆಗೆ ಹಾಜರಾಗಬೇಕಾಗಿ ವಿನಂತಿ

ಇಂತಿ ಆಡಳಿತ ಮಂಡಳಿಯ ಪರವಾಗಿ
ಸಹಿ/– ಕಾರ್ಯದರ್ಶಿ

ಕರ್ನಾಟಕ ಸರ್ಕಾರ
ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರ ಕಛೇರಿ, ಮೈಸೂರು ಜಿಲ್ಲೆ, ಮೈಸೂರು
ಡಾ॥ ಬಾಬು ಜಗಜೀವನರಾಂ ಭವನದ ಕಟ್ಟಡ, ಆದಿಪಂಪ ರಸ್ತೆ, ನಾರಾಯಣಸ್ವಾಮಿ ಬ್ಲಾಕ್, ಪಡುವಾರಹಳ್ಳಿ ಪೂರ್ವ ಬಡಾವಣೆ, ಮೈಸೂರು–12
ದೂ.ಸಂ.:0821–2344661 ಇ–ಮೇಲ್:dswomysore9@gmail.com

ಸಂ:ಜಂ.ನಿ:ತಸ:ಸಿಆರ್:5:2025–26 ದಿನಾಂಕ: 17–09–2025

ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಮೈಸೂರು ಜಿಲ್ಲೆಯ ಎಲ್ಲಾ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಸಮಾಜ ಕಲ್ಯಾಣ ಇಲಾಖೆ ಮೆಟ್ರಿಕ್ ಪೂರ್ವ/ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ ಸ್ಯಾನಿಟರಿ ನ್ಯಾಪಕಿನ್ ಪ್ಯಾಡ್‌ಗಳ ಪೂರೈಕೆಗಾಗಿ e-procurement ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅರ್ಜಿಗಳನ್ನು ಇ–ಪ್ರಕ್ಯೂರ್‌ಮೆಂಟ್ website: http://kppp.karnataka.gov.in ಮೂಲಕ ಡೌನ್ ಲೋಡ್ ಮಾಡಿಕೊಳ್ಳಬಹುದು. ಇ–ಟೆಂಡರ್ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ:30.09.2025 ರ ಸಮಯ 5.30 ಗಂಟೆಯವರೆಗೆ.

ಸಹಿ/–
ಜಂಟಿ ನಿರ್ದೇಶಕರು
ಸಮಾಜ ಕಲ್ಯಾಣ ಇಲಾಖೆ
ಮೈಸೂರು ಜಿಲ್ಲೆ, ಮೈಸೂರು

ವಾಸಾಸಂಇ/ಮೈಸೂರು/982/ಎಸ್‌ಎಸ್‌ಸಿ/2025–26